ಬೆಲೆ ಎರಡು ಆಣೆ

ಕರ್ಮವೀರ

ಸಂಪಾದಕರು:
ಹ. ರಾ. ಪುರೋಹಿತ, ಎಂ. ಎ.

ಅಖಿಲ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ವಾರಪತ್ರಿಕೆ


Editor,
H. R. PUROHIT, M. A.

[ಸಂಪುಟ ೨೦] ಹುಬ್ಬಳ್ಳಿ, ಸೋಮವಾರ ತಾರೀಖು ೧೨—೪—೧೯೪೮ [ಸಂಚಿಕೆ ೧]

ಭಾರತದ ಮುಖ್ಯಮಂತ್ರಿ



ನೀತಿಯೇ ವಿಶ್ವಶಾಂತಿಯ ನೆಲೆಗಟ್ಟು, ಮಹಾತ್ಮಾ ಗಾಂಧಿಯವರಿತ್ತ ಅಹಿಂಸೆಯೇ ದಿವ್ಯಾಸ್ತ್ರ, ಈ ಸಾಧನಗಳಿಂದ ವಿಶ್ವಸರಕಾರದ ಸ್ಥಾಪನೆಯೇ ಮಾನವ ಜನಾಂಗದ ಗುರಿಯಾಗಲಿ ಎಂದು ಪಂಡಿತ ಜವಾಹರಲಾಲರು ಅಮೇರಿಕೆಗೆ ಸಂದೇಶವಿತ್ತಿದ್ದಾರೆ.



Gandhi Tagore and Nehru.

By K. R. Kripalani, Publishers, Hind Kitabs Ltd. Bombay. Pages 104. Price Rs. 1/8.

ಹಿಂದುಸ್ತಾನದ ಮೂವರು ವಿಶ್ವವಿಖ್ಯಾತ ವಿಭೂತಿಗಳನ್ನು ಕುರಿತು ಬರೆದ ಪುಸ್ತಕವಿದು. ಕವಿಸಮ್ರಾಟ ರವೀಂದ್ರನಾಥರ, ಮಹಾತ್ಮರೆನಿಸಿಕೊಂಡ ಗಾಂಧಿಯವರ, ರಾಜಕಾರಣಕ್ಕಾಗಿ ಸಿದ್ಧಾರ್ಥರನ್ನು ಸರಿಗಟ್ಟುವ ತ್ಯಾಗಿ ಜವಾಹರಲಾಲರ ಅಂತರಂಗವನ್ನು ಅತಿ ಸಮೀಪದಿಂದ ಅರಿತು ತೂಗಿ ಹೋಲಿಸಿ ಬರೆದ ಈ ನಿರೂಪಣೆ ತುಂಬ ಆಕರ್ಷಕವಾಗಿದೆ. ಈ ಪುಸ್ತಕವನ್ನು ಬರೆದ ಶ್ರೀ. ಕೆ. ಆರ್. ಕೃಪಲಾನಿಯವರು ವಿಶ್ವಭಾರತಿಯಲ್ಲಿ ಕಳೆದ ೧೫—೨೦ ವರ್ಷಗಳಿಂದ ಇದ್ದವರು. ಎಂದೇ ಇವರ ನಿರೂಪಣೆಯಲ್ಲಿ ಅಧಿಕಾರಯುತ ವಾಣಿಯು ಕೇಳಲುಗೊಡುತ್ತದೆ. 'ಟಾಗೋರ ಮತ್ತು ಸೋವಿಯೆಟ್ ರಶಿಯಾ' ಎಂಬ ಪ್ರಕರಣ ಓದುವಾಗ ರಶಿಯಾದ ರಾಜಕಾರಣದ ನಿಲುವೆಯನ್ನು ರವೀಂದ್ರರು ಹೇಗೆ ಹೇಗೆ ಕಂಡಿದ್ದಾರೆ ಎಂಬುವದನ್ನು ಅರಿಯಲು ಮನ ಹಾತೊರೆಯುತ್ತದೆ. ರಶಿಯಾದಿಂದ ಮರಳುತ್ತಲೇ ಶಾಂತಿನಿಕೇತನದಲ್ಲಿ ರಶಿಯಾದ ತತ್ವಗಳನ್ನು ಪ್ರಯೋಗಿಸಿ ನೋಡಬೇಕೆಂಬ ಚಪಲ ರವೀಂದ್ರರಲ್ಲಿ ಉಂಟಾಗಿ ಹೋಯಿತು. "ರಶಿಯಾ ನೋಡದಿದ್ದರೆ ನನ್ನ ಜೀವನಯಾತ್ರೆ ಅಪೂರ್ಣವಾಗಿರುತ್ತಿತ್ತು." ಎಂದು ರವೀಂದ್ರರು ಒಂದು ಪತ್ರದಲ್ಲಿ ಉದ್ಗಾರ ತೆಗೆದಿದ್ದಾರೆ. ರವೀಂದ್ರರು ಇಲ್ಲಿ ಪ್ರಗತಿಶೀಲರಿಗಿಂತ ಪ್ರಗತಿಶೀಲರಾಗಿ ಕಾಣುತ್ತಾರೆ.

ತೋರಿಕೆಗೆ ಈ ಮೂವರ ವ್ಯಕ್ತಿತ್ವದಲ್ಲಿ ವಿರೋಧಾಭಾಸ ಕಂಡರೂ ಈ ಮೂವರನ್ನೂ ಪ್ರಚೋದಿಸುವ ಸತ್ವ ಕಾರಣ ಒಂದೇ ಮತ್ತು ಗಂತವ್ಯಸ್ಥಾನ ಆದರ್ಶ ಒಂದೇ ಎಂಬುದು ಒಡೆದು ಕಾಣುವಹಾಗಿದೆ.

ಲೇಖಕರು ಜವಾಹರಲಾಲರ ಬಗ್ಗೆ ಮಾತನಾಡುತ್ತ, "ಅವರು ಜನರ ಸೇವೆ ಮಾಡುವದು ಜನರಲ್ಲಿ ದೇವಾಂಶವನ್ನು ಕಾಣುವ ಕಾರಣದಿಂದಲ್ಲ. ಜವಾಹರರಿಗೆ ತನ್ನ ದೈವ ತನ್ನ ಜನರೊಂದಿಗೆ ಹೊಂದಿ ಹೆಣೆದುಕೊಂಡಿದೆ ಎಂಬ ಅರಿವಿದೆ. ಬುದ್ಧಿವಂತಿಕೆಯಿದೆ." ಎಂದು ಯಥಾರ್ಥವಾಗಿಯೇ ಹೇಳಿದ್ದಾರೆ ಜವಾಹರರಿಗೆ ಗಾಂಧೀಜಿಯು ಆತ್ಮವೇತ್ತೃತೆಯನಾಗಲೀ ನೈತಿಕ ಪರಾಕಾಷ್ಠೆಯನಾಗಲೀ ಅಯುಕ್ತವಾಗಿರದಿದ್ದರೂ ಅರ್ಜುನ ಸಮಯೋಚಿತನೆಂದು ಅವರಿಗೆ ಯಾರೂ ಅನ್ನದಿರರು. ಈ ಪುಸ್ತಕದಲ್ಲಿ ಅನುಷಂಗಿಕವಾಗಿ ಹಿಂದುಸ್ತಾನದ ಹಿತೈಷಿ ದೀನಬಂಧು ಸಿ. ಎಫ್. ಎಂಡ್ರೂಜ, ಫ್ರಾನ್ಸದ ವಿಖ್ಯಾತ ವೇದಾಂತಿ ಮತ್ತು ಶ್ರೇಷ್ಠ ಸಾಹಿತ್ಯಕರಾದ ರೋಮಾ ರೋಲಾ, ಇಂಗ್ಲಂಡದ ಕಲಾಕೋವಿದರಾದ ರೋಥೆನ್‌ಸ್ಟೈನ್, ಸಿಂಧದ ಕವಿ ಶಹಾ ಲತೀಫ ಮೊದಲಾದವರ ಬಗ್ಗೆಯೂ ಬೇರೆ ಬೇರೆ ಸ್ವತಂತ್ರ ಪ್ರಕರಣಗಳಲ್ಲಿ ಉಲ್ಲೇಖವುಂಟು. ಇಂಗ್ಲೀಷ ಭಾಷೆ ಬಲ್ಲವರಿಗೆ ಇದೊಂದು ಸ್ವಾದಿಷ್ಟ ಸಾಹಿತ್ಯವೇ ಸರಿ.

Gandhigrams.

By S. R. Tikekar Publishers, Hind Kitabs Limited, Bombay. Pages 92. Price Rs. 2/-

ಮಹಾತ್ಮಾ ಗಾಂಧಿಯವರ ಅಪಾರ ವಿಚಾರ ಸಾಗರದಿಂದ ಪರಿಶೋಧಿಸಿ ತೆಗೆದ ಸುಭಾಷಿತಗಳ ಸಂಗ್ರಹವಿದು. 'ಮಹಾತ್ಮರ ಮನೋರಂಗ' ಎಂಬ ಈ ಮೊದಲು ಪ್ರಕಟವಾದ ಇನ್ನೊಂದು ಪುಸ್ತಕದಲ್ಲಿ ಮಹಾತ್ಮರ ವಿಚಾರಗಳ ಸಾರಸರ್ವಸ್ವವನ್ನು ಹೀರಬಹುದಾದರೆ ಈ ಚಿಕ್ಕ ಪುಸ್ತಕದಲ್ಲಿ ಅವರ ವಾಕ್ಯ ಪುಷ್ಪಫಲಗಳ ವೈಭವವನ್ನು ಕಾಣಬಹುದು. ಪಂ. ಜವಾಹರಲಾಲರ ಬುದ್ಧಿಮತ್ತೆಯ ಬಗ್ಗೆ, "ಇತಿಹಾಸದ ಹಾಗೂ ಸಮಕಾಲೀನ ಅಂತರ್ದೇಶೀಯ ಆಗುಹೋಗುಗಳ ಅಭ್ಯಾಸದಲ್ಲಿ ಇವರನ್ನು ಸರಿಗಟ್ಟುವವರಿಲ್ಲ" ಎಂದು ಹೇಳಿದ್ದಾರೆ. "ಪತ್ರಿಕಾ ವ್ಯವಸಾಯಗಾರರು ತಿರುಗಾಡುವ ಪಿಡುಗಾಗಿ ಕೆಲ ಸಂದರ್ಭಗಳಲ್ಲಿ ಮಹಾತ್ಮರಿಗೆ ಕಂಡದ್ದರಲ್ಲಿ ಏನೂ ಸೋಜಿಗವಿಲ್ಲ. ಈ ಬಗೆಯ ಅನುಭವವು ಈ ದಿನಗಳಲ್ಲಿ ಎಲ್ಲರಿಗೂ ಬಂದು ಹೋಗಿದೆ "ಶಂಕರಾಚಾರ್ಯರೆಂದರೆ ತಾರ್ಕಿಕರ ಮುಕುಟಮಣಿಯೆಂದೂ ಜಾಗತಿಕ ನಿಖಿಲಸಾಹಿತ್ಯದಲ್ಲಿ ಶಾಂಕರ ತತ್ವವನ್ನು ಮೀರುವಂತಹದಾವುದೂ ಇಲ್ಲ"ವೆಂದೂ ಇನ್ನೊಂದು ಸಂದರ್ಭದಲ್ಲಿ ಹೇಳಿದ್ದಾರೆ.

ವಿಚಾರಗರ್ಭಿತ ಮಾತುಗಳನ್ನು ಆಡಬೇಕೆಂದು ಒಡನುಡಿಸಿದ ಮಾತುಗಳಿವಲ್ಲ ಸಂದರ್ಭೋಚಿತ ಬರೆವಣಿಗೆಯಲ್ಲಿ ಸಹಜವಾಗಿ ಬಂದಂತಹ ವಾಕ್ಯಗಳನ್ನೇ ಇಲ್ಲಿ ಸಂಪಾದಿಸಲಾಗಿದೆ. ಈ ವಚನಗಳಲ್ಲಿ ಅಡಕವಾದ ಗುರುಗಂಭೀರ ಸತ್ಯಾಂಶವನ್ನು ಒಡನುಡಿದವರ ಸಾಧನಾನುಭವಗಳ ಬಲದಿಂದ ಓದಿದವರೆಲ್ಲ ಅನಾಯಾಸವಾಗಿ ಗ್ರಹಿಸುವ ಹಾಗಿದೆ ಸರ್ವಸಂಗ್ರಾಹ್ಯ ಪುಸ್ತಕವಿದು.

ಸ್ವಾಮಿಜಿಯ ಪತ್ರಗಳು

ಅನುವಾದಕರು, ಕೋ. ಚನ್ನಬಸಪ್ಪ. ಪ್ರಕಾಶಕರು, ಎಸ್. ಎಸ್. ಎನ್. ಪುಸ್ತಕಪ್ರಕಟನಾಲಯ, ಹೊಸಮಾರ್ಕೆಟ ಬೆಂಗಳೂರ ಪುಟಗಳು ೧೩೮ ಬೆಲೆ ೧ ರೂ. ೮ ಆಣೆ.

ಇದು ಶ್ರೀ ಸ್ವಾಮಿ ವಿವೇಕಾನಂದರ ಪತ್ರಗಳ ಅನುವಾದ. ಸ್ವಾಮಿ ವಿವೇಕಾನಂದರ ಅಪಾರ ಸಾಹಿತ್ಯ ಸಾಗರದಲ್ಲಿ ಅವರ ಪತ್ರಪ್ರಪಂಚವು ಅತ್ಯಂತ ಆಕರ್ಷಕ ಬಹುದಾಗಿದೆ. ಇಂತಹ ಮಹಾನುಭಾವರ ಕೃತಿಗಳಿಗೆ ಯಾರ ವಿಮರ್ಶೆಯು ಅಗತ್ಯವೂ ಇಲ್ಲ. ಈ ಪತ್ರಗಳಲ್ಲಿ ಎಷ್ಟೋ ವೈಯಕ್ತಿಕ ಸಂಗತಿಗಳನ್ನು ಅರಿಯಬಹುದು. ತಮ್ಮ ಕೊಬ್ಬು ಕರಗಿಸಿಕೊಳ್ಳಲು ಹಣ್ಣು ಹಂಪಲ ತಿಂದು ಇರುವದಾಗಿ ಸ್ವಾಮಿಯವರು ಒಂದು ಪತ್ರದಲ್ಲಿ ಹೇಳಿದ್ದಾರೆ. ಒಮ್ಮೆ ಶ್ರೀರಾಮಕೃಷ್ಣ ಪರಮಹಂಸರ ಜಯಂತಿಯ ಕಾಲಕ್ಕೆ ದಕ್ಷಿಣೇಶ್ವರಕ್ಕೆ ಬಹುಜನ ವೇಶ್ಯೆಯರು ಬಂದರಂತೆ. ರ ಎಂಬವರು ಇದು ತಮಗೆ ರುಚಿಸಲಿಲ್ಲವೆಂದು ದೂರಿ ಶ್ರೀ ವಿವೇಕಾನಂದರಿಗೆ ಒಂದು ಪತ್ರ ಬರೆದರಂತೆ ಈ ಬಗ್ಗೆ ಸ್ವಾಮಿಗಳು "ದಕ್ಷಿಣೇಶ್ವರದಂಥ ಮಹಾಯಾತ್ರಾಸ್ಥಳಕ್ಕೆ ಸ್ತ್ರೀಯರನ್ನು ಬರಗೊಡದಿದ್ದರೆ ಅವರು ಮತ್ತೆಲ್ಲಿಗೆ ಹೋಗಬೇಕು? ಭಗವಂತನು ಅವತರಿಸುವದು ಪಾಪಿಗಳಿಗಾಗಿಯಲ್ಲದೆ ಪುಣ್ಯವಂತರಿಗಾಗಿ ಅಲ್ಲ" ಎಂದು ಒಂದು ಪತ್ರದಲ್ಲಿ ತಮ್ಮ ಅಸಂದಿಗ್ಧ ತೀರ್ಮಾನ ಹೇಳಿದ್ದಾರೆ ಇನ್ನೊಂದು ಸಂದರ್ಭದಲ್ಲಿ ಅಸ್ಪೃಶ್ಯತೆಯ ಪ್ರಸ್ತಾಪವೆತ್ತಿ, "ನಮ್ಮ ಕೆಲಸವಿದ್ದಾಗ ಬ್ರಾಹ್ಮಣೇತರರನ್ನು ಮುಟ್ಟಿದರೆ ದೋಷವಿಲ್ಲ. ಕೆಲಸದ ತರುವಾಯ ಸ್ನಾನ ಮಾಡಿದರಾಯಿತು." ಎಂದು ಸಲಹೆ ಕೊಟ್ಟಿದ್ದಾರೆ. ಇದರಂತೆ ಬಾಲ್ಯ ವಿವಾಹವನ್ನು ಹಳಿದಿದ್ದಾರೆ ಹೀಗೆ ಹೇಳುವ ಮಾತುಗಳು ವೈಯಕ್ತಿಕ ಹಾಗೂ ಮನರಂಜಕ ಸನ್ನಿವೇಶಗಳಲ್ಲಿ ಹೆಣೆದುಕೊಂಡಿರುವದರಿಂದ ಹೇಳಿದ ಮಾತುಗಳು ನೇರವಾಗಿ ಎದೆಯ ಆಳಕ್ಕೆ ತಾಕುತ್ತವೆ. ಅನುವಾದಕರು ಒಳ್ಳೆ ದಕ್ಷತೆಯಿಂದ ಕೈಕೊಂಡ ಕಾರ್ಯವನ್ನು ನಿರ್ವಹಿಸಿದ್ದಾರೆ. ಬಳಸಿದ ಭಾಷೆ ಸುಲಭ, ಶೈಲಿಯು ನಿರರ್ಗಲ. ಈ ಪುಸ್ತಕದ ಅಡಿಯಲ್ಲಿ ಅಲ್ಲಲ್ಲಿ ಕೊಟ್ಟ ಸಂದರ್ಭೋಚಿತ ಟಿಪ್ಪಣೆಗಳಿಂದ ಒಂದು ಮೆರಗುಂಟಾಗಿದೆ. ಸರ್ವರೂ ಸಂಗ್ರಹಿಸತಕ್ಕ ಪುಸ್ತಕವಿದು. ಮುದ್ರಣ ಅಂದವಾಗಿದೆ. ಕಾಗದವೂ ಒಳ್ಳೆಯದು. ಈ ಮಾನದಿಂದ ಇದಕ್ಕಿಟ್ಟ ಬೆಲೆ ಹೆಚ್ಚಲ್ಲ.

A Constitution for Mysore.

ಪ್ರಕಾಶಕರು— ಕಾರ್ಯದರ್ಶಿ, ರ್‍ಯಾಡಿಕಲ್ ಡೆಮೊಕ್ರಾಟಿಕ್ ಪಾರ್ಟಿ ಮೈಸೂರು ಪುಟ ೩೧, ಬೆಲೆ ಮೂರಾಣೆ

ಪ್ರಭುತ್ವದಲ್ಲಿ ಕಾರ್ಯದರ್ಶಿಗಳು ಜನತೆಯ ಮುಂದೆ ವಿವಿಧ ರಾಜಕೀಯ ಪಕ್ಷಗಳು ತಮ್ಮ ತಿಳುವಳಿಕೆಯ ಪ್ರಕಾರ ಉತ್ತಮವೆನಿಸುವ ಘಟನಾ ಭೇದವನ್ನು ಇಟ್ಟರೆ ಜನರಿಗೆ ಆಯ್ದುಕೊಳ್ಳುವ ಅವಕಾಶವೊದಗುತ್ತದೆಂಬ ಮಾತು ಅಕ್ಷರಶಃ ಸತ್ಯವಿದೆ. ಈ ದೃಷ್ಟಿಯಿಂದ ಈ ಚಿಕ್ಕ ಹೊತ್ತಿಗೆ ಪ್ರಯೋಜನಕಾರಿಯಾಗಿದೆ. ಇದು ರಡಿಕ್ಯಾ. ಡೆ ಪಕ್ಷದವರ ಮತದ ಪ್ರಕಾರ ಮೈಸೂರಿಗೆ ಉತ್ತಮವೆನಿಸುವ ಘಟನೆಯ ಸ್ಥೂಲ ಪರಿಚಯವಿದೆ. ಈ ವಿಷಯಗಳ ಮೇಲೆ ಪಕ್ಷದ ಬೆಳಕನ್ನು ಬೀರಲಾಗಿದೆ. ಪುಸ್ತಕವನ್ನು ಅಚ್ಚುಕಟ್ಟಾಗಿ ಮುದ್ರಿಸಲಾಗಿದೆ.

ಗಾಂಧಿ ಸ್ವರಾಜ್ಯ ಆಶ್ರಮ

ಇದು ಸಂಗೂರ ಆಶ್ರಮದ ವಾರ್ಷಿಕ ವರದಿ. ಸಂಚಾಲಕರು, ಶ್ರೀಮತಿ ವೀರಮ್ಮ ಕರಿಯಪ್ಪ ಯರೇಶೀಮಿ, ಮತ್ತು ಶ್ರೀ ಕರಿಯಪ್ಪ ನೀಲಪ್ಪ ಯರೇಶೀಮಿ

ಈ ಆಶ್ರಮದ ಸಂಚಾಲಕರೀರ್ವರೂ ಗಾಂಧೀಜಿಯವರ ಆಶ್ರಮದಲ್ಲಿದ್ದು ಸೇವಾದೀಕ್ಷೆಯನ್ನು ಹೊಂದಿದವರು. ಇವರು ಸಂಗೂರಲ್ಲಿ ತೆರೆದ ಆಶ್ರಮದ ಮುಖಾಂತರ ಅನೇಕ ಸಾರ್ವಜನಿಕ ಕಲ್ಯಾಣದ ಕಾರ್ಯಗಳು ಜರಗುತ್ತವೆ. ಈ ಆಶ್ರಮಕ್ಕೆ ಸರ್ವರೂ ಸರ್ವವಿಧ ಸಹಾಯ ಸಲ್ಲಿಸತಕ್ಕದ್ದೆಂದು ನಾವು ಹೇಳಬಯಸುತ್ತೇವೆ.

೧೮೫೭ ಅಥಾತ್ ಬಂಡಾಯದ ಇತಿಹಾಸ

ಮಿಂಚಿನಬಳ್ಳಿಯ ೧೦ ನೇ ವರ್ಷದ ೧ನೇ ೨ನೇ ಕುಡಿಗಳು. ಬರೆದವರು, ಶ್ರೀ ಕೃ. ಗೋ. ಜೋಶಿ, ಬಿ. ಎ. ಬಿ. ಟಿ ಪ್ರಕಾಶಕರು, ಶ್ರೀ ಬಾಳಾಚಾರ್ಯ ಗುರಾಚಾರ್ಯ ಅವಧಾನಿ, ಮಿಂಚಿನಬಳ್ಳಿಚಾವಡಿ ಧಾರವಾಡ. ಪುಟಗಳು, ೩೩೯+೧೨. ಬೆಲೆ, ಸಾದಾಪ್ರತಿ ೪ ರೂ. ಉತ್ತಮ ಪ್ರತಿ ೫ ರೂ

ವೀರರನ್ನು ಸ್ವಾತಂತ್ರ್ಯಸಮರಕ್ಕೆ ಅಣಿಗೊಳಿಸಲು ಈ ಪುಸ್ತಕ ಈ ಪೂರ್ವದಲ್ಲಿಯೇ ಪ್ರಕಟವಾಗಬೇಕಿತ್ತು; ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕ ನಂತರ ಇದು ಹೊರಬಂದಿತು ಎಂದು ಸಂಪಾದಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ನಮ್ಮ ಕುಂದುಕೊರತೆಗಳನ್ನು ಕಂಡು ಹಿಡಿದು ಈಗ ಎಲ್ಲರೂ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ತೊಡಗಬೇಕಾದ ಈ ಸಂಧಿಕಾಲದಲ್ಲಿ ನಮ್ಮ ಪ್ರಾಚೀನ ಮಹಾಪುರುಷರ ಸ್ಫೂರ್ತಿಯು ನಮ್ಮ ಜೀವನವಾಗಬೇಕಾಗಿದೆ. ಅಂತಹ ಸಂದರ್ಭದಲ್ಲಿ ಈ ಪುಸ್ತಕ ಹೊರಬಂದುದೇ ಒಂದು ಭಾಗ್ಯವೆಂಬುದಾಗಿ ಸಂಪಾದಕರು ಒಂದು ವಿಧದ ಕೃತಾರ್ಥತೆಯ ಪರಿತೃಪ್ತಿಯನ್ನೂ ತೋರ್ಪಡಿಸಿದ್ದಾರೆ. ಸಂಪಾದಕರ ಈ ಸಮಾಧಾನ ಅತ್ಯಂತ ಯುಕ್ತವಾದುದೇ ಎಂದು ನಾವಾದರೂ ಹೇಳಬಯಸುತ್ತೇವೆ ಮಿಂಚಿನ ಬಳ್ಳಿಯು ಪ್ರಕಟಿಸುತ್ತಿರುವ ಪುಸ್ತಕಗಳು ಒಂದಿಲ್ಲೊಂದು ವೈಶಿಷ್ಟ್ಯದಿಂದ ಕೂಡಿದವೇ ಆಗಿವೆ ಪರಂಪರೆಗೆ ತಕ್ಕಂತೆ ಈ ಪುಸ್ತಕವಾದರೂ ಗುರು ಗಂಭೀರವಾದ ಐತಿಹಾಸಿಕ ಸನ್ನಿವೇಶಗಳಿಂದಲೂ ಘಟನೆಗಳಿಂದಲೂ ಪುಸ್ತಕದ ಪುಟಪುಟವೂ ತುಂಬಿತುಳುಕುತ್ತದೆ. ಇದರಲ್ಲಿನ ಸಂದರ್ಭ ಸನ್ನಿವೇಶಗಳನ್ನು ಬಳಸಿ ನಾಟಕಕಾರರು ಕಾದಂಬರಿಕಾರರು ಕಥೆಗಾರರು ಅದ್ಭುತ ರಮ್ಯವಾದ ರೋಮಾಂಚಕಾರಿಯಾದ ನಾಟಕಗಳನ್ನು, ಕಾದಂಬರಿಗಳನ್ನು, ಕಥೆಗಳನ್ನು ಬರೆಯಬಹುದಾಗಿದೆ. ಪುಸ್ತಕವು ದುರ್ಮಿಳವಾದ ೧೩ ಚಿತ್ರಗಳಿಂದಲೂ ಸ್ವಯಂಸ್ಪಷ್ಟವಾದ ದ್ವಿವರ್ಣದ ನಕಾಶೆಯಿಂದಲೂ ಅಲಂಕೃತವಾಗಿದೆ. ಅವರಣ ಪತ್ರದಮೇಲೆ ಬಿಹಾರದ ಕ್ರಾಂತಿವೀರ ರಾಜಕುವರ ಸಿಂಹರ ಚಿತ್ರವಿದೆ. ಇದನ್ನು ಬರೆದ ಶ್ರೀ ಜೋಶಿಯವರು ಈ ಬಗ್ಗೆ ಬಹಳ ದುಡಿದಿದ್ದಾರೆ. ಅವರ ಶ್ರಮದ ಫಲವಾಗಿ ಈ ಪುಸ್ತಕ ಅನೇಕ ಸಂಗತಿಗಳಿಂದ ಒಡಗೂಡಿ ಹೊರಬಂದಿದೆ. ಲೇಖಕರ ಮತ್ತು ಪ್ರಕಾಶಕರ ಪರಿಶ್ರಮದ ಫಲವನ್ನು ಸಕಲರೂ ಅಗತ್ಯವಾಗಿ ಹೊಂದಬೇಕು ಸಂಗ್ರಹಿಸಿ ಓದಿ ಮತ್ತೆ ಮತ್ತೆ ಅವಲೋಕಿಸತಕ್ಕ ಪುಸ್ತಕವಿದು. ಇದನ್ನು ಪ್ರಕಟಿಸಿದ್ದಕ್ಕೆ ಮಿಂಚಿನ ಬಳ್ಳಿಯ ಸಂಪಾದಕರನ್ನು ಅಭಿನಂದಿಸುತ್ತೇವೆ.

ನನ್ನ ಕಾವ್ಯ

೧

ಇದು ಭೋಗ್ಯವೇ ಇರಲಿ,
ಇದು ತ್ಯಾಜ್ಯವೇ ಇರಲಿ,
ಸಾಮಾನ್ಯವೇ ಇರಲಿ,
ಇದು ನನ್ನ ಕಾವ್ಯ.
ಇದರೊಳಗೆ ನನ್ನೆದೆಯು
ಕರಗಿರುವುದು ಸತ್ಯ.

೨

ಇದು ಬೋಧ್ಯವೇ ಇರಲಿ,
ಇದಬೋಧ್ಯವೇ ಇರಲಿ,
ಉನ್ಮಾದವೇ ಇರಲಿ,
ಇದು ನನ್ನ ಕಾವ್ಯ.
ಇದು ನನ್ನ ಪೂಜೆಯಲಿ
ಪರಮ ನೈವೇದ್ಯ.

೩

ಲೋಪವಿರಲಿದರೊಳಗೆ,
ದೀಪವಿರಲಿದರೊಳಗೆ,
ತಾಪವಿರಲಿದರೊಳಗೆ,
ಇದು ನನ್ನ ಕಾವ್ಯ.
ಶಾಪ-ಅಭಿಶಾಪಗಳಿ
ಗೆನ್ನೆದೆಯೆ ಬಾಧ್ಯ.

೪

ತಾಳವೇ ಕೆಟ್ಟಿರಲಿ,
ಮೇಳವನು ಬಿಟ್ಟಿರಲಿ,
ಅಪನಾದ ಹುಟ್ಟಿರಲಿ,
ಇದು ನನ್ನ ಗೀತ.
ನಾನು ಶಕ್ತಿಯು ಮಿಡಿದ
ರಿಕ್ತ ಸಂಗೀತ.

೫

ಬೇಕಾದರಿದ ದೂರು,
ಬರಿಕಾಗದದ ಚೂರು
ಎಂದು ಗಗನಕೆ ತೂರು,
ಇದು ನನ್ನ ಕಾವ್ಯ.
ಹೆರವರಟ್ಟಿದ ಮಗನು
ತಾಯ್ಗನ್ನು ಸೇವ್ಯ.

೬

ನಗುಬರಲು ನಕ್ಕುಬಿಡು,
ಬಿಗಿಹಿಡಿಯದುಕ್ಕಿಬಿಡು,
ಕಾವ್ಯದೊಳಗೊಂದು ರಸ-
ವಿರುವುದಲ್ಲ ಹಾಸ್ಯ!
ನಿನ್ನ ನಗುವದೆ ನಾ
ಬರೆಯಲಿಹ ಭಾಷ್ಯ!

೭

ನನ್ನ ರಾಗದ್ವೇಷ,
ನನ್ನ ರೋದನ ಹಾಸ,
ನನ್ನ ಭಯ ನಿಃಶ್ವಾಸ,
ಮಾಡಿರುವುದಿಲ್ಲಿ.
ನನ್ನ ಆಶೆ-ನಿರಾಶೆ
ಹಾಡಿರುವುದಿಲ್ಲಿ.

೮

ಇದರೊಳೆನ್ನೆದೆಯಿಲ್ಲೆ?
ನನಗೆದೆಯೆ ಇಲ್ಲ.
ಇದರೊಳಗೆ ನಾನಿಲ್ಲೆ?
ನಾನೆ ಇರಲಿಲ್ಲ!

—ಪಿ. ವೆಂಕಟರಮಣಾಚಾರ್ಯ

ವ್ಯಾಪಾರ ಪ್ರಪಂಚದಲ್ಲಿ ಕುಟುಂಬ

ಸ್ವಾತಂತ್ರ್ಯವನ್ನು ಸ್ವಾಚ್ಛಂದ್ಯದ ವರೆಗೆ ಎಂಬಷ್ಟು ಹಿಗ್ಗಿಸಿದ ನಾಡೆಂದರೆ ಅಮೇರಿಕದ ಸಂಯುಕ್ತ ಸಂಸ್ಥಾನ. ಅಲ್ಲಿ ಈ ಸ್ವಾತಂತ್ರ್ಯದ ಪಿಡುಗು ಸ್ತ್ರೀಪುರುಷರ ಪರಸ್ಪರ ಸುಖಜೀವನದ ಬೇರಿಗೆ ಕೊಡಲಿಯಾಗಿ ಪರಿಣಮಿಸಿದೆ. 'ಎತ್ತು, ಏರಿಗೆ ಎಳೆದರೆ ಕೋಣ ನೀರಿಗೆ ಎಳೆಯಿತು' ಎಂಬುದು ಅಲ್ಲಿಯ ಕೌಟುಂಬಿಕರ ಅವಸ್ಥೆಯನ್ನು ವ್ಯಾಖ್ಯಾನಿಸುತ್ತದೆ

ಇಲ್ಲಿಯ ವರೆಗೆ ಬ್ರಿಟನ್ ಕಡಲರಾಣಿಯೆನಿಸಿತ್ತು. ಆದರೀಗ ಆ ಸ್ಥಾನವನ್ನು ಅಮೇರಿಕ ಕಸಿದುಕೊಂಡಿದೆ. ವ್ಯಾಪಾರದಲ್ಲಿ ಲಾಭವನ್ನು ಉತ್ಕರ್ಷಗೊಳಿಸಲು ಅದು ಅರಿಸಿಕೊಳ್ಳದ ಸಾಧನವಿಲ್ಲ, ಬಿಟ್ಟ ಮಾರ್ಗವಿಲ್ಲ, ಪ್ರಯೋಗಿಸದ ತತ್ವವಿಲ್ಲ: ಕೆಲಸಗಾರರಿಗೆ ಸುಖ ಸಿಗುವಂತೆ ವೇತನಾದಿ ವ್ಯವಸ್ಥೆ ಮಾಡಿರೆಂದರೆ .... ವ್ಯಾಪಾರಿಗಳಿಗೊಗ್ಗುತ್ತಿರಲಿಲ್ಲ. ಹಾಗೆ ಸುಖದಿಂದ ಇಟ್ಟರೆ ಅವರು ಚೆನ್ನಾಗಿ ಮತ್ತು ಹೆಚ್ಚಾಗಿ ಕೆಲಸಮಾಡುವರೆಂಬುದನ್ನು ಅಮೇರಿಕದ ವ್ಯಾಪಾರಿಗಳು ಈಗೀಗ ತಿಳಿಯಲಾರಂಭಿಸಿದ್ದಾರೆ; ಸ್ವಾರ್ಥಕ್ಕಾಗಿ ಮಾಡದೆ, ಪರಸುಖವನ್ನು ಚಿಂತಿಸತೊಡಗಿ, ಆ ಮಾರ್ಗದಲ್ಲಿ ವಿವೇಚಿಸಿ ಕೆಲಸಗಾರರ ಗೃಹಸುಖವನ್ನು ನೆಟ್ಟಗಿಡಲು ಅವರು ಉತ್ಸುಕರಾಗುತ್ತಿದ್ದಾರೆಂದು ಗ್ರಿಟ್ಸ್ ಪಾಮರನು ಬರೆಯುತ್ತಾನೆ.

ಈ ಪ್ರಕಾರ ಚಿಂತಿಸಿ, ಕೆಲಸಗಾರನಿಗೂ ಅವನ ಹೆಂಡತಿಗೂ ಗೃಹಕಲಹ ಬರದಂತೆ ಬಹಳ ಜಾಗರೂಕತೆವಹಿಸಲು ಅಮೇರಿಕದ ಕಂಪನಿಯವರು ಕಲಿತಿದ್ದಾರೆಂದು ತಿಳಿಯುತ್ತದೆ. ಹೆಂಡತಿ ಗಂಡನನ್ನು ಸರಿಯಾಗಿ ನಡೆಸಿಕೊಳ್ಳದಿದ್ದಲ್ಲಿ ಅವನಲ್ಲಿ ಚಿತ್ತಕ್ಷೋಭೆಯುಂಟಾಗಿ ಅವನು ಕಂಪನಿಗಳಲ್ಲಿ ಮಾಡುವ ಕೆಲಸದಲ್ಲಿ ದಿನೇ ದಿನೇ ನ್ಯೂನತೆಗಳು ಹೆಚ್ಚುತ್ತ ಹೋಗುವುವು. ಇದರಿಂದ ಕಂಪನಿಗೆ ನಷ್ಟವಾಗುವುದೆಂದರಿತು ಅಧಿಕಾರಿಗಳು ಅಂತಹ ಸಂದರ್ಭಗಳಲ್ಲಿ ಅವನ ಹೆಂಡತಿಗೆ ಬುದ್ಧಿ ಹೇಳಿ ಅವರು ವಿಚ್ಛೇದಹೊಂದದಂತೆ, ನ್ಯಾಯವಾಗಿ ವರ್ತಿಸುವಂತೆ ವ್ಯವಸ್ಥೆ ಮಾಡುವರೆಂದು ಹೇಳಲಾಗಿದೆ.

ಈ ಅನುಭವದ ಮೂಲಕ ಅವರಿಂದು ಹೇಳುತ್ತಾರೆ.

"ಏಕಪಕ್ಷೀಯ ವಿಚಾರವನ್ನು ಗಂಡಸರ ಮತ್ತು ಹೆಂಗಸರ ಸಂಬಂಧದಲ್ಲಿ ಇಟ್ಟುಕೊಂಡರೆ ಯಾವ ಗಂಭೀರ ಸಮಸ್ಯೆಯನ್ನೂ ಬಗೆಹರಿಸಲು ಸಾಧ್ಯವಾಗದು

ಮದುವೆಗೆ ಮೊದಲು ಹುಡುಗಿಯರಿಗೆ ವ್ಯಾಪಾರಾದಿ ಉದ್ಯೋಗಗಳಲ್ಲಿ ಸಲಹೆಕೊಡುವ ವಿದ್ಯೆಯನ್ನು ಕಲಿಸಿ, ಅವರು ಮುಂದೆ ತಂತಮ್ಮ ಗಂಡಂದಿರ ಉದ್ಯಮಗಳಲ್ಲಿ ಸಮಭಾಗಿಗಳೆಂದು ತಿಳಿದು ವರ್ತಿಸುವಂತೆ ಅವರಿಗೆ ಔದ್ಯೋಗಿಕ ಸಾಮಾನ್ಯ ಜ್ಞಾನವನ್ನು ಸಿಂತಾವಧಿಯಲ್ಲಿ ಉಪದೇಶಿಸಬೇಕು.

"ಹೆಂಡಂದಿರನ್ನು ನಂಬಿ ಗಂಡಂದಿರು ಔದ್ಯೋಗಿಕ ಜೀವನದ ಸಮಸ್ಯೆಯನ್ನು ಅವರು ಉತ್ತರಿಸುವುದರಲ್ಲಿ ಭಾಗವಹಿಸುವಂತೆ ಮಾಡಬೇಕು. ಉದ್ಯಮಕ್ಕೆ ಸಂಬಂಧಿಸಿದ ಗುಪ್ತ ವಿಷಯಗಳನ್ನು ಅವರಿಂದ ಮುಚ್ಚಿಡದೆ ಹೇಳಿ, ಅವನ್ನು ಗುಪ್ತವಾಗಿ ಇಡುವಂತೆ ಉಪದೇಶಿಸಬೇಕು. ಗಂಡನ ಔದ್ಯೋಗಿಕ ಸಮಸ್ಯೆಗಳನ್ನು ಅರಿಯದ ಹೆಂಡತಿ 'ಹೆಂಡತಿ ಪ್ರಾಣ ಹಿಂಡುತಿ' ಎಂಬ ಮಾತಿಗೆ ನಿದರ್ಶನವಾಗುತ್ತಾಳೆ.

"ಹೆಂಗಸರು ಅತ್ಯುಪದೇಶಕರೂ ಅತಿವಿಮರ್ಶಕರೂ ಆದಲ್ಲಿ ಗಂಡಸಿನ ಜೀವನ ಮಣ್ಣುಪಾಲೇ ಸರಿ. ಇಂಥ ಸತಿಯರ ನಡತೆಯ ಪರಿಣಾಮಗಳು ಕೆಲಸಗಾರರಲ್ಲಿ ಕಂಡುಬಂದರೆ ಕಂಪನಿಗಳ ಅಧಿಕಾರಿಗಳು ಅಂತಹ ಹೆಂಗಸರಿಗೆ ನ್ಯಾಯವಾದ ಉಪದೇಶವನ್ನು ಕೊಟ್ಟ ಪರಿಸ್ಥಿತಿಯನ್ನು ಹದಕ್ಕೆ ತರುವುದು ಉಂಟು.

"ಕಂಪನಿಗಳು ಒಬ್ಬ ಅವಿವಾಹಿತ ಕೆಲಸಗಾರನನ್ನು (ಹೆಂಗಸಿನ ನೆರವಿಲ್ಲದ) ನಿಯಮಿಸಿಕೊಳ್ಳುವುದರ ಬದಲು ಕೌಟುಂಬಿಕನನ್ನೇ ನಿಯಮಿಸಿಕೊಂಡಲ್ಲಿ ಹೆಚ್ಚಿಗೆ ಲಾಭವುಂಟು. ಅವನ ಕುಟುಂಬ ಸೌಖ್ಯವನ್ನು ಕಾದುಕೊಂಡು ಬರಲು ನೈತಿಕ ಮತ್ತು ಆರ್ಥಿಕ ಸಹಾಯ ಮಾಡುವುದರಲ್ಲಿ ಹಿಂಜರಿಯಬಾರದು.

"ಈ ದೃಷ್ಟಿಯಿಂದ ವಿಚಾರಿಸಿದರೆ ಸಮಾಜದಲ್ಲಿರುವಂತೆ ವ್ಯಾಪಾರಾದಿ ಉದ್ಯೋಗ ಪ್ರಪಂಚದಲ್ಲೂ ಸ್ವಾಭಾವಿಕವಾದ ಮೂಲಮಾನ (unit) ಎಂದರೆ ಕುಟುಂಬವೇ — ಸುಖಜೀವನ ನಡೆಸುವ ಕುಟುಂಬವೇ !"

ಮೇಲಿನ ಮಾತುಗಳಲ್ಲಿ ನೂರಕ್ಕೆ ನೂರು ಸತ್ಯವಿದೆಯೆಂಬುದು ಅನುಭವದಿಂದ ಯಾರಾದರೂ ತಿಳಿಯಬಹುದು. ಹಾಗೆ ತಿಳಿದವರನ್ನು ಮಾತ್ರ ಬುದ್ಧಿವಂತ ಬಂಡವಾಲಿಗರೆನ್ನಬೇಕಾಗುತ್ತದೆ!

ವಿವಿಧ ಪ್ರಪಂಚ

ಅಕ್ಕಿಯ ಮಹತ್ವ

'ಅಕ್ಕಿಯನ್ನು ತಿನ್ನುವವನು ಹಕ್ಕಿಯಾದಾನು, ಜೋಳವನ್ನು ತಿನ್ನುವವನು ತೋಳವಾದಾನು' ಎಂದು ಹಳೆಯ ಗಾದೆಯ ಆಧಾರಕೊಟ್ಟು ಅಕ್ಕಿ-ದಿನಿಗಳನ್ನು ಹಾಸ್ಯಮಾಡುವದು ನಮ್ಮಲ್ಲಿದೆ. ಇಷ್ಟಾದರೂ ಅಕ್ಕಿ ತಿನ್ನುವವರು ಹಕ್ಕಿಯಾಗಲೂ ಇಲ್ಲ, ಅದನ್ನು ತಿನ್ನುವುದನ್ನು ಬಿಡಲೂ ಇಲ್ಲ. ಆದರೂ ಒಮ್ಮೊಮ್ಮೆ ಕೆಲ ದುರ್ಬಲ ಅಕ್ಕಿಗರಿಗೆ ಇದರಿಂದ ಆತ್ಮಾಧಮ ಭಾವವುಂಟಾದದ್ದುಂಟು. ಅಂಥವರು ಅಕ್ಕಿಯ ಮಹಿಮೆಯನ್ನು ಕೇಳಿ ಮನಃಶುದ್ಧಿ ಹೊಂದಬಹುದು

ಈ ವರ್ಷ ಆಧುನಿಕ ಜೀವನದ ಒತ್ತಡದಿಂದ ಅಮೇರಿಕದಲ್ಲಿ ೫೦ ಲಕ್ಷ ಜನರು ಸಾಯುವರೆಂಬ ಸುದ್ದಿಯಿದೆ. ಈ ಒತ್ತಡಕ್ಕೆ ಅತಿಶ್ರಮ, ಕಾತರತೆ, ನರಗಳ ಜಗಿತ ಇವುಗಳೇ ಕಾರಣ. ಇದರಿಂದ ರಕ್ತದ ಒತ್ತಡ ಹೆಚ್ಚಾಗಿ ತನ್ಮೂಲಕ ಶುದ್ಧ ರಕ್ತನಾಳಗಳು ಗಟ್ಟಿಯಾಗುತ್ತವೆ; ಚಲಿಸುವುದು ಕುಂಠಿತವಾಗುತ್ತದೆ ಇದಲ್ಲದೆ ರಕ್ತ ಒಣಗಿ ಗಡ್ಡೆಯಾಗಿ ಬಿಡುತ್ತದೆ ಎಂದು ಡಾ. ಹ್ಯಾನ್ಸ್ ಡಬ್ಲ್ಯು ಸೆಲಿ ಎಂಬವರು ಅಭಿಪ್ರಾಯಪಡುತ್ತಾರೆ. ಒಮ್ಮೆ ಹೊಟ್ಟೆಯಲ್ಲಿ ಹುಣ್ಣು ಆಗಬಹುದು, ಮೂತ್ರಕೋಶ ಕೆಡಬಹುದು ಇಲ್ಲವೆ ತಲೆ ಸರಿಯಾಗಿ ಕೆಲಸ ಮಾಡದಂತಾಗಬಹುದು.

ಡಾ. ಸೆಲಿಯವರು ಮೇಲಿನ ರೋಗಗಳಿಗೆ ರಕ್ತದ ಒತ್ತಡವೇ ಕಾರಣವೆಂದೂ ಅದರ ನಿವಾರಣೆಗೆ ಶರ್ಕರ ಪಿಷ್ಟಾದಿಗಳು ಹೆಚ್ಚಾಗಿ ಇರುವ ಹಣ್ಣು, ಅಕ್ಕಿ, ಸಕ್ಕರೆಯಿಂದ ತಯಾರಿಸಿದ ಆಹಾರವನ್ನು ತೆಗೆದುಕೊಳ್ಳಬೇಕೆಂದೂ ಅಭಿಪ್ರಾಯಪಡುತ್ತಾರೆ. ಉಪ್ಪು ಮತ್ತು ಪ್ರೋಟೀನ್ ಹೆಚ್ಚಾಗಿರುವ ಆಹಾರ ಪದಾರ್ಥಗಳ ಸೇವನೆಯಿಂದ ರಕ್ತದ ಒತ್ತಡ ಮತ್ತು ಅತಿಭಾರ ಉಂಟಾಗುತ್ತದೆ.

ಅತಿಶ್ರಮ, ಮನಸ್ತಾಪ ಮತ್ತು ಆಹಾರ ದೋಷಗಳಿಂದ ಮೂತ್ರಕೋಶದ ಮೇಲಿರುವ ಗ್ರಂಥಿಗಳು 'ಅಡ್ರೀನಲ್' ಎಂಬ ದ್ರವವನ್ನು ಸ್ರವಿಸುತ್ತವೆ. ಅಲ್ಪ ಪ್ರಮಾಣದಲ್ಲಿರುವಾಗ ಆ ದ್ರವ ಉಪಕಾರಿಯೆನಿಸಿದರೂ ಮಿತಿಮೀರಿದೊಡನೆ ಹೃದಯವನ್ನು ದುರ್ಬಲಗೊಳಿಸಿ ರಕ್ತದ ಒತ್ತಡವನ್ನು ಹೆಚ್ಚಿಸುತ್ತದೆಯೆಂದು ಕಂಡು ಬಂದಿದೆ.

ಚೀನದ ಜನ ಅಕ್ಕಿಯನ್ನು ಉಂಡುದರಿಂದಲೇ ಸಮಾಧಾನಿಗಳು, ಸಹನಶೀಲರು, ಎನಿಸಿದ್ದಾರೆಂದು ಡಾ. ಕೆಂಪ್ನರೆನ್ನುತ್ತಾರೆ. ಹಿಂದೀಯರಲ್ಲಿ ಬಹುಸಂಖ್ಯಾಕರು ತಂಡುಲಭಕ್ಷಕರಿರುವುದರಿಂದಲೇ ಬಹುಶಃ ಹಿಂದೆ ಈ ನಾಡು ತತ್ವಜ್ಞರ ದೇಶವೆಂಬ ಪ್ರಸಿದ್ಧಿಯನ್ನು ಪಡೆದಿತ್ತು; ವೀತರಾಗ ಭಯ ಕ್ರೋಧರ ಬೀಡೆಂದು ಹೆಸರು ಪಡೆದಿತ್ತು. ಸಾತ್ವಿಕಾಹಾರವೆನಿಸಿದ ಅಕ್ಕಿಯ ಅನ್ನದಿಂದ ಚಿರಂಜೀವಿಗಳಾಗಬಹುದೆಂದು ವಿಜ್ಞಾನಿಗಳು ಸಾಕ್ಷಿ ಹೇಳುತ್ತಾರೆ- ಎಂದಮೇಲೆ ಅಕ್ಕಿಯ ವ ಹೆಚ್ಚ ಎಷ್ಟಿದೆ ನೋಡಿರಿ!

ಹೊಸ ಒಗೆಯ ರೇಜರ್ !

'ನೀರಿಲ್ಲದೆ ಹಜಾಮತಿ !' ಎಂದೊಡನೆ ಯಾರಾದರೂ ಗಾಬರಿಗೊಳ್ಳದೇ ಸರಿ. ಯಾರದೋ ಕಿಸೆಯನ್ನು ಯಾರೋ ಕತ್ತರಿಸಿದರೆಂದು ಒಮ್ಮೆಲೇ ತಿಳಿದು ಬಿಡುತ್ತಾರೆ. ಆದರೆ ಅಕ್ಷರಸತ್ಯವಾಗಿ ನೀರಿಲ್ಲದೆ, ಸಾಬೂನಿಲ್ಲದೆ, ವಿದ್ಯುತ್ತಿಲ್ಲದೆ, ಅಂಗವಸ್ತ್ರವಿಲ್ಲದೆ ಕ್ಷೌರ ಮಾಡಿಕೊಳ್ಳಬರುವ ಹೊಸ ಬಗೆಯ ರೇಜರನ್ನು ಒಂದು ಲಂಡನ್ ವ್ಯಾಪಾರ ಸಂಸ್ಥೆಯು ತಯಾರಿಸಿದೆಯೆಂದರೆ ಆಶ್ಚರ್ಯಪಡದಿರಲಾಗುವದೇ?

ಈ ರೇಜರಿಗೆ ೨ ಬ್ಲೇಡುಗಳಿರುತ್ತವೆ. ಅದಕ್ಕೆ ತೂತುಗಳುಳ್ಳ ಒಂದು ರಕ್ಷಾಕವಚವಿರುತ್ತದೆ. ಕತ್ತರಿಯಂತೆ ಅದು ಕೂದಲನ್ನು ಸರಾಗ ಕತ್ತರಿಸಿ ಬಿಡುತ್ತದೆ. ಮತ್ತು ಬಹುಕಾಲ ಬಾಳಿಕೆ ಬರುತ್ತದೆ. ರಕ್ಷಾಕವಚವನ್ನು ಚರ್ಮಕ್ಕೆ ಆನಿಸಿ ರೇಜರನ್ನು ಅಲುಗಾಡಿಸಿದರೆ ಸರಿ; ನಿಮಿಷಾರ್ಧದಲ್ಲಿ ಛಪ್ರಂಕರಣವಾಗಿ ಹೋಗುತ್ತದೆ! ನೀರು ಸಾಬೂನು ಮುಂತಾದವುಗಳ ಅಗತ್ಯವಿಲ್ಲವಷ್ಟೇ ಅಲ್ಲ, ಈ ರೇಜರು ಕತ್ತರಿಸಿದ ಕೂದಲನ್ನು ಕೂಡ ಕೆಳಗೆ ಉದುರದಂತೆ ಶೇಖರಿಸಿಡುವದು. ಈ ರೇಜರನ್ನು ಮೇ ೩ ರಿಂದ ೧೪ ರ ವರೆಗೆ ಇಂಗ್ಲೆಂಡಿನಲ್ಲಿ ನಡೆದ ಕೈಗಾರಿಕೆಯ ಸಂತೆಯ ಒಲಿಂಪಿಕ್ ವಿಭಾಗದಲ್ಲಿ ಪ್ರದರ್ಶಿಸಲಾಗುವದು.

ಕಲಿಯುಗದ ಹರಿಶ್ಚಂದ್ರ !

ಇಂಗ್ಲೆಂಡಿನ ಸಮೀಪದಲ್ಲಿ ಐರ್ಲೆಂಡ್ ಎಂಬ ದೇಶವಿದೆ. ಅಲ್ಲಿ ಕಿಲರ್ನಿಕೆರೆಗಳು ಎಂಬ ಕೆರೆ ಸಾಲಿದೆ. ಆ ಕೆರೆಗಳಲ್ಲಿ ದೋಣಿ ದಾಟಿಸುವ ಮುದುಕನೊಬ್ಬನಿದ್ದನು. ವಿಲಿಯಂ ಪಿ. ಮ್ಯಾಕ್ ಗ್ಯಾರಿಯವರು ಅವನ ಸತ್ಯವಂತಿಕೆಯನ್ನು ಸ್ವಾರಸ್ಯವಾಗಿ ಹೇಳಿದ್ದಾರೆ.

ಅಂಬಿಗನು ಬಹಳ ವಯಸ್ಸಾದವನಂತೆ ತೋರುತ್ತಿದ್ದನು. ಒಮ್ಮೆ ಫಿಲಿಡೆಲ್ಫಿಯ ಕಾಂಗ್ರೆಸ್ಸಿನ ಸದಸ್ಯನೊಬ್ಬನು ಐರ್ಲೆಂಡಿಗೆ ತಲುಪಿ ಆ ಕೆರೆ ಸಾಲಿನಲ್ಲಿ ಪಯಣದೆಳೆಯುವ ಸಂದರ್ಭವೊದಗಿತು. ಆಗ ಮುದುಕನು ದೋಣಿ ತೆಗೆಯುತ್ತಿದ್ದಾಗ ಸದಸ್ಯನು, 'ನಿನ್ನ ವಯಸ್ಸೆಷ್ಟೆಂದು ಕೇಳಬಹುದೇ?' ಎಂದನು. ಅದಕ್ಕೆ ಉತ್ತರವಾಗಿ ಆ ಅಂಬಿಗನು—

"ನನಗೆ ಹೆಚ್ಚು ವಯಸ್ಸಾಗಿಲ್ಲ; ಕೇವಲ ೭೫ ವರ್ಷ" ಎಂದು ಉತ್ತರವಿತ್ತನು.

ಇತ್ತೀಚೆಗೆ ಆ ಸದಸ್ಯನು ಮತ್ತೊಮ್ಮೆ ಅದೇ ಸ್ಥಳದ ಮೂಲಕ ಪ್ರಯಾಣಮಾಡುವ ಸಂದರ್ಭ ಬಂದಿತು; ಅಲ್ಲಿ ಅದೇ ಅಂಬಿಗನಿದ್ದನು. ಆಗ ಅವನು ಅಂಬಿಗನನ್ನು ಕೇಳಿದ — 'ನಿನಗೀಗ ಎಷ್ಟು ವರ್ಷ ವಯಸ್ಸು?' ಅದಕ್ಕೆ ಆ ಕೂಡಲೆ, '೭೫' ಎಂಬ ಉತ್ತರ ಬಂದಿತು. ಮತ್ತೆ ಕೇಳಿದ- 'ಈಗ ೮ ವರ್ಷಗಳ ಹಿಂದೆಯೇ ನಿನಗೆ ೭೫ ವರ್ಷ ವಯಸ್ಸೆಂದು ಹೇಳಿದ್ದೆ. ಇದಕ್ಕೇನು ಅರ್ಥ?'

ಅಂಬಿಗನು ಗಂಭೀರವಾಗಿ ಹೇಳಿದ – 'ಅರ್ಥ! ವಿವರಣೆ ನನ್ನನ್ನು ನೋಡಿದರೆ ತಿಳಿಯುವದಿಲ್ಲವೆ? ನಾನು ಎರಡು ಮಾತಾಡುವ ಮನುಷ್ಯನೆ? ನನ್ನನ್ನು ಕಂಡರೆ, ಒಂದು ದಿನ ಒಂದು ಮಾತನ್ನಾಡಿ ಮರುದಿನ ಮತ್ತೊಂದು ಮಾತನ್ನಾಡುವವನಂತೆ ಕಾಣಿಸುವದೇ?

ಹುಲುಸಾದ ಬೆಳೆ !

ಕಾಳಿನ ಕೊರತೆ, ಬೇಳೆಯ ಕೊರತೆ, ವಸನದ ಕೊರತೆ, ವಸತಿಯ ಕೊರತೆ ಎಂದು ಎಲ್ಲಿ ನೋಡಿದರೂ ಇಂದು ಲಕ್ಷ್ಮೀ ಸಹೋದರಿ ತಾಂಡವ ನಡೆಸಿದ್ದಾಳೆ. ಇಂತಹ ಕಾಲದಲ್ಲಿ 'ಹುಲುಸಾದ ಒಂದು ಬೆಳೆ' ಎಂದ ಕೂಡಲೆ ಯಾರ ಬಾಯಲ್ಲಾದರೂ ನೀರೊಸರುವುದು ಸಹಜ; ಆದರೆ ಈ ಬೆಳೆ ಉಣಲೂ ಬರದು, ಉಡಲೂ ಬರದು. 'ಮರದೊಳಗೆ ಮರ ಹುಟ್ಟಿ ಮರಚಕ್ರ ಕಾಯಾಗಿ ತಿನ್ನ ಬಾರದ ಹಣ್ಣು ಬಲು ರುಚಿ' ಎಂದು ಇದನ್ನು ಒಗಟಿಸಲಾಗಿದೆ.

ಈ ಹಸಿದ ಜಗತ್ತಿನಲ್ಲಿ ಇಂದು ಯುದ್ಧಪೂರ್ವಕ್ಕಿಂತ ಹೆಚ್ಚು ಬಾಯಿಗಳು ಅನ್ನ ನೀರಿಗಾಗಿ ನಾಲಿಗೆ ಚಾಚುತ್ತಿವೆ. ಯಾವುದರಲ್ಲಿ ಎಷ್ಟು ಕೊರತೆಯಿದ್ದರೂ ಜಗತ್ತಿನಲ್ಲಿಂದು ಮಕ್ಕಳ ಕೊರತೆಯಿಲ್ಲ. ಅವು ಹುಟ್ಟಿಯೇ ಹುಟ್ಟುತ್ತಿವೆ!

ಮಾರ್ಶಲ್ಲರ ಸಹಾಯವನ್ನು ಸ್ವೀಕರಿಸಲು ನಿರ್ಣಯಿಸಿದ ನಾಡುಗಳಲ್ಲಿ ಮಕ್ಕಳ ಬೆಳೆ ಬಹಳ ಹುಲುಸಾಗಿದೆಯೆಂದು ತಿಳಿದು ಬಂದಿದೆ. ೧೯೪೦-೪೬ ರ ಅವಧಿಯಲ್ಲಿ ಸಂತಾನವೃದ್ಧಿ ಪಶ್ಚಿಮ ಯುರೋಪಿನಲ್ಲಿ ಗಣನೀಯವಾಗಿದೆ. ನೆದರ್‌ಲೆಂಡ್ಸ್ ಅಲ್ಲಿ ಸಾವಿರಕ್ಕೆ ೩೩.೭ ರಿಂದ ೪೦.೩ ಕ್ಕೆ ಏರಿಕೆ ಕಂಡಿದೆ. ಅಲ್ಲದೆ ಐರ್ಲೆಂಡಿನಲ್ಲೂ ಹೊಸ ಜನನಗಳು ಉಂಟಾಗಿ ಜನಸಂಖ್ಯೆಯು ಅಧಿಕವಾಗಿದೆ.

ದಕ್ಷಿಣದ ಜನಸಂಖ್ಯೆ ತಿಳಿದಿಲ್ಲ. ಅಧಿಕಾರಿಗಳು ಹೆಚ್ಚು ಜನಿಸಿದ ಕೂಸುಗಳ ಜನನಮರಣಾದಿಗಳನ್ನು ಕೊಡುವುದನ್ನು ಕಂಡು ಅಲ್ಲಿಯೂ ವೃದ್ಧಿ ಕ್ರಿಯೆ ತ್ವರಿತಗತಿಯಿಂದ ಸಾಗಿದೆಯೆಂದು ತೋರುತ್ತದೆ. ಬಲ್ಗೇರಿಯಾ, ರುಮೇನಿಯಾ, ಮತ್ತು ಫಿನ್‌ಲೆಂಡುಗಳಲ್ಲೂ ಇದೇ ಬಗೆ ಇರಬಹುದೆಂದು ತರ್ಕ.

೧೯೪೫ ೪೬ ರಲ್ಲಿ ಕೇವಲ ನಾಲ್ಕೇ ನಾಡುಗಳು ಪ್ರಸವ ಸಂಖ್ಯೆಯಲ್ಲಿ ಇಳಿತಾಯವನ್ನು ತೋರಿದವು. ಮೆಕ್ಸಿಕೋ, ಪೋರ್ಚುಗಾಲ್, ಚಿಲಿ ಮತ್ತು ಸ್ಪೇನುಗಳೇ ಆ ನಾಡುಗಳು. ಅವುಗಳಲ್ಲಿ ಮೆಕ್ಸಿಕೊದ ಇಳಿತಾಯ ಅತಿಯಾಗಿದೆ.

ಈ ಯುದ್ಧೋತ್ತರದ ಸಂತಾನಾಭಿವೃದ್ಧಿಯು ಕೇವಲ ತಾತ್ಕಾಲಿಕವೆಂದು ಗ್ರಹಿಸಲಾಗಿದೆ. ಎರಡನೆಯ ಮಹಾಯುದ್ಧದ ಸಂತರದಲ್ಲಾದ ಕೊರತೆ ಈಗ ಬಾರದಂತೆ ಕ್ರಮೇಣ ಈ ಉತ್ಕರ್ಷ ಇಳಿಮುಖವಾಗುವುದು ಖಂಡಿತ ಎಂದು ತಜ್ಞರ ಅಭಿಪ್ರಾಯ.

ಗಾಜಿನ ದಾರ

ಈ ವರ್ಷದ ಬ್ರಿ. ಕೈಗಾರಿಕೆಗಳ ಸಂತೆಯಲ್ಲಿ ನೀರಿಂದ ಹಾಳಾಗದ, ಕೊಳೆಯದ ಮತ್ತು ಬೆಂಕಿಯಿಂದ ನಾಶಹೊಂದದ ದಾರವನ್ನು ತೆಗೆಯಬರುವ ಗಾಜನ್ನು ಪ್ರದರ್ಶಿಸಲಾಗುತ್ತದೆ.

ಕಣ್ಣಿಗೆ ಕಾಣಿಸದಷ್ಟು ಸಣ್ಣದಾದ ಗಾಜಿನ ನೂಲಿನಿಂದ ಹೆಣೆದ ಬಟ್ಟೆಯನ್ನು ತಯಾರಿಸಲಾಗಿದೆ. ಎಂಟನೆಯ ಐದರಷ್ಟು ವ್ಯಾಸವಿರುವ ಗಾಜಿನ ಗೋಲಕದಿಂದ ೯೭ ಮೈಲುದ್ದದ ದಾರವನ್ನು ತೆಗೆಯಲಾಗುತ್ತದೆ. ಒಂದು ಹುರಿಯಲ್ಲಿ ನೂರು ನೂಲೆಳೆಗಳಿರುತ್ತವೆ. ಅಂತಹ ಅನೇಕ ಹುರಿಗಳಿಂದ ಒಂದು ದಾರ ಮಾಡಲಾಗುತ್ತದೆ. ಇದು ನಯವಾಗಿಯೂ ಬಲವಾಗಿಯೂ ಇದೆ. ಎಳೆಯ ವ್ಯಾಸವು ಲಕ್ಷದಲ್ಲಿ ೨೬ ಅಂಶ ಅಂಗುಲ; ಒಂದು ಚದರ ಅಂಗುಲಕ್ಕೆ ೩೫ ಲಕ್ಷ ಪೌಂಡಿನಷ್ಟು ವಿಸ್ತರಣಬಲವುಳ್ಳದ್ದಾಗಿದೆ.

ಈ ಹೊಸ ಬಟ್ಟೆಯನ್ನು ಬೂಟ್ಸಿಗೆ ಹೊದಿಕೆಯಾಗಿ ಬಳಸಬಹುದು; ದಿಂಬಿಗೆ ಉಪಯೋಗಿಸಬಹುದು. ಇದನ್ನು ಕೃತಕ ಚರ್ಮವನ್ನಾಗಿ ಚೀಲ ಮುಂತಾದ ವಸ್ತುಗಳ ತಯಾರಿಕೆಗೆ ಬಳಸಬಹುದು. ಇದರ ಮೇಲೆ ಕೈಯಿಂದ ೨ ಬಣ್ಣಗಳಲ್ಲಿ ದೃಶ್ಯಚಿತ್ರವನ್ನು ಮುದ್ರಿಸಲಾಗಿದೆ ಛಾಯಾ ರೇಖೆಗಳಿಂದಲೂ ಇದರ ಮೇಲೆ ದೃಶ್ಯಗಳನ್ನು ಮುದ್ರಿಸಬಹುದು

ಅಖಿಲ ಮೈಸೂರ ಕಾಂಗ್ರೆಸ ಸಮಿತಿಯು ಮೈಸೂರನ್ನೊಳಗೊಂಡ ಕರ್ನಾಟಕ ನಿರ್ಮಾಣದ ಗೊತ್ತುವಳಿಯ ವಿಷಯವಾಗಿ ಸಂಯುಕ್ತ ಕರ್ನಾಟಕದ ಸುದ್ದಿಗಾರರು ಕೇಳಲು, ಶ್ರೀ. ರಂಗನಾಥ ದಿವಾಕರರು, ಈ ಗೊತ್ತುವಳಿಯು ಕರ್ನಾಟಕದ ಪ್ರತಿನಿಧಿಗಳ ಅಖಿಲಕಾಂಕ್ಷೆಗೆ ಶಬ್ದರೂಪವನ್ನು ಕೊಟ್ಟಿದೆಯೆಂದು ಉದ್ಗಾರ ತೆಗೆದರು.



ಒಂದು ಅತಿ ದೊಡ್ಡ ವಿವಾದಾಸ್ಪದವಾದ ನಂಬಿಕೆ — 'ಹೆಂಗಸು ಎಲ್ಲೆಂದರಲ್ಲಿ ಅಥವಾ ಲೇಪ, ಮುಖಪಿಷ್ಟಾದಿಗಳನ್ನು ಬಳಿದುಕೊಳ್ಳುವುದಾದರೆ ಗಂಡಸೇಕೆ ಬೇಕಾದಲ್ಲಿ ಕ್ಷೌರ ಮಾಡಿಕೊಳ್ಳಬಾರದು?' ಎಂದು ಲಂಡನ್ನಿನ ತರುಣರು ಈ ಹೊಸ ಬಗೆಯ ಡ್ರೈ ಶೇವ್ ರೇಜರನ್ನು ಹಿಡಿದುಕೊಂಡು ಛಪ್ರಂಕರಣ ಮಾಡಿಕೊಳ್ಳುತ್ತಿರ ಸುತ್ತಾರೆ!

ಅಮೇರಿಕದ ವಿಶ್ವವಿದ್ಯಾನಿಲಯ ಸಂಘಗಳು

ವಿಶೇಷ ಲೇಖನ ೧೪

(ಲೇಖಕರು: ನಾಡಿಗ ಕೃಷ್ಣಮೂರ್ತಿ, ಅಮೇರಿಕ)

S. G. A.

ಭಾರತೀಯ ವಿದ್ಯಾರ್ಥಿ ಅಮೇರಿಕದ ವಿಶ್ವವಿದ್ಯಾನಿಲಯವನ್ನು ಸೇರಿದೊಡನೆಯೇ, ಆತನಿಗೆ ಮೊದಲು ಗೋಚರವಾಗುವುದು, ವಿಶ್ವವಿದ್ಯಾನಿಲಯದ ಆವರಣದಲ್ಲಿ ತಗಲು ಹಾಕಿರುವ ಹತ್ತಾರು ನೋಟೀಸ್ ಬೋರ್ಡುಗಳು. ಅವರಲ್ಲಿ ಕಾಣಬರುವ ನೋಟೀಸುಗಳಲ್ಲಿ ವಿಶ್ವವಿದ್ಯಾನಿಲಯದ ಅಧಿಕಾರಿ ಹೊರಡಿಸಿದವುಗಳೇ ನೋಟೀಸುಗಳಲ್ಲಿ ಹತ್ತಾರು ಸಂಘಗಳ ಕಾರ್ಯಕ್ರಮದ ವಿವರಗಳು ಇರುತ್ತವೆ.

ಭಾರತದ ವಿಶ್ವವಿದ್ಯಾನಿಲಯಗಳಲ್ಲಿದ್ದಂತೆ, ಮಿಸ್ಸೋರಿ ವಿಶ್ವವಿದ್ಯಾನಿಲಯದಲ್ಲಿಯೂ ಒಂದು ಕೇಂದ್ರ ವಿದ್ಯಾರ್ಥಿ ಸಂಘವಿದೆ. ಅಹರಿ ಸಾವಿರಾರು ವಿದ್ಯಾರ್ಥಿ ವಿದ್ಯಾರ್ಥಿನಿಯರು ಸಣ್ಣ ಸಣ್ಣ ಗುಂಪುಗಳಾಗಿ ತಮ್ಮದೇ ಆದ ಸಂಘಗಳನ್ನೇರ್ಪಡಿಸಿಕೊಂಡಿದ್ದಾರೆ. ಕೇಂದ್ರ ಸಂಘದ ಹೆಸರು, Student Government Association ಎಂದು. ಈ ಸಂಘಕ್ಕೆ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳೆಲ್ಲರೂ ಸದಸ್ಯರಾಗಬೇಕೆಂಬ ನಿಯಮವಿಲ್ಲ. ನಾಟಕ ಪ್ರದರ್ಶನಗಳು, ಮತ್ತು ಚರ್ಚೆ ಭಾಷಣಗಳನ್ನು ವಿಶ್ವವಿದ್ಯಾನಿಲಯದವರೇ ಪ್ರತ್ಯೇಕ ಒಂದು ಶಾಖೆಯನ್ನೇರ್ಪಡಿಸಿ ನಡೆಸಿಕೊಂಡು ಬರುತ್ತಾರಾದ್ದರಿಂದ S. G. A. ಗೆ ಅವರ ಗೊಡವೆ ಇಲ್ಲ. S. G. A. ದ ಮುಖ್ಯ ಕೆಲಸ ವಿದ್ಯಾರ್ಥಿಗಳಿಗೆ ಓದಲು ಅನುಕೂಲವಾಗುವಂತೆ Student Employment office ತೆರೆದು, ವಿರಾಮ ಕಾಲದಲ್ಲಿ ಹಣಗಳಿಸಲು ತಕ್ಕ ಏರ್ಪಾಡನ್ನೂ ಮಾಡಿಕೊಡುವುದು. ಮತ್ತು ಇತರ ಎಲ್ಲ ಸಂಘಗಳ ಜೊತೆಗೂ ಸಹಕರಿಸಿ ಇವರು ಕೆಲಸಮಾಡುತ್ತಾರೆ. ಈ ಸಂಘ ರಾಜಕೀಯದಲ್ಲಿ ಪ್ರತ್ಯೇಕ ಭಾಗವಹಿಸುತ್ತದೆ. ಈಗಾಗಲೇ ಅನೇಕ ಪಕ್ಷ ವಹಿಸಿಕೊಂಡು ಪ್ರಚಾರ ಪ್ರಾರಂಭಿಸಿದ್ದಾರೆ. ಬೋರ್ಡುಗಳಲ್ಲಿ ತಮ್ಮ ರಾಜಕೀಯ ಮುಂದಾಳುವಿನ ಚಿತ್ರದೊಂದಿಗೆ ಮೆರವಣಿಗೆ ಹೋಗುತ್ತಾರೆ. ರಸ್ತೆಯಲ್ಲಿ "Vote for Taft" "Eat less" ಎಂದು ಜಯಘೋಷಮಾಡುತ್ತಾ ತಿರುಗುತ್ತಾರೆ. ಪಕ್ಷ ಪಕ್ಷಗಳಲ್ಲಿ ಆಗಾಗ್ಗೆ ಜಗ್ಗಾಟ ಉಂಟಾಗುವುದೂ ಸಹಜ. ಆಗ ಬೀರ್ ಬಾಟ್ಲಗಳು ಲೀಲಾ ಜಾಲವಾಗಿ ರಸ್ತೆಗೆ ಬರುತ್ತವೆ. ನಮ್ಮ S. G. A. ಅಷ್ಟು ರಭಸಕ್ಕೆ ಇನ್ನೂ ಹೋದಂತೆ ನನ್ನ ಕಣ್ಣಿಗೆ ಬಿದ್ದಿಲ್ಲ.

U. N. O.

ಇದಾದ ನಂತರ ಬರುವ ಸಂಘ, Student United Nations Organisation. ಈ ಸಂಘ ಸ್ಥಾಪನೆಯಾಗಿ ಎರಡು ವರ್ಷಗಳಾಯಿತು. ಮೊನ್ನೆಯ ನವೆಂಬರಿನಲ್ಲಿ ಎರಡನೆಯ ವಾರ್ಷಿಕ ಸಭೆ ನಡೆಯಿತು. ಈಗಿನಿಂದಲೇ ವಿದ್ಯಾರ್ಥಿಗಳಿಗೆ ಪ್ರಜಾಪ್ರಭುತ್ವ, ಅಂತರರಾಷ್ಟ್ರೀಯತೆ, ಮತ್ತು 'One world' ತತ್ವಗಳನ್ನು ಮನಸ್ಸಿನಲ್ಲಿ ತಿಂಡುಕೊಂಡು ಬೆಳೆಯಲು ತರಲು ಅನುಕೂಲವಾಗುವಂತೆ ಪ್ರಾಕ್ಟೀಸ್. ಆದರೆ ಬುದ್ಧಿ ಕೊಡಲಿಯ ಪೆಟ್ಟು ಹಾಕಿದಂತೆ, ನಮ್ಮ ಕ್ರೈಸ್ತ ವಿಶ್ವವಿದ್ಯಾನಿಲಯ ಅಮೇರಿಕದ ಹರಿಜನರಿಗೆ ಓದಲು ಅವಕಾಶ ಕೊಡದಂತೆ, U. N. O. ದಲ್ಲಿಯೂ ಮಿಸ್ಸೋರಿ ಸಂಸ್ಥಾನದ ಅಮೇರಿಕದ ಹರಿಜನರ (ನಿಗ್ರೋ) ಕಾಲೇಜಿನ ಪ್ರತಿನಿಧಿಗಳಿಗೆ ಅವಕಾಶವಿರಲಿಲ್ಲ. ಈ ಸಲದ ಅಧಿವೇಶನದಲ್ಲಿ ಭಾರತೀಯ ಡೆಲಿಗೇಷನ್ನೂ ಭಾಗವಹಿಸಿತ್ತು. ಪ್ರತಿನಿಧಿತವಾದ ಸುಮಾರು ೪೫ ದೇಶಗಳಲ್ಲಿ ಭಾರತದ ನಮ್ಮ ಧ್ವಜವೂ ತಲೆ ಎತ್ತಿ ನಿಂತಿತ್ತು. ಮೆರವಣಿಗೆಯಲ್ಲಿ ನಮ್ಮ ಕಾರಿಗೆ ಎರಡನೆಯ ಸ್ಥಾನ! ನಮ್ಮ ಕಾರಿನ ಮುಂದೆ "Down with Racial Discrimination" ಎಂಬ ತಮ್ಮ ಹಲಿಗೆಯನ್ನು ತಗಲು ಹಾಕಿದ್ದೆವು. ಮೆರವಣಿಗೆ ನಿಗ್ರೋ ಬಿಡಾರಕ್ಕೆ ಬಂದಾಗ, ನಮ್ಮ ಕಾರನ್ನು ನೋಡಿ ಅವರೆಲ್ಲರೂ ಚಪ್ಪಾಳೆ ತಟ್ಟಿದರು. ಮೆರವಣಿಗೆಯಲ್ಲಿ ನಮ್ಮ ಭಾರತೀಯ ತ್ರಿವರ್ಣ ಧ್ವಜ ಹೊತ್ತು, ಭಾರತೀಯ ಉಡುಪಿನಲ್ಲಿಯೇ ನಾವು ಹೋಗಿದ್ದೆವು. ಈ ವರ್ಷದ ಸಭೆಯ ಪ್ರಾರಂಭೋತ್ಸವವನ್ನು ಗ್ರೀಸಿನ ರಾಯಭಾರಿಗಳು ನೆರವೇರಿಸಿದರು. ಅವರ ಭಾಷಣದಲ್ಲಿ ಅಮೇರಿಕಾ ಸರಕಾರವನ್ನು ಟೀಕಿಸಿದ್ದರಿಂದ, ಕೊನೆಗೆ ವಿಶ್ವವಿದ್ಯಾನಿಲಯ ಅಧ್ಯಕ್ಷರು U. N. O. ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ಇದು ಅಮೇರಿಕದ ಪ್ರಜಾಪ್ರಭುತ್ವ! ಇರಲಿ. ಭಾರತೀಯ ಪ್ರತಿನಿಧಿಗಳು, ನಿಗ್ರೋಗಳಿಗೆ ಸಭೆಗೆ ಬರಲು ಅವಕಾಶ ಕೊಡಬೇಕೆಂದು ಬಂದ ನಿರ್ಣಯ ತಿರಸ್ಕೃತವಾಗಲಾಗಿ, ಸಭೆಯಿಂದ walk out ಮಾಡಿದರು. ಪಾಲೆಸ್ಟೈನ್ ಪ್ರಶ್ನೆ ಬಂದಾಗ ಭಾರತೀಯ ಪ್ರತಿನಿಧಿಗಳ ಅಧ್ಯಕ್ಷರು ಪಾಕಿಸ್ತಾನ್ ವಿಭಜನೆಯನ್ನು ತೀವ್ರವಾಗಿ ಖಂಡಿಸಿ ಪಂಜಾಬಿನ ಉದಾಹರಣೆಯನ್ನು ಕೊಟ್ಟು ಮಾತನಾಡಿದರು. ಈ U. N. O. ಪ್ರಪಂಚ ಸಂಘದ ಪ್ರತೀಕ ವರ್ಷಕ್ಕೆ ಒಂದು ಸಲ Genral Assembly ಸೇರುವುದಲ್ಲದೆ ಆಗಾಗ್ಗೆ ಪ್ರಪಂಚದ ಸಮಸ್ಯೆಗಳ ಮೇಲೆ ಅನೇಕ ವಿದ್ವಾಂಸರನ್ನು ಭಾಷಣ ಮಾಡಿಸುತ್ತಾರೆ. ಸದಸ್ಯ ಚಂದಾ ಟರ್ಮಿಗೆ ಡಾಲರು. ನಿಗ್ರೋ ಜನರನ್ನು ಬಿಟ್ಟು ಯಾರು ಬೇಕಾದರೂ ಸದಸ್ಯರಾಗಬಹುದು.

I. N. C. C.

ಮೂರನೆಯದು Inter National Cosmopolitan Club. ಪರದೇಶದಿಂದ ಬಂದ ವಿದ್ಯಾರ್ಥಿಗಳು ನಾನು ವಿದ್ಯಾರ್ಥಿಗಳು ಎಂದು ಬರೆದದ್ದಗಳೆಲ್ಲಾ, ವಿದ್ಯಾರ್ಥಿನಿಯರೂ ಇರುವರೆಂದು ತಿಳಿದುಕೊಳ್ಳಬೇಕು. ಇಲ್ಲಿಯ ಎಲ್ಲಾ ಶಾಲೆ ಕಾಲೇಜುಗಳಲ್ಲಿಯೂ ಸಹಶಿಕ್ಷಣ ನಡೆಯುತ್ತದೆ. ಹುಡುಗ ಈ ದೇಶದಲ್ಲಿ ಹುಡುಗಿಯನ್ನು ಆಲಂಗಿಸಿದರೆ ದೋಷವಿಲ್ಲ. ತಮ್ಮ ಮನೆಯ ನೆನವರಿಕೆಯ ಕೊರಗನ್ನು ಕಳೆದುಕೊಂಡು ಸಂತೋಷದಿಂದ ಕಾಲಕಳೆದು, ವಿದ್ಯಾರ್ಥಿ ದೆಶೆಯನ್ನು ಮುಗಿಸಿಕೊಂಡು ಮರಳಿ ಹೋಗಲು ಅನುಕೂಲವಾಗುವಂತೆ, ಈ ಸಂಘ ಸ್ಥಾಪನೆಯಾಗಿದೆ. ಇದು ಸ್ಥಾಪನೆಯಾಗಿ ಕೇವಲ ಎರಡು ವರ್ಷಗಳಾಯಿತು. ಇದರ ಸ್ಥಾಪನೆಗೆ ಕಾರಣ, ಪ್ರೊ॥ ರೆಂಚ್ ಮತ್ತು ಅವರ ಪತ್ನಿ, ಪ್ರೊ॥ ಆರನ್ ಸ್ಟ್ರಾಂಡ್ ಮತ್ತು ಅವರ ಪತ್ನಿ. ಪರದೇಶದ ವಿದ್ಯಾರ್ಥಿಗಳಿಗೆ ಸಾಕಷ್ಟು ಸಹಾಯ ಕೊಟ್ಟು ಆಗಾಗ್ಗೆ ಭೇಟಿಮಾಡಿ ಮಾತನಾಡಿಸುತ್ತಾರೆ. ಪ್ರತಿ ಬುಧವಾರ ಸಂಜೆ ಎಲ್ಲ ಸದಸ್ಯರು ಒಟ್ಟು ಸೇರುತ್ತಾರೆ. ಸಿನಿಮಾ, ನಾಟಕ, ಪ್ರದರ್ಶನಗಳಲ್ಲದೆ, ಸಭೆ ಚರ್ಚೆಗಳೂ ನಡೆಯುತ್ತವೆ. ಬೇಸಿಗೆಯ ಕಾಲದಲ್ಲಿ, ಚಳಿಯಿಲ್ಲದಾಗ, ಊರು ಬಿಟ್ಟು ಬೇರೆಯ ಕಡೆಗೆ ವಿಹಾರ ಯಾತ್ರೆಗೆ ಹೋಗುವುದೂ ಉಂಟು. ಈ ಸಂಘದ ಅಧ್ಯಕ್ಷ ದಕ್ಷಿಣ ಅಮೇರಿಕದ ಶ್ರೀ. ಫೆಡರಿಕೋ ಡೆಮ್ಬ್ರರ್ ಎಂದು ಈತ ಬಹುಶ್ರಮವಹಿಸಿ ಕೆಲಸಮಾಡುತ್ತಾನೆ. ಓದು ಮುಗಿಸಿ Spanish ಭಾಷೆಯ ಉಪಾಧ್ಯಾಯನಾಗಿದ್ದ. ಈಗ ನ್ಯೂಯಾರ್ಕಿಗೆ ಹೋಗುವದರಲ್ಲಿದ್ದಾನೆ. ಈ ಸಂಘದಲ್ಲಿ ಸುಮಾರು ೧೦೦ ಪರದೇಶದ ವಿದ್ಯಾರ್ಥಿಗಳಿದ್ದಾರೆ. ಅದರಲ್ಲಿ ಚೈನಾ ದೇಶದವರೇ ಹೆಚ್ಚು. ತಿಂಗಳಿಗೊಂದು ಸಲ, ಒಂದು ಗೊತ್ತಾದ ಕಡೆ, ಸಂಜೆ ೪॥ ಘಂಟೆಗೆ ಕಾಫಿ ಕಾಲ ಎಂದು ನಡೆಯುತ್ತದೆ. ಒಬ್ಬರಿಗೊಬ್ಬರು ಬಂದು ಭೇಟಿ ಮಾಡಿ, ಯೋಗಕ್ಷೇಮ ವಿಚಾರಿಸಿಕೊಂಡು, ಕಾಫಿ ಕುಡಿದು, ಬಿಸ್ಕಿಟ್ ತಿಂದು ನಲಿದು ನಕ್ಕು ಹೋಗುವ ಪದ್ಧತಿ. ಕೊನೆಗೆ ನರ್ತನವೂ ನಡೆಯುತ್ತದೆ. ಈ ನರ್ತನವಾದ ನಂತರ (ಸೋಡಾ) ಕೋಕ್ ಕುಡಿದು ಮನೆಗೆ ತೆರಳುತ್ತಾರೆ. ಇಂತಹ ಸಭೆಗೆ 'Get together' ಸಭೆ ಎಂದೂ ಹೆಸರು. ಕೊಲಂಬಿಯಾ ನಗರದಲ್ಲಿ ಈ ಸಂಘ ತುಂಬ ಹೆಸರುವಾಸಿಗೆ ಬಂದಿದೆ.

I. M. A. ಮತ್ತು I. W. A.

Independent Men's and Indpendent women's Association ಎಂಬುವು ಎರಡು ಪ್ರತ್ಯೇಕ ಸಂಘಗಳು. ಈ ಸಂಘಗಳಿಗೆ ಯಾರು ಬೇಕಾದರೂ ಸದಸ್ಯರಾಗಬಹುದು. ಈ ಸಂಘಗಳ ಮುಖ್ಯ ಉದ್ದೇಶ ಮಜಾಮಾಡುವುದು. ತಿಂಗಳಿಗೆ ಎರಡು ಬಾರಿ ನರ್ತನಕೂಟ ಏರ್ಪಡಿಸುತ್ತಾರೆ. ಹೊರಗಡೆ ವನಭೋಜನಕ್ಕೆ ಹೋಗುತ್ತಾರೆ, ನಲಿಯುತ್ತಾರೆ, ನರ್ತನ ಮಾಡುತ್ತಾರೆ. ಕುಡಿಯುತ್ತಾರೆ ಈ ಸಂಘದ ಸದಸ್ಯರೊಬ್ಬರಿಗೆ ಜೊತೆಗಾತಿ ಸಿಕ್ಕದಿದ್ದರೆ, ಅವರಿಗೆ ಜೊತೆಗಾತಿ ಪಡೆಯಲು ಅನುಕೂಲ ಮಾಡಿಕೊಡುತ್ತಾರೆ ಅದಕ್ಕಾಗಿ Dating Service ಎಂಬ ಆಫೀಸನ್ನೇ ಏರ್ಪಡಿಸಿದ್ದಾರೆ. ಆಫೀಸಿನಲ್ಲಿರುವ ಕಾರ್ಡನ್ನು ತುಂಬಬೇಕು. ಅದರಲ್ಲಿ ಹೆಸರು, ವಿಳಾಸ, ಅಭಿರುಚಿ, ಉದ್ದೇಶ ಮುಂತಾದವುಗಳನ್ನು ನಮೂದಿಸಬೇಕು. ಅದಕ್ಕೆ ತಕ್ಕಂತೆ, ಆತನ ಅಭಿರುಚಿಗೆ ಅನುಕೂಲಗಳಾದ ಹುಡುಗಿಯನ್ನು ಆರಿಸಿ ಕೊಡುವುದು Dating Service ದ ಕೆಲಸ.

G. C.

ಗ್ರ್ಯಾಜ್ಯುಯೇಟ್ ಕ್ಲಬ್ಬ ಎನ್ನುವುದು ಬರೀ ಹೋಸ್ಟ ಗ್ರ್ಯಾಜ್ಯುಯೇಟ್ ಅಭ್ಯಾಸ ಮಾಡುವವರ ಸೌಲಭ್ಯಕ್ಕಾಗಿ. ಚರ್ಚೆಗಳು, ಭಾಷಣಗಳು, ಸ್ವಲ್ಪ ಹೆಚ್ಚಿನ ಮಟ್ಟದಲ್ಲಿರುತ್ತವೆ. ಈ ಸಂಘವೂ ನರ್ತನ ಪಾರ್ಟಿ ಏರ್ಪಡಿಸುತ್ತದೆ. ಗ್ರ್ಯಾಜ್ಯುಯೇಟ್ ವಿದ್ಯಾರ್ಥಿಗಳ ಕುಂದು ಕೊರತೆಗಳನ್ನು ಹೋಗಲಾಡಿಸಲು ಅನುಕೂಲ ಮಾಡಿಕೊಡುತ್ತದೆ.

P. S. A.

ಪ್ರಾಗ್ರೆಸಿವ್ಹ ಸ್ಟುಡಂಟ್ಸ ಅಸೋಸಿಯೇಶನ್ ಎಂಬುದು ಹೆನ್ರಿ ವಾಲೇಸರ ಪ್ರೊಗ್ರೆಸಿವ್ಹ ಸಿಟಿಝನ್ಸ ಆಫ ಅಮೇರಿಕಾ ಸಂಘದ ಮರಿ. ಹೆನ್ರಿ ವಾಲೇಸರ ತತ್ವಗಳನ್ನು ಪ್ರತಿಪಾದಿಸುವುದೇ ಇದರ ಮುಖ್ಯ ಉದ್ದೇಶ. ನಿಗ್ರೋ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯದಲ್ಲಿ ಓದಲು ಅವಕಾಶ ಕೊಡಬೇಕೆಂದು ಚಳುವಳಿ ಹೂಡಿದೆ. ಇದು ಸಮಾಜವಾದಿ ಸಂಸ್ಥೆ ಎಂದು ಅಧಿಕಾರಿಗಳ ದೂರು. ಪ್ರಗತಿಪರ ಅಮೇರಿಕನ್ ಸಂಘವೆಂದು ವಿದ್ಯಾರ್ಥಿಗಳ ಉತ್ತರ.

ಸ್ಟಿಗ್ಮ ಟೈಜ

ಸ್ಟಿಗ್ಮಟೈಜ್ ಎಂಬುದು ಪತ್ರಿಕಾ ವ್ಯವಸಾಯವನ್ನು ಕಲಿಯಲು ಬಂದಿರುವ ವಿದ್ಯಾರ್ಥಿಗಳ ಸಂಸ್ಥೆ. ಪ್ರಪಂಚದ ಯಾವ ರಾಜಧಾನಿಯಲ್ಲೂ ಇಲ್ಲದಷ್ಟು ಸುದ್ದಿಗಾರರು ಕೊಲಂಬಿಯಾದಲ್ಲಿದ್ದಾರೆ. ೧೦೦೦ ಸುದ್ದಿಗಾರರು! ಅಬ್ಬಾ! ಪತ್ರಿಕಾ ವ್ಯವಸಾಯಕ್ಕೆ ಸಂಬಂಧಪಟ್ಟ ಸುದ್ದಿಗಳನ್ನು ಅಭ್ಯಸಿಸುವುದು, ಸುಪ್ರಸಿದ್ಧ ಪತ್ರಿಕೋದ್ಯಮಿಗಳನ್ನು ಕರೆಯಿಸಿ, ಅವರಿಂದ ಭಾಷಣ ಚರ್ಚೆ ಮಾಡಿಸುವುದು ಇದರ ಉದ್ದೇಶ. ಶಾಖೆಯ ಮುಖ್ಯಾಧಿಕಾರಿ ಶ್ರೀ. ಫ್ರಾಂಕ್ ಲೂಥರ್ ಮಾಟ್‌ರು ನೇರವಾದ ಆಸಕ್ತಿಯನ್ನು ವಹಿಸಿ ಆಗಾಗ್ಗೆ ಸಂಘದ ಕೆಲಸದ ಬಗ್ಗೆ ಸಲಹೆ ಕೊಡುತ್ತಾರೆ. ಈ ಸಂಘವು ಪ್ರತಿ ವರ್ಷದ ಮೇ ತಿಂಗಳಲ್ಲಿ ಜರ್ನಲಿಸಂ ವಾರವನ್ನು ಏರ್ಪಡಿಸಿ, ದೇಶದ ನಾನಾ ಸುಪ್ರಸಿದ್ಧ ಪತ್ರಿಕೋದ್ಯಮಿಗಳನ್ನು ಕರೆಯಿಸಿ ಒಂದು ದೊಡ್ಡ ಜರ್ನಲಿಸಂ ಹಬ್ಬವನ್ನೇ ಮಾಡುತ್ತಾರೆ. ಇದೇ ಇವರ-ನಮ್ಮ-ಪ್ರಮುಖ ಹಬ್ಬ. ಹಬ್ಬದ ಕೊನೆಯ ದಿನ ಪರದೇಶದ ವಿದ್ಯಾರ್ಥಿಗಳಿಗೆ ವಿಶೇಷ ಔತಣವೊಂದನ್ನೇರ್ಪಡಿಸಿ ಆಯಾ ದೇಶದ ವೃತ್ತ ಪತ್ರಿಕಾ ಪ್ರಪಂಚ ತಿಳಿದುಕೊಳ್ಳುತ್ತಾರೆ.

Y. M. C. A. ಮತ್ತು Y. W. C. A.

ವಿದ್ಯಾರ್ಥಿಗಳಿಗೆ ಪ್ರತ್ಯೇಕವಾಗಿ Y. M. C. A. ಮತ್ತು Y. W. C. A. ಶಾಖೆಗಳಿವೆ. ಹೊಸದಾಗಿ ಬಂದ ವಿದ್ಯಾರ್ಥಿಗಳಿಗೆ ಇರಲು ಸ್ಥಳಾವಕಾಶ ಕೊಡುವದು, ಮಾನವ ಕುಲದ ಕಲ್ಯಾಣದ ಕೆಲಸಗಳಲ್ಲಿ ಸಹಕರಿಸುವುದು, ಸಾಮಾನ್ಯವಾಗಿ ವಿದ್ಯಾರ್ಥಿಗಳ ಕುಂದುಕೊರತೆಗಳನ್ನು ನಿವಾರಿಸಲು ಪ್ರಯತ್ನಪಡುವದು, ಇವೇ ಇದರ ಮುಖ್ಯ ಉದ್ದೇಶ. ಇನ್ನೂ ಈ ಊರಿಗೆ Y. M. C. A. ದ ಕಾಯಂ ಶಾಖೆ ಮನೆಮಾಡಿಕೊಂಡು ಜೀವಿಸುತ್ತಿಲ್ಲವಾಗಿ, ಇಲ್ಲಿಯ Y. M. C. A. ದ ಕೆಲಸ ಅಷ್ಟು ಹುರುಪಿನಿಂದ ನಡೆಯುತ್ತಿಲ್ಲ.

M. S. O.

ಇದಲ್ಲದೆ Methodist Student Organisation ಎಂದು ಕೇವಲ ಒಂದು ಚರ್ಚಿನ ಆಡಳಿತಕ್ಕೊಳಪಟ್ಟ, ಆ ಮತಪಂಥದವರ ಒಂದು ವಿದ್ಯಾರ್ಥಿ ಸಂಘವಿದೆ. ಇವರು ಪ್ರತಿ ಶುಕ್ರವಾರ ಸಾಯಂಕಾಲ ಸಭೆ ಸೇರಿ ಆಟಗಳಲ್ಲಿ ನಿರತರಾಗುತ್ತಾರೆ. ಯಾರು ಬೇಕಾದರೂ ಗೌರವ ಸದಸ್ಯರಾಗಬಹುದು. ಈ ಸಲ ಈ ಸಂಘದ ಸದಸ್ಯರು ಹಣ, ಬಟ್ಟೆ, ಆಹಾರ ಶೇಖರಿಸಿ ಯುರೋಪಿನಲ್ಲಿ ನರಳುತ್ತಿರುವವರಿಗೆ ಕಳುಹಿಸಿಕೊಟ್ಟರು ಇಂತಹ ಕೆಲಸಮಾಡುತ್ತಿರುವ ಸಂಸ್ಥೆ ಇದೊಂದೆ.

ನಮ್ಮ ವಿಶ್ವವಿದ್ಯಾನಿಲಯದಲ್ಲಿ ಸುಮಾರು ೧೦೦ ಪರದೇಶದ ವಿದ್ಯಾರ್ಥಿಗಳಿದ್ದಾರೆ ಎಂದು ಹಿಂದೆಯೇ ತಿಳಿಸಿದ್ದೇನಷ್ಟೆ. ಇದರಲ್ಲಿ ಚೈನಿಯರು ೩೦, ದಕ್ಷಿಣ ಅಮೇರಿಕದವರು ೨೦, ಭಾರತೀಯರು ೧೫ ಸಿರಿಯನ್‌ರು (ಅರಬದೇಶದವರು) ೧೫, ಉಳಿದವರು ನಾನಾ ದೇಶದವರು. ಇವರಲ್ಲಿ ಮೂರು ದೇಶದವರು ತಮ್ಮದೇ ಆದ ಸಂಘಗಳನ್ನೇರ್ಪಡಿಸಿಕೊಂಡಿದ್ದಾರೆ.

I. A. C.

ಇಂಟರ ಅಮೇರಿಕನ್ ಕ್ಲಬ್ ಎಂಬುದು ಸ್ಪ್ಯಾನಿಷ್ ಮಾತನಾಡುವ ದಕ್ಷಿಣ ಅಮೇರಿಕದ ವಿದ್ಯಾರ್ಥಿಗಳದು. ತಿಂಗಳಿಗೊಮ್ಮೆ ಒಂದೆಡೆ ಸೇರಿ, ನರ್ತನ, ಹಾಡು, ತಮ್ಮದೇ ಆಹಾರ, ಮುಂತಾದವುಗಳಲ್ಲಿ ಮಗ್ನರಾಗಿರುತ್ತಾರೆ. ಆಗಾಗ್ಗೆ ತಮ್ಮ ದೇಶಗಳ ಬಗ್ಗೆ ವಿಷಯ ತಿಳಿಸಲು ಸಭೆಸೇರಿ ಪರದೇಶದ ಮತ್ತು ಅಮೇರಿಕನ್ ವಿದ್ಯಾರ್ಥಿಗಳನ್ನು ಔತಣಕೊಡುತ್ತಾರೆ. ಇದು ಜನ್ಮತಾಳಿ ನಾಲ್ಕು ತಿಂಗಳು ಮಾತ್ರವಾದರೂ ಸಾಕಷ್ಟು ಕೆಲಸಮಾಡಿದೆ. ಸ್ಪ್ಯಾನಿಷ್ ಭಾಷೆ ಕಲಿಯಲಿಚ್ಛಿಸುವವರಿಗೆ ಪುಕ್ಕಟ್ಟೆಯಾಗಿ ಹೇಳಿಕೊಡುವ ವ್ಯವಸ್ಥೆ ಮಾಡಿದ್ದಾರೆ. ಸಾಮಾನ್ಯವಾಗಿ ಈ ಸಂಘದ ಧೋರಣವು ಅಗ್ರಹಶೀಲವಾದುದಲ್ಲ

C. S. A.

ಚೈನೀಜ ಸ್ಟುಡಂಟ್ಸ ಅಸೋಸಿಯೇಶನ್ ಸ್ಥಾಪಿತವಾಗಿ ಮೂರು ತಿಂಗಳಾಯಿತು ಪೂರ್ವ ಏಷ್ಯಾದ ವಿದ್ಯಾರ್ಥಿಗಳ ಮೇಲೆ ಈ ಅಮೇರಿಕನ್ನರಿಗೆ, ಏನೋ ಒಂದು ಅಭಿಮಾನ. ಕಾರಣ ಈ ಸಂಘಗಳಿಗೆ ಹೆಚ್ಚು ಜನ ಬರುತ್ತಾರೆ. ವಿಷಯ ತಿಳಿದುಕೊಳ್ಳಬೇಕೆಂಬುದು ಅವರ ಹಿರಿಯ ಅಭಿಲಾಷೆ. ಮೊನ್ನೆ ರಾತ್ರಿ ಚೀನಾ ವಿದ್ಯಾರ್ಥಿಗಳೆಲ್ಲರೂ ಸೇರಿ "ಚೀನಾ ರಾತ್ರಿ" ಎಂಬ ಪ್ರದರ್ಶನವನ್ನೇರ್ಪಡಿಸಿದ್ದರು. ಚೀನೀಯರ ಕಲೆ, ನರ್ತನ, ಹಾಡುಗಳು, ನಾಟಕ ಮುಂತಾದುವನ್ನು ಪ್ರದರ್ಶಿಸಿದ್ದರು. ಚೀನೀಯರ ಮದುವೆಯ ಪದ್ಧತಿ ಸಭಿಕರನ್ನು ಆನಂದಸಾಗರದಲ್ಲಿ ಮುಳುಗಿಸಿತು. ಇಬ್ಬರು ಚೀನೀ ವಿದ್ಯಾರ್ಥಿಗಳು, ರಂಗಸ್ಥಳದ ಮೇಲೆಯೇ ಮದುವೆಯ ಸಮಾರಂಭ ನಡೆಯಿಸಿಬಿಟ್ಟರು. ಚೀನಾದೇಶದ ಚಲನ ಚಿತ್ರ ಪ್ರದರ್ಶನದೊಂದಿಗೆ ಆ ರಾತ್ರಿ ಮುಗಿಯಿತು.

I. S. A.

ಇಂಡಿಯನ ಸ್ಟುಡೆಂಟ್ಸ ಅಸೋಸಿಯೇಶನ್, ಭಾರತೀಯ ವಿದ್ಯಾರ್ಥಿಗಳ ಸಂಘ. ಇದರ ಜನ್ಮ ನವೆಂಬರ ೩೦—೪೭ ರಲ್ಲಿ ಅದಕ್ಕೆ ಮುಂಚೇ ಕೇವಲ ೬ ವಿದ್ಯಾರ್ಥಿಗಳಿದ್ದ ಕಾರಣ ಸಂಘದ ಅವಶ್ಯಕತೆ ಇರಲಿಲ್ಲ. ವೈಯಕ್ತಿಕವಾಗಿ ನಾವೇ ಅನಧಿಕೃತ ಭಾರತದ ರಾಯಭಾರಿಗಳಾಗಿದ್ದೆವು. ನಮ್ಮ ಸಂಘದ ಪ್ರಾರಂಭೋತ್ಸವವನ್ನು ಪ್ರಪಂಚ ವಿದ್ಯಾರ್ಥಿ ಸಂಘದ, ಡಾ॥ ಮಾಲ್ಕಂ ಆದಿಶೇಷಯ್ಯನವರು ನೆರವೇರಿಸಿದರು ಡಾ॥ ರಾಜೇಂದ್ರ ಪ್ರಸಾದರ ಜನ್ಮದಿನ ನೆರವೇರಿಸಿ, ರಾಯಭಾರಿ ಆಸಫ ಅಲ್ಲಿಯವರ ಸ್ವಾಗತಕ್ಕಾಗಿ ಭಾರೀ ಪ್ರಚಾರಮಾಡಿದ್ದೆವು. ಅನಾರೋಗ್ಯದ ನಿಮಿತ್ತ ಅವರು ಬರುವುದಿಲ್ಲವೆಂದು ತಂತಿ ಕಳುಹಿಸಿ ನಮ್ಮ ಆಸೆ, ಸ್ಫೂರ್ತಿ, ಉತ್ಸಾಹವನ್ನು ಭಂಗಮಾಡಿಬಿಟ್ಟರು. ಆದರೂ ನಾವೇ ರಾಯಭಾರಿಗಳಾಗಿ ಸಭೆ ನಡೆಯಿಸಿಯೇ ಬಿಟ್ಟೆವು.

ನಮ್ಮ ಸಂಘದ ಉದ್ದೇಶ, ಭಾರತೀಯ ಹೊಸ ವಿದ್ಯಾರ್ಥಿಗಳಿಗೆ ಊಟ ವಸತಿ ಅನುಕೂಲ ಮಾಡಿಕೊಡುವುದು, ಭಾರತೀಯ ಸಂಸ್ಕೃತಿ ಅಮೇರಿಕನ್ನರಲ್ಲಿ ಹರಡುವುದು, ಭಾರತೀಯ ಹಾಸ್ಟೆಲ ಒಂದನ್ನು ಸಾಧ್ಯವಾದರೆ ಸ್ಥಾಪಿಸುವುದು. ನಮ್ಮ ಸಂಘದ ಸದಸ್ಯರು ಒಳ್ಳೆಯ ಭಾಷಣಕಾರರೆಂದು ಹೆಸರು ಪಡೆದಿದ್ದಾರೆ. ಸುತ್ತಮುತ್ತಲೂ ಇರುವ ನಾನಾ ಊರು, ಪಟ್ಟಣಗಳ ರೋಟರೀ ಕ್ಲಬ್ಸ್, ಚೇಂಬರ್ ಆಫ್ ಕಾಮರ್ಸ್, ಮತ್ತು ಚರ್ಚುಗಳಲ್ಲಿ ಅನೇಕ ಭಾಷಣಗಳನ್ನು ಮಾಡಿ ನಮ್ಮ ಸದಸ್ಯರು ಹೆಸರು ಪಡೆದಿದ್ದಾರೆ. ಇದರಿಂದ ಹುರುಪುಗೊಂಡ ಈ ಸಂಘದ ಮುಂದಿನ ಟರ್ಮಿನ ಕಾರ್ಯಕ್ರಮ ಜೋರಾಗಿದೆ. ಸಂಘವನ್ನು ಹರಸಿ ಶ್ರೀಮತಿ ಪರ್ಲ್ ಬಕ್‌, ಪ್ರೊ॥ ಯಿನ್ ಸ್ಟೀನ್ ಮತ್ತು ಸರ್ದಾರ್ ಜೆ. ಜೆ. ಸಿಂಗ್ ತಂತಿ ಕಳುಹಿಸಿದ್ದಾರೆ. ಈಗ ತಾನೆ ನಮ್ಮ ಸಂಘ ಜನ್ಮ ತಾಳಿದೆ. ಬೆಳೆದು ಅಭಿವೃದ್ಧಿಯಾಗುವ ಕುರುಹುಗಳೂ ಇವೆ. ಪಾಕಿಸ್ತಾನದ ಇಬ್ಬರು ಪ್ರತಿನಿಧಿಗಳೂ ನಮ್ಮ ಸಂಘದಲ್ಲೇ ಸೇರಿಕೊಂಡಿದ್ದಾರೆ. ಮೊನ್ನೆ ಗಾಂಧೀಜಿ ಉಪವಾಸ ಪ್ರಾರಂಭ ಮಾಡಿದಾಗ ಅವರ ಜೀವ ಉಳಿಯಲೆಂದು ನಮ್ಮ ಸಂಘದವರು ಚರ್ಚಿನಲ್ಲಿ ಹೋಗಿ ವಿಶೇಷ ಪ್ರಾರ್ಥನೆ ಒಂದನ್ನು ನಡೆಯಿಸಿದೆವು. ನಮ್ಮ ಆರ್ತನಾದ ದೇವರಿಗೆ ಕೇಳಿಸಿರಬೇಕು ಅಂತೇ ಗಾಂಧೀಜಿ ಆಗ ಉಪವಾಸ ನಿಲ್ಲಿಸಿದರು. ನಮ್ಮ ಸಂಘ ಸಂತೋಷದಲ್ಲಿ ಮುಳುಗಿತು. ಗಾಂಧೀಜಿ ಉಪವಾಸಕ್ಕೂ ನಮ್ಮ ಪ್ರಾರ್ಥನೆಗೂ ಅಂಟು ಹಚ್ಚಿ ಎಲ್ಲವೂ 'Miracle' ಎಂದು ನಮ್ಮ ವಿಶ್ವವಿದ್ಯಾಲಯ ಪತ್ರಿಕೆ ಪ್ರಕಟಿಸಿತು.

ಬಿಹಾರ ಜಮೀನದಾರಿ ನಾಶಕ ಮಸೂದೆಯು ಸ್ವೀಕೃತವಾದನಂತರ, ಪ್ರಾಂತದಲ್ಲಿರುವ ಎಲ್ಲ ಖಾಸಗಿ ಕಾಡು ಮತ್ತು ಅವುಗಳಿಗೆ ಸಂಬಂಧಿಸಿದ ಭೂಮಿಗಳನ್ನು ಸರಕಾರವು ವಶಪಡಿಸಿಕೊಳ್ಳುವದು ನಿಶ್ಚಿತವೆಂದು ಕಂದಾಯಮಂತ್ರಿಗಳಾದ ಶ್ರೀಕೃಷ್ಣ ವಲ್ಲಭ ಸಹಾಯ ಅವರು ತಾ. ೨ ಕ್ಕೆ ಬಿಹಾರ ಶಾಸನ ಸಭೆಯಲ್ಲಿ ಹೇಳಿದರು.

ಸಂಪಾದಕೀಯ ಟೀಕೆಟಿಪ್ಪಣಿಗಳು

ಹೊಸ ವರುಷ

ಈ ಸಂಚಿಕೆಯಿಂದ 'ಕರ್ಮವೀರ' ಪತ್ರಿಕೆಗೆ ಇಪ್ಪತ್ತೊಂಭತ್ತು ವರುಷಗಳು ತುಂಬಿ ಇಪ್ಪತ್ತನೆಯ ವರುಷ ಪ್ರಾರಂಭವಾಗಿದೆ. ಈ ಅವಧಿಯಲ್ಲಿ ಪತ್ರಿಕೆಯು ಭಾರತಮಾತೆಯ ಮತ್ತು ಕರ್ನಾಟಕ ದೇವಿಯ ಸೇವೆಯನ್ನು ಯಥಾಶಕ್ತಿ ಮಾಡಿದೆ. ಭಾರತದ ಸ್ವಾತಂತ್ರ್ಯ ಮತ್ತು ಕರ್ನಾಟಕದ ಪ್ರಾಂತೀಕರಣ ಇವೆರಡು ಮುಖ್ಯ ಗುರಿಗಳನ್ನಾಗಿಟ್ಟುಕೊಂಡು ಸಂಸ್ಥಾಪಿತವಾದ ಈ ಪತ್ರಿಕೆಗೆ ಇದೀಗ ಭಾರತ ಸ್ವತಂತ್ರವಾದುದನ್ನು ನೋಡಿ ತುಂಬ ಸಂತೋಷವಾಗುತ್ತದೆ. ಈ ಭಾರತ ಸ್ವಾತಂತ್ರ್ಯದಲ್ಲಿ ಪತ್ರಿಕೆಯು ಮತ್ತು ಪತ್ರಿಕೆಯ ಸಂಪಾದಕರೆಲ್ಲ ಬಗೆಬಗೆಯ ಕಷ್ಟನಷ್ಟಗಳನ್ನು, ಸರಕಾರದ ದಬ್ಬಾಳಿಕೆಯನ್ನು ಸಹಿಸಿ ಕರ್ತವ್ಯ ಮಾಡಿದ ಸಾತ್ವಿಕ ಹೆಮ್ಮೆಯೂ ನಮಗೆ ಇದೆ. ಪತ್ರಿಕೆಯ ಇನ್ನೊಂದು ಧ್ಯೇಯವಾದ ಕರ್ನಾಟಕ ಪ್ರಾಂತೀಕರಣವು ಇನ್ನೂ ಕೈಗೂಡಬೇಕಾಗಿದೆ. ಆ ದಿಸೆಯಲ್ಲಿಯೂ ಯಥಾಶಕ್ತಿ ಪತ್ರಿಕೆಯು ತನ್ನ ಸೇವೆಯನ್ನು ಸಲ್ಲಿಸಲು ಅಣಿಯಾಗಿದೆ. ಈ ಬಗೆಯ ದೇಶ ಸ್ವಾತಂತ್ರ್ಯದ ಧ್ಯೇಯದೊಂದಿಗೆ ಕರ್ನಾಟಕ ಜನತೆಯ ಸಾರ್ವಾಂಗಿಕ ಅಭಿವೃದ್ಧಿಗಾಗಿಯೂ ಪತ್ರಿಕೆಯು ತನ್ನ ಸೇವೆಯನ್ನು ಸಲ್ಲಿಸಿದೆ; ಇನ್ನು ಮುಂದೆಯೂ ಸಲ್ಲಿಸುವ ಆಶ್ವಾಸನ ಕೊಡುತ್ತದೆ. ನಮ್ಮ ಕಾರ್ಯದಲ್ಲಿ ನಮ್ಮ ಗ್ರಾಹಕ ವರ್ಗದವರು ಎಂದಿನಂತೆ ಎಲ್ಲ ಬಗೆಯಿಂದ ಸಹಾಯ ಸಹಕಾರಗಳನ್ನು ನೀಡುವರೆಂದು ನಂಬಿದ್ದೇವೆ. ಈ ವರುಷ ವಿಷಯ ವೈವಿಧ್ಯ, ಸುಂದರ ಚಿತ್ರಗಳು, ಉಪಯುಕ್ತ ಲೇಖಗಳು, ಸುದ್ದಿ ಸಮಾಚಾರ ಮೊದಲಾದವುಗಳಿಂದ ಪತ್ರಿಕೆಯನ್ನು ಇನ್ನಷ್ಟು ಆಕರ್ಷಕ ಮಾಡಲು ಯೋಜಿಸಿದ್ದೇವೆ. ಮುಖಪೃಷ್ಠದ ಮೇಲೆ ಸುಂದರ, ಬಣ್ಣದ ಚಿತ್ರಗಳನ್ನು ಕೊಡುವ ಯೋಜನೆಯನ್ನೂ ಮಾಡಿದ್ದೇವೆ. ನಮ್ಮೀ ಪ್ರಯತ್ನಗಳೆಲ್ಲ ಯಶಸ್ವಿಯಾಗುವಂತೆ ನಮ್ಮ ಗ್ರಾಹಕರು ಎಲ್ಲ ಬಗೆಯಿಂದ ಪ್ರೋತ್ಸಾಹಿಸಲಿ ಮತ್ತು ಪರಮಾತ್ಮನು ಆ ಬಗೆಯ ಶಕ್ತಿಯನ್ನು ನಮಗೆ ದಯಪಾಲಿಸಲೆಂದು ಆಶಿಸುತ್ತೇವೆ.

ರಾಷ್ಟ್ರೀಯ ಸಪ್ತಾಹ

ಇದೇ ಆರನೆಯ ತಾರೀಕಿನಿಂದ ರಾಷ್ಟ್ರೀಯ ಸಪ್ತಾಹ ಪ್ರಾರಂಭವಾಗಿದೆ. ಅಂದು ಜಾಲಿಯನ್ ವಾಲಾಬಾಗದಲ್ಲಿ ಜನರಲ್ ಡಾಯರನು ನಡೆಸಿದ ಹತ್ಯಾಕಾಂಡವನ್ನು ಭಾರತೀಯರೆಂದಿಗೂ ಮರೆಯರು. ಅದರ ಸ್ಮರಣಾರ್ಥ ಈ ವರೆಗೆ ದೇಶವು ರಾಷ್ಟ್ರೀಯ ಸಪ್ತಾಹವನ್ನು ಆಚರಿಸುತ್ತ ಬಂದುದುಂಟು. ಸ್ವತಂತ್ರ ಹಿಂದುಸ್ತಾನವೂ ಈ ಸಪ್ತಾಹವನ್ನು ಆಚರಿಸಿ ವಿವಿಧ ವಿಧಾಯಕ ಚಟುವಟಿಕೆಗಳನ್ನು ನಡೆಸಲಣಿಯಾದುದು ಉಚಿತವೇ ಆಗಿದೆ. ಹಿಂದುಸ್ತಾನಕ್ಕೆ ಸ್ವಾತಂತ್ರ್ಯ ದೊರೆತ ನಂತರದ ಮೊದಲನೇ ಈ ರಾಷ್ಟ್ರೀಯ ಸಪ್ತಾಹ ಅತ್ಯಂತ ಮಹತ್ವದ್ದು. ಅದರಲ್ಲಿಯೂ ಮಹಾತ್ಮಾ ಗಾಂಧಿಯವರ ಮರಣಾನಂತರದ ಈ ಸಪ್ತಾಹಕ್ಕೆ ಮತ್ತಷ್ಟು ಮಹತ್ವ. ಮಹಾತ್ಮರು ಅಂದಿನಿಂದಲೂ ಹೇಳುತ್ತ ಬಂದ ಜಾತೀಯ ಐಕ್ಯ, ಅಸ್ಪೃಶ್ಯತಾನಿವಾರಣೆ, ಖಾದೀ, ಗ್ರಾಮೋದ್ಯೋಗಗಳ ಪ್ರಚಾರ ಮೊದಲಾದವುಗಳಲ್ಲಿ ಈ ಸಪ್ತಾಹದಲ್ಲಿ ಭಾರತೀಯರೆಲ್ಲ ನಿರತರಾಗುವುದು ಅತ್ಯವಶ್ಯ. ಸ್ವಾರ್ಥ, ಅಸೂಯೆ, ಅಧಿಕಾರ ಲಾಲಸೆ, ಲಾಭಬಡುಕತನ, ಜಾತ್ಯಂಧತೆ ಮೊದಲಾದವುಗಳಿಂದ ಬಳಲುತ್ತಿರುವ ಇಂದಿನ ಈ ಜಗತ್ತು ಸುವರ್ಣ ಭೂಮಿಯಾಗಬೇಕಾದರೆ ಮಹಾತ್ಮರ ತತ್ವಗಳ ಆಚರಣೆಯೆ ರಾಮಬಾಣ ಉಪಾಯವು. ಇದನ್ನು ತಿಳಿದುಕೊಂಡದ್ದರಿಂದಲೇ ರಾಷ್ಟ್ರಾಧ್ಯಕ್ಷ ಬಾಬು ರಾಜೇಂದ್ರ ಪ್ರಸಾದರು ಮತ್ತು ಮುಖ್ಯ ಮಂತ್ರಿ ಪಂಡಿತ ಜವಾಹರಲಾಲರು ಈ ವಿಧಾಯಕ ಕಾರ್ಯಕ್ಕಾಗಿಯೇ ಈ ಸಪ್ತಾಹವನ್ನು ಮೀಸಲಾಗಿಡಿರೆಂದು ಕೇಳಿಕೊಂಡದ್ದು. ಭಾರತೀಯರು ಇದರ ಮರ್ಮವನ್ನರಿತು ಅದರಂತೆ ವರ್ತಿಸುವರೆಂದು ನಂಬಿದ್ದೇವೆ.

ಗಾಂಧೀ ರಾಷ್ಟ್ರೀಯ ಸ್ಮಾರಕ ನಿಧಿ

ಈ ವರ್ಷದ ರಾಷ್ಟ್ರೀಯ ಸಪ್ತಾಹದಲ್ಲಿ ಮೇಲೆ ಹೇಳಿದಂತೆ ವಿಧಾಯಕ ಕಾರ್ಯಕ್ರಮವನ್ನು ಯಶಸ್ವಿಮಾಡುವಲ್ಲಿ ನಿರತರಾಗುವದಲ್ಲದೆ ಗಾಂಧೀ ರಾಷ್ಟ್ರೀಯ ಸ್ಮಾರಕ ನಿಧಿಯನ್ನು ಶೇಖರಿಸಲು ಕಾಂಗ್ರೆಸ ಅಧ್ಯಕ್ಷರು ಬಿನ್ನವಿಸಿದ್ದಾರೆ. ಈ ರಾಷ್ಟ್ರೀಯ ಸಪ್ತಾಹದಲ್ಲಿಯೇ ಇದರ ಪ್ರಾರಂಭವಾಗತಕ್ಕದ್ದೆಂದು ವಿಧಿಸಿದ್ದಾರೆ. ಅದರಂತೆ ದೇಶದಲ್ಲೆಲ್ಲ ಈ ನಿಧಿ ಸಂಗ್ರಹ ಕಾರ್ಯ ಭರದಿಂದ ಸಾಗಿದೆ. ಮಹಾತ್ಮಾ ಗಾಂಧಿಯವರು ಭಾರತಕ್ಕೆ ಸಲ್ಲಿಸಿದ ಸೇವೆಯನ್ನು ನೆನೆದರೆ ಅವರು ಬಯಸಿದ ವಿಧಾಯಕ ಚಟುವಟಿಕೆಗಳ ಪ್ರಗತಿಗಾಗಿ ನಿಧಿಯನ್ನು ಶೇಖರಿಸುವದು ಅತ್ಯಂತ ಅವಶ್ಯವೆಂದು ಬೇರೆ ಹೇಳಬೇಕಾಗಿಲ್ಲ. ನೂರೈವತ್ತು ಕೋಟಿ ರೂಪಾಯಿಗಳಷ್ಟು ನಿಧಿ ಸಂಗ್ರಹಿಸಬೇಕೆಂದು ನಿಧಿ ಸಮಿತಿಯವರು ನಿರ್ಧರಿಸಿದ್ದಾರೆ. ಭಾರತದಂಥ ವಿಶಾಲ ರಾಷ್ಟ್ರದಲ್ಲಿ ಪ್ರತಿಯೊಬ್ಬರು ತಮ್ಮ ಅಳಿಲು ಸೇವೆಯನ್ನು ಸಲ್ಲಿಸಿದರೆ ಇಷ್ಟು ಹಣ ಕೊಡುವುದೇನು ಕಠಿನವಲ್ಲ. ಪ್ರತಿಯೊಬ್ಬ ತನ್ನ ಮಾಸಿಕ ಉತ್ಪನ್ನದಲ್ಲಿ ಹತ್ತು ದಿನಗಳ ಉತ್ಪನ್ನವನ್ನು ಕೊಡಬೇಕೆಂದು ರಾಷ್ಟ್ರಾಧ್ಯಕ್ಷರು ಬಿನ್ನವಿಸಿಕೊಂಡಿದ್ದಾರೆ. ಇದರಲ್ಲಿ ಯಾವದೇ ಬಗೆಯ ಒತ್ತಾಯವಿಲ್ಲ, ಜುಲುಮೆಯಿಲ್ಲ, ಆರತಕ್ಕದ್ದಲ್ಲ. ಪ್ರತಿಯೊಬ್ಬ ಸ್ವಸಂತೋಷದಿಂದ ಗಾಂಧೀಜಿಯ ಪವಿತ್ರ ಆತ್ಮವನ್ನು ಸ್ಮರಿಸಿ ತನ್ನ ಕಾಣಿಕೆಯನ್ನು ಸಲ್ಲಿಸಬೇಕಾಗಿದೆ. ಹತ್ತು ದಿನಗಳ ಉತ್ಪನ್ನ ಕೊಡುವದು ಕಠಿನವೆನಿಸಿದವರು ತಮಗೆ ಶಕ್ಯವಿದ್ದಷ್ಟನ್ನಾದರೂ ಸಲ್ಲಿಸಲಿಕ್ಕೆ ಬೇಕು. ನಿತ್ಯದ 'ಚೈನಿ'ಯನ್ನು ಕೆಲತಿಂಗಳ ಮಟ್ಟಿಗಾದರೂ ಕಡಮೆಮಾಡಿ ಈ ಮಹತ್ಕಾರ್ಯಕ್ಕಾಗಿ ಮುಡುಪನ್ನು ಸಲ್ಲಿಸಬೇಕು. ನಮ್ಮ ಕರ್ನಾಟಕ ಪ್ರಾಂತೀಯ ಸಮಿತಿಯವರು ಮೂರು ಕೋಟಿ ರೂಪಾಯಿಗಳನ್ನು ಕೂಡಿಸಬೇಕೆಂದು ಬಗೆದಿದ್ದಾರೆ. ಕರ್ನಾಟಕ ಗಾಂಧೀ ಪ್ರಾಂತವೆಂದು ಕೀರ್ತಿವೆತ್ತಿದೆ. ಆದುದರಿಂದ ಗಾಂಧೀಯವರ ಹೆಸರಿನಿಂದ ಕೂಡಿಸಲ್ಪಡುವ ಈ ನಿಧಿಗೆ ಪ್ರತಿಯೊಬ್ಬ ಕರ್ನಾಟಕಸ್ಥ ಶಕ್ತ್ಯನುಸಾರ ಹಣ ಕೊಟ್ಟದ್ದಾದರೆ ಮೂರು ಕೋಟಿ ರೂಪಾಯಿ ಕೂಡಲಿಕ್ಕೇನು ಕಠಿನಹೋಗುವದಿಲ್ಲ. ಕರ್ನಾಟಕದಲ್ಲಿ ವಿಧಾಯಕೋದ್ಯೋಗಗಳು ಇನ್ನೂ ಹೊರಡಬೇಕಾಗಿದೆ; ಇಂಥ ಮನೆಮಾರಿಗೆಯ ಉದ್ಯೋಗಗಳಿಗಾಗಿಯೇ ಈ ಹಣದ ವಿನಿಯೋಗವಾಗಲಿರುವದರಿಂದ ತಾವು ಕೊಟ್ಟ ದುಡ್ಡು ತಮ್ಮ ಪ್ರಾಂತದಲ್ಲಿಯೇ ವ್ಯಯವಾಗುವುದೆಂಬುದನ್ನು ಮನದಂದು ಕನ್ನಡನಾಡಿನಲ್ಲಿಯ ಧನಿಕರು ಮತ್ತು ಉಳಿದ ಎಲ್ಲ ನಾಗರಿಕರು ಶಕ್ತಿಮೀರಿ ಈ ನಿಧಿ ಸಂಗ್ರಹ ಕಾರ್ಯದಲ್ಲಿ ಸಹಾಯ ಸಲ್ಲಿಸಿ ಪ್ರಾಂತೀಯ ಧುರೀಣರು ಇಟ್ಟುಕೊಂಡ ಹಿರಿಯಾಸೆಯನ್ನು ಸಫಲಗೊಳಿಸುವರೆಂದು ಬಲವಾಗಿ ನಂಬುತ್ತೇವೆ.

ಕನಸು ಬೇಗ ನನಸಾಗಲಿ

ಉತ್ತರ ಕರ್ನಾಟಕ ಮತ್ತು ಮೈಸೂರ ಸಂಸ್ಥಾನ ಬೇಗ ಒಂದುಗೂಡಿ ಅಖಂಡ ಕರ್ನಾಟಕ ಪ್ರಾಂತ ನಿರ್ಮಾಣವಾಗಿ ಪ್ರಾಂತದ ಸಾರ್ವಾಂಗಿಕ ಅಭಿವೃದ್ಧಿಯಾಗಲೆಂಬ ಹೊಂಗನಸನ್ನು ಕರ್ನಾಟಕಸ್ಥರು ಬಹಳ ದಿನಗಳಿಂದ ಕಾಣುತ್ತಲಿದ್ದಾರೆ. ಅದು ನನಸಾಗುವ ಸುದಿನಗಳು ಸಮೀಪಿಸಿವೆ ಎಂಬುದು ಸಂತೋಷಕರವಾದುದು. ಉತ್ತರ ಕರ್ನಾಟಕದ ಸಂಸ್ಥಾನಗಳೆಲ್ಲ ಇದೀಗ ಪ್ರಾಂತಗಳಲ್ಲಿ ವಿಲೀನವಾಗಿ ಬಿಟ್ಟದ್ದರಿಂದ ಮಹತ್ವದ ಒಂದು ತೊಡಕು ಬಗೆಹರಿದಂತಾಗಿದೆ. ಮೈಸೂರು ಸಂಸ್ಥಾನದಲ್ಲಿಯೂ ಹೊಣೆಗಾರ ಸರಕಾರವನ್ನು ಸ್ಥಾಪಿಸಲು ಮಹಾರಾಜರು ಸಿದ್ಧರಾಗಿ ಘಟನಾ ಸಮಿತಿಯನ್ನು ರಚಿಸಿದ್ದರಿಂದ ಮತ್ತೊಂದು ತೊಡಕು ಬಗೆಹರಿದಂತಾಗಿದೆ. ಇನ್ನು ಈ ಘಟನಾ ಸಮಿತಿಯವರು ತಮ್ಮ ಘಟನೆಯನ್ನು ಸಿದ್ಧಪಡಿಸುವಾಗ ಅಖಂಡ ಕರ್ನಾಟಕದ ಈ ಧ್ಯೇಯವನ್ನಿಟ್ಟುಕೊಂಡು ತದನುಸಾರ ಘಟನೆಯನ್ನು ರಚಿಸಲಣಿಯಾದರೆ ಎಲ್ಲವೂ ಸುಗಮವಾಗುವುದು. ವಿಶೇಷ ಭಾವನಾವಶರಾಗದೆ ಎರಡೂ ಭಾಗಗಳಲ್ಲಿಯ ಜನರು ಅಖಂಡ ಕರ್ನಾಟಕ ಪ್ರಾಂತವನ್ನು ಕಟ್ಟಲು ಮುಂಬಂದರೆ ಮತ್ತು ಮೈಸೂರು ಮಹಾರಾಜರು ಕೊಂಚಮಟ್ಟಿಗೆ ಅಧಿಕಾರವನ್ನು ಬಿಟ್ಟುಗೊಡಲು ಸಿದ್ಧರಾದರೆ ಬೇಗ ಈ ಕನಸು ನನಸಾಗುವದು. ಮೈಸೂರು ಘಟನಾ ಸಮಿತಿಯ ಪ್ರಾರಂಭೋತ್ಸವಕ್ಕಾಗಿ ಕಳಿಸಿದ ಸಂದೇಶದಲ್ಲಿ ಶ್ರೀ ದಿವಾಕರ ರಂಗರಾಯರು ಪ್ರಜಾಪ್ರತಿನಿಧಿಗಳ ಒಂದೇ ಒಂದು ಆಡಳಿತಕ್ಕೊಳಪಟ್ಟ ಅಖಂಡ ಕರ್ನಾಟಕವು ಅಸ್ತಿತ್ವದಲ್ಲಿ ಬರುವಂತೆ ಮೈಸೂರಿನಲ್ಲಿ ಮತ್ತು ಉತ್ತರ ಕರ್ನಾಟಕದಲ್ಲಿ ಆದ ಈ ಸ್ವಾತಂತ್ರ್ಯವು ಎಡೆಗೊಡಲೆಂದು ಆಶಿಸಿದ್ದಾರೆ. ಮೈಸೂರು ಮುಖ್ಯ ಮಂತ್ರಿಗಳಾದ ಶ್ರೀ ಸಿದ್ದಲಿಂಗಯ್ಯನವರು ಹೊಸಯೆನ ಕರ್ನಾಟಕ ಮತ್ತು ಮೈಸೂರ ಕರ್ನಾಟಕ ಒಂದುಗೂಡುವ ಸುದಿನ ಬೇಗ ಬರಲೆಂದು ಹಾರಯಿಸಿದ್ದಾರೆ. ಸಂಸ್ಥಾನದ ಪ್ರಸಿದ್ಧ ಕಾರ್ಯಕರ್ತರಾಗಿರುವ ಶ್ರೀ ಕೆ. ಸಿ. ರೆಡ್ಡಿ [illegible] ಘಟನಾ ಸಮಿತಿಗೆ ಅವಿರೋಧವಾಗಿ ಅಧ್ಯಕ್ಷರಾಗಿ ಆರಿಸಿ ಬಂದಿದ್ದಾರೆ. ಅನೇಕ ವರುಷಗಳಿಂದ ಕಾಂಗ್ರೆಸ್ಸಿಗೆ ಮತ್ತು ಕನ್ನಡ ನಾಡಿಗೆ ನಿಸ್ವಾರ್ಥ ಸೇವೆ ಸಲ್ಲಿಸುತ್ತಿರುವ ಮತ್ತು ಪ್ರಸಿದ್ಧ ವಕೀಲರೂ ಘಟನಾ ತಜ್ಞರೂ ಆಗಿರುವ ಇವರನ್ನು ಸಮಿತಿಯು ಅಧ್ಯಕ್ಷರನ್ನಾಗಿ ಆರಿಸಿಕೊಂಡಿದ್ದು ಅತ್ಯಂತ ಉಚಿತವೇ ಆಗಿದೆ. ಇದಕ್ಕಾಗಿ ನಾವು ಶ್ರೀ ಸುಬ್ರಹ್ಮಣ್ಯಂ ಇವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವೆ. ಶ್ರೀ ಸುಬ್ರಹ್ಮಣ್ಯಂ ಇವರು ತಮ್ಮನ್ನು ಅಧ್ಯಕ್ಷರನ್ನಾಗಿ ಆರಿಸಿದ್ದಕ್ಕಾಗಿ ಸದಸ್ಯರನ್ನು ಅಭಿನಂದಿಸುತ್ತ ಸಮಿತಿಯು ಎದುರಿಸತಕ್ಕ ಅನೇಕ ಮಹತ್ವದ ಸಮಸ್ಯೆಗಳಲ್ಲಿ ಕರ್ನಾಟಕ ಏಕೀಕರಣವೂ ಒಂದಾಗಿದೆಯೆಂದು ಹೇಳಿ ಮೈಸೂರು ಪ್ರಜೆಗಳ ಆಶೆ ಆಕಾಂಕ್ಷೆಗಳೆಲ್ಲ ಪೂರೈಸುವಂಥ ರಾಜ್ಯ ಘಟನೆ ರಚಿಸಬೇಕೆಂದೂ ಮೈಸೂರು ಮಹಾರಾಜರು ಘಟನಾತ್ಮಕ ಅಧಿಪತಿಗಳಾಗಿ ಉಳಿಯುವದು ಪ್ರಜೆಗಳ ಹಿತದ ದೃಷ್ಟಿಯಿಂದ ಇಷ್ಟವಾಗಿದೆಯೆಂದೂ ಅಭಿಪ್ರಾಯಪಟ್ಟರು. ಮೈಸೂರಿನ ಹಿರಿಮೆಗೆ ತಕ್ಕ ರಾಜ್ಯ ಘಟನೆಯನ್ನು ಮುತ್ಸದ್ದಿತನದಿಂದ ಈ ಘಟನಾ ಸಮಿತಿಯು ರಚಿಸಿಕೊಂಡು ಇತರರಿಗೆ ಆದರ್ಶವಾಗಲಿದೆ ಎಂದು ಸರದಾರ ಪಟೇಲರು ಸಂದೇಶ ಕಳಿಸಿದ್ದಾರೆ. ಈ ಸಂಬಂಧದಲ್ಲಿ ಉತ್ತರ ಕರ್ನಾಟಕ ಮತ್ತು ಮೈಸೂರ ಕರ್ನಾಟಕ ಪ್ರತಿನಿಧಿಗಳಲ್ಲಿ ಬೇಗ ವಿಚಾರ ವಿನಿಮಯವೂ ನಡೆಯಲಿದೆ. ಇದರ ಪರಿಣಾಮವಾಗಿ ಕರ್ನಾಟಕದ ಎರಡು ಭಾಗಗಳು ಒಂದುಗೂಡುವಂತಾಗಲೆಂದು ಹಾರಯಿಸುತ್ತೇವೆ. ನಾವು ಮೇಲೆ ಹೇಳಿದಂತೆ ಈ ಎರಡೂ ಭಾಗಗಳಲ್ಲಿಯ ಜನರು ಭಾವನಾವಶರಾಗದೆ ವ್ಯವಹಾರಕುಶಲರಂತೆ ಈ ಪ್ರಶ್ನೆಯನ್ನು ಬಿಡಿಸಲಣಿಯಾದರೆ ಬೇಗ ಇದು ಬಿಡಿಸಲ್ಪಟ್ಟು ಕರ್ನಾಟಕದ ಸಾರ್ವಾಂಗಿಕ ಅಭಿವೃದ್ಧಿಗೆ ಅವಕಾಶ ದೊರೆತಂತಾಗುವದು. ಆ ಸುದಿನ ಬೇಗ ಬರುವಂತೆ ಪರಮಾತ್ಮ ಅನುಗ್ರಹಿಸಲಿ.

ಜವಾಹರಲಾಲರ ಜಾಗತಿಕ ಸಂದೇಶ

ಹಿಂದುಸ್ತಾನದ ಮುಖ್ಯ ಮಂತ್ರಿಗಳಾದ ಪಂಡಿತ ಜವಾಹರಲಾಲ ನೆಹರು ಇವರು ಬಾನುಲಿಯಲ್ಲಿ ಅಮೇರಿಕನ್ನರನ್ನುದ್ದೇಶಿಸಿ ಕಳೆದ ನಾಲ್ಕನೆಯ ತಾರೀಕು ಭಾಷಣ ಮಾಡುತ್ತ ಮಹತ್ವದ ಮಾತುಗಳನ್ನು ಹೇಳಿರುವರು. ಇಂದು ಜಗತ್ತು ಪರಸ್ಪರ ಅಸೂಯೆ, ದ್ವೇಷ, ಮಹತ್ವಾಕಾಂಕ್ಷೆ, ಸ್ವಾರ್ಥ, ಆಕ್ರಮಣವೃತ್ತಿ ಮೊದಲಾದವುಗಳಿಗೆ ಬಲ ಬಿದ್ದು ವಿನಾಶದ ದಾರಿಯನ್ನು ಹಿಡಿದಿದೆ. ಎರಡು ಮಹಾ ಯುದ್ಧಗಳು ನಡೆದು ಜಗತ್ತಿನಲ್ಲಿ ಬೇಕಾದಷ್ಟು ಜನ ಧನ ಆಸ್ತಿ ಹಾನಿಯಾಗಿದ್ದರೂ ಯುದ್ಧ ನಡೆದಾಗ ಆಯಾ ದೇಶಗಳ ಧುರೀಣರು ಶಾಂತಿಯ ಮಾತುಗಳನ್ನಾಡಿದರೂ ಶಾಂತಿಯೇನು ಪ್ರಸ್ಥಾಪಿತವಾಗಲಿಲ್ಲ! ವಿಶ್ವ ಶಾಂತಿಗಾಗಿಯೆಂದೇ ಸ್ಥಾಪಿತವಾಗಿದ್ದ ರಾಷ್ಟ್ರಸಂಘ ಅಯಶಸ್ವಿಯಾಯಿತು. ಈಗ ಸ್ಥಾಪಿತವಾಗಿರುವ ಸಂಯುಕ್ತ ರಾಷ್ಟ್ರಗಳ ಸಂಘವೂ ಅದೇ ದಾರಿಯನ್ನು ಹಿಡಿದಿದೆ. ಮೂರನೇ ಮಹಾ ಯುದ್ಧದ ಕಿಡಿಗಳು ಎಂದು ಹಾರುವವೊ ನಿಯಮವಿಲ್ಲ. ಆಯಾ ರಾಷ್ಟ್ರಗಳ ಶಾಂತಿ ಪ್ರಯತ್ನವು ಅಯಶಸ್ವಿಯಾಗಲಿಕ್ಕೆ ಮುಖ್ಯ ಕಾರಣವೆಂದರೆ ನೀತಿಯ ತಳಹದಿಯ ಮೇಲೆ ನಡೆಯದಿದ್ದುದೆಂದು ಹೇಳಬಹುದು. ಪಂಡಿತ ಜವಾಹರಲಾಲರು ಅಮೇರಿಕನ್ನರಿಗೆ ಕೊಟ್ಟ ಸಂದೇಶದಲ್ಲಿ ಇದೇ ಮಾತನ್ನು ಒತ್ತಿ ಹೇಳಿದ್ದಾರೆ. ನಾವು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವಿಷಯಗಳಲ್ಲಿ ನೈತಿಕ ಕಟ್ಟಳೆಗಳನ್ನು ಲೆಕ್ಕಿಸದೆ ಹೋದರೆ ನಮಗೆ ಚಿರಶಾಂತಿ ದೊರೆಯಲಾರದು. ಮೌನದಿಂದ ದಬ್ಬಾಳಿಕೆಗೆ ತಲೆ ಬಾಗುವದೆಂದರೆ ಅಹಿಂಸೆಯಲ್ಲ; ಮತಭೇದಗಳನ್ನು ಬಗೆಹರಿಸಿಕೊಳ್ಳಲು ಅದೊಂದು ದಿವ್ಯಾಸ್ತ್ರವೆಂಬುದಾಗಿ ಮಹಾತ್ಮರು ಮುಂಗಾಣಿಸಿಕೊಟ್ಟಿದ್ದಾರೆ. ಜಗತ್ತಿನ ಈ ಜಾಡ್ಯವು ಮಾಯವಾಗಬೇಕಾದರೆ ವಿಶ್ವ ಸರಕಾರವೊಂದು ಸ್ಥಾಪಿತವಾಗಬೇಕು. ಸುವ್ಯವಸ್ಥಿತ ಜಗನ್ನಿರ್ಮಾಣವಾಗದಿದ್ದರೆ ಜಗತ್ತಿನಲ್ಲಿ ಸುವ್ಯವಸ್ಥೆ ಎಂದೂ ನೆಲಸದು. ಅದಕ್ಕಾಗಿಯೆ ವಿಶ್ವ ಸರಕಾರ ಸ್ಥಾಪಿಸಿಕೊಳ್ಳಬೇಕು. ಈ ವಿಶ್ವ ಸರಕಾರದ ಮೂಲತತ್ವಗಳಿಗನುಗುಣವಾಗಿ ಪ್ರತಿ ರಾಷ್ಟ್ರಕ್ಕೂ ತನ್ನ ಪರಿಯಲ್ಲಿ ವಿಕಾಸಹೊಂದಲು ಅವಕಾಶ ಕೊಡಬೇಕು. ಹಕ್ಕು ಬಾಧ್ಯತೆಗಳ ಬಗ್ಗೆ ಹೊಡೆದಾಡುವಾಗ ಹೊಣೆಗಾರಿಕೆಯನ್ನೆಂದಿಗೂ ಅಲಕ್ಷಿಸಕೂಡದು. ಇದನ್ನು ಅರಗಿಸಿಕೊಂಡದ್ದಾದರೆ ಇಂದಿನ ಅಕ್ರಮದ ಪರಿಸ್ಥಿತಿಯನ್ನು ಬಿಟ್ಟು ಜೀವನವನ್ನು ಬೇರೊಂದು ಬಗೆಯಿಂದ ಎದುರಿಸಿದಂತೆ. ಸದ್ಯದ ಗಂಡಾಂತರ ಪರಿಸ್ಥಿತಿ, ಅಂಜಿಕೆ ಅಳಿಯಬೇಕಾದರೆ ನ್ಯಾಯ್ಯವಾದ ತಳಹದಿಯ ಮೇಲೆ ವಿಶ್ವ ಸರಕಾರ ಸ್ಥಾಪಿತವಾಗಬೇಕು. ಅಂದರೆ ಎಲ್ಲವೂ ಸುಗಮವಾಗಿ [illegible] ಗಳೆಲ್ಲ ಪರಿಹರಿಸುವವೆಂಬುದು ಖಚಿತವಾಗಿದೆ.


ಕೇಂದ್ರ ಮಂತ್ರಿ ಮಂಡಳ

ಪಂಡಿತ ಜವಾಹರಲಾಲರ ನೇತೃತ್ವದಲ್ಲಿ ಸ್ಥಾಪಿತವಾಗಿರುವ ಕೇಂದ್ರ ಮಂತ್ರಿ ಮಂಡಳದಲ್ಲಿ ಕೆಲವು ಬದಲಾವಣೆಗಳು ಅಲ್ಪದರಲ್ಲಿಯೆ ಆಗಲಿವೆಯೆಂದು ತಿಳಿಯುತ್ತದೆ. ಸ್ವಾತಂತ್ರ್ಯ ಸಿಕ್ಕ ಕೂಡಲೆ ಎಲ್ಲ ಪಕ್ಷ ಪ್ರಮುಖರ ಪ್ರಾತಿನಿಧ್ಯವಿರಬೇಕೆಂದು ಬಗೆದು ಮಂತ್ರಿ ಮಂಡಳವನ್ನು ರಚಿಸಲಾಯಿತು. ಅದರಲ್ಲಿ ಈಗ ಬದಲಾವಣೆಗಳಾಗುವದಾದರೆ ವಿಶೇಷ ಆಶ್ಚರ್ಯಪಡಬೇಕಾಗಿಲ್ಲ. ಶ್ರೀ ಭಾಭಾರವರು ಈಗಾಗಲೆ ತಮ್ಮ ಮಂತ್ರಿತ್ವಕ್ಕೆ ರಾಜೀನಾಮೆ ಕೊಟ್ಟದ್ದು ಅದು ಸ್ವೀಕೃತವಾಗಿದೆ. ಶ್ರೀ ಅಮೃತ ಕೌರರು ಮುದ್ರಾಸ ಗವರ್ನರರಾಗುವುದರಿಂದ ಡಾ. ಗಿಲ್ಡರರು ಆರೋಗ್ಯ ಮಂತ್ರಿಗಳಾಗುವರೆಂದು ಸುದ್ದಿ. ಶ್ರೀ ರಫಿ ಅಹಮ್ಮದ ಕಿದ್ವಾಯಿಯವರೂ ರಾಜೀನಾಮೆ ಕೊಡುವರೆಂದು ಸುದ್ದಿ. ಉಪ ಮುಖ್ಯ ಮಂತ್ರಿಗಳಾದ ಸರದಾರ ವಲ್ಲಭಭಾಯಿಗೆ ಬೇನಾಲಸ್ಯವಾಗಿರುವುದರಿಂದ ಅವರ ಕಡೆಗೆ ಗೃಹ ಖಾತೆಯೊಂದನ್ನೇ ಇಟ್ಟು ಉಳಿದ ಸಂಸ್ಥಾನ ಮತ್ತು ಸುದ್ದಿ ಆಕಾಶವಾಣಿ ಖಾತೆಗಳನ್ನು ಬೇರೆಯವರಿಗೆ ವರ್ಗಾಯಿಸಲಾಗುವದೆಂದು ತಿಳಿಯುತ್ತದೆ. ಸರ್. ಸರ್ವಪಲ್ಲಿ ರಾಧಾಕೃಷ್ಣನರನ್ನು ಕೇಂದ್ರಮಂತ್ರಿಮಂಡಳದಲ್ಲಿ ತೆಗೆದುಕೊಳ್ಳಲಿರುವರೆಂದು ಸುದ್ದಿ. ಹೀಗೆ ಮಂತ್ರಿಮಂಡಳದಲ್ಲಿ ಬದಲಾವಣೆಯಾಗ ಹದೆಂದರೆ, ಮಂತ್ರಿಗಳಲ್ಲಿ ಮತಭೇದಗಳು ಹೆಚ್ಚಿವೆ, ಬಲಿಷ್ಠ ಮಂತ್ರಿಮಂಡಳವನ್ನು ರಚಿಸುವದು ಶಕ್ಯವಿಲ್ಲ ಎಂದು ಮುಂತಾದ ಕೂಗೆಬ್ಬಿಸುವದು ಸರಿಯಾಗಲಾರದು. ಆಡಳಿತವು ಸರಾಗವಾಗಿ ಸಾಗುವಂತೆ ನೋಡಿಕೊಳ್ಳುವದಕ್ಕಾಗಿ ಆಗಾಗ ಬದಲಾವಣೆಗಳನ್ನು ಮಾಡುವದು ಅನಿವಾರ್ಯ. ಬೇರೆ ಸ್ವತಂತ್ರ ರಾಷ್ಟ್ರಗಳಲ್ಲಿಯೂ ಈ ಬಗೆಯ ಬದಲಾವಣೆಗಳಾಗುವದುಂಟು. ಆದ್ದರಿಂದ ಆಗಲಿರುವ ಬದಲಾವಣೆಗಳಿಂದ ಯಾರೂ ಬೆಚ್ಚಿಬೀಳಬಾರದು. ಇಲ್ಲವೆ ಕಾಂಗ್ರೆಸ್ಸಹಿತಶತ್ರುಗಳು ಕಾಂಗ್ರೆಸ ಮಂತ್ರಿಮಂಡಳದ ಬಗೆಗೆ ಎಬ್ಬಿಸುವ ಗುಲ್ಲನ್ನೂ ವಿಶೇಷವಾಗಿ ಲಕ್ಷಿಸಬಾರದು. ವಿಶಿಷ್ಟ ರಾಜಕೀಯ ಉದ್ದೇಶಕ್ಕಾಗಿ ಬೇಕೆಂತಲೆ ಬೊಬ್ಬಾಟವೆಬ್ಬಿಸುವ ಪಕ್ಷ ಇತ್ತೀಚೆ ಹಿಂದುಸ್ತಾನದಲ್ಲಿ ಹೆಚ್ಚಿವೆ. ಅವುಗಳಿಂದ ಯಾರೂ ಮರುಳುಹೋಗಬಾರದು. ಪ್ರಜಾಪ್ರತಿನಿಧಿಗಳಿಂದ ಸಂಸ್ಥಾಪಿತವಾದ ಮಂತ್ರಿಮಂಡಳವನ್ನು ಎಲ್ಲರೂ ಸಹಾನುಭೂತಿಯಿಂದ ನೋಡಿ ದೇಶದ ಅಭಿವೃದ್ಧಿಯನ್ನು ಸಾಧಿಸಬೇಕೆಂದು ಕೇಳಿಕೊಳ್ಳುತ್ತೇವೆ.

ಶಿಕ್ಷಣಮಾಧ್ಯಮ

ಹಿಂದುಸ್ತಾನ ಸರಕಾರದ ಶಿಕ್ಷಣ ಮಂತ್ರಿಗಳಾದ ಮೌ. ಅಬುಲ್‌ಕಲಂ ಅಝಾದರು ಶಿಕ್ಷಣಮಾಧ್ಯಮದ ಸಂಬಂಧದಲ್ಲಿ ಸಮಿತಿಯೊಂದನ್ನು ನೇಮಿಸಲಾಗುವದೆಂದು ಸಾರಿದ್ದಾರೆ. ಹಿಂದುಸ್ತಾನ ಪರದಾಸ್ಯದಲ್ಲಿ ಕೊಳೆಯುತ್ತಿರುವಾಗ ಪರಕೀಯ ಭಾಷೆಯನ್ನೇ ಶಿಕ್ಷಣಮಾಧ್ಯಮವನ್ನಾಗಿಟ್ಟುಕೊಳ್ಳಲಾಗಿತ್ತು. ಆದರೀಗ ಹಿಂದುಸ್ತಾನ ಸ್ವತಂತ್ರವಾದ್ದರಿಂದ ಪರಕೀಯರ ಗುಲಾಮಗಿರಿಯ ಚಿನ್ಹವಾದ ಆಂಗ್ಲ ಶಿಕ್ಷಣಮಾಧ್ಯಮವನ್ನು ಬಿಟ್ಟುಕೊಡುವದು ಯುಕ್ತೋಚಿತವಾಗಿದೆ. ಆದರೆ ಒಮ್ಮೆಲೆ ಆಂಗ್ಲ ಭಾಷೆಯನ್ನು ಶಿಕ್ಷಣ ಕ್ಷೇತ್ರದಿಂದ ಹೊಡೆದೋಡಿಸುವದು ಶಕ್ಯವಿಲ್ಲದ್ದರಿಂದ ಕ್ರಮಶಃ ಈ ದಾಸ್ಯದ ಚಿನ್ಹವನ್ನು ಬಿಟ್ಟುಗೊಡಬೇಕೆಂದು ಶಿಕ್ಷಣಮಂತ್ರಿಗಳು ಯೋಜಿಸಿದ್ದಾರೆ. ಹಿಂದುಸ್ತಾನದಲ್ಲಿಯ ವಿಶ್ವವಿದ್ಯಾಲಯ ಅಭ್ಯಾಸಕ್ರಮದಲ್ಲಿ ಮತ್ತು ಪರೀಕ್ಷೆಗಳಲ್ಲಿ ಆಂಗ್ಲ ಭಾಷೆಯ ಸ್ಥಾನವೇನೆಂಬುದನ್ನು ವಿಚಾರಿಸುವಾಗಲೆ ಈ ಸಮಿತಿಯು ಮಾಧ್ಯಮಿಕ ಹಾಗೂ ಉಚ್ಚ ಶಿಕ್ಷಣ ಕ್ರಮದಲ್ಲಿ ರಾಷ್ಟ್ರೀಯ ಭಾಷೆಯ ಸ್ಥಾನವಾವುದೆಂಬುದನ್ನೂ ನಿರ್ಧರಿಸಲಿರುವದೆಂದು ತಿಳಿದಿದೆ. ವಿಶ್ವವಿದ್ಯಾಲಯದ ಶಿಕ್ಷಣದಲ್ಲಿ ಆಂಗ್ಲ ಭಾಷೆಯ ಸ್ಥಾನ, ರಾಷ್ಟ್ರಭಾಷೆ ಮತ್ತು ಪ್ರಾಂತೀಯ ಭಾಷೆಗಳು ಯಾವ ಮಟ್ಟದಲ್ಲಿ ಆಂಗ್ಲ ಭಾಷೆಯ ಸ್ಥಾನವನ್ನು ವಹಿಸತಕ್ಕದ್ದೆಂಬುದನ್ನೂ ಈ ಸಮಿತಿಯವರು ವಿಚಾರಿಸಲಿರುವರೆಂದು ತಿಳಿಯುತ್ತದೆ. ಶಿಕ್ಷಣಮಾಧ್ಯಮವು ಈ ಮಹತ್ವದ ಪ್ರಶ್ನೆಯನ್ನು ನಿರ್ಣಯಿಸುವದು ಅತ್ಯವಶ್ಯವಾಗಿದೆ. ಇಡೀ ರಾಷ್ಟ್ರದಲ್ಲಿ ಒಂದು ಬಗೆಯ ಯೋಜನೆ ಸ್ವೀಕೃತವಾಗುವದು ಇಷ್ಟವಾಗಿದೆ. ಆದರಿಂದ ಶಿಕ್ಷಣಮಟ್ಟದಲ್ಲಿ ವಿಶೇಷ ಅಭ್ಯಂತರಗಳಾಗಲಾರವು. ಈ ಸಮಿತಿಯು ಆಯಾ ಪ್ರಾಂತಗಳಲ್ಲಿಯ ಶಿಕ್ಷಣ ಪ್ರಭೇದವನ್ನೆಲ್ಲ ವಿಚಾರಿಸಿ ಸಮಂಜಸವಾದ ಮತ್ತು ರಾಷ್ಟ್ರಪೋಷಕತೆಗೆ ಅತ್ಯವಶ್ಯವಾಗುವಂಥ [illegible] ವೆಂದು ನಂಬಲಾಗಿದೆ. ಈ ವರದಿ ಹೊರಬಿದ್ದು ಕೇಂದ್ರ ಸರಕಾರದವರು ಅದನ್ನು ಸ್ವೀಕರಿಸುವ ವರೆಗೆ ಆಯಾ ಪ್ರಾಂತೀಯ ಸರಕಾರಗಳು ನಿರ್ದಿಷ್ಟ ಯೋಜನೆಗಳನ್ನು ಸ್ವೀಕರಿಸದಿರುವುದು ಉಚಿತವಾದುದೆಂದು ಹೇಳಬಯಸುತ್ತೇವೆ.

ಅಂತರ್ದೇಶೀಯ



ಸ್ಟಾಫರ್ಡ್ ಕ್ರಿಪ್ಸ್

ಬ್ರಿಟನ್ನಿನಲ್ಲಿ ಮತ್ತೆ "ಮಿತವ್ಯಯ" ಮುಂಗಡ ಪತ್ರ

ಅರ್ಥಿಕ ಮಂತ್ರಿ ಸರ್ ಸ್ಟಾಫೋರ್ಡ ಕ್ರಿಪ್ಸರು ಕಳೆದ ವಾರ ಬ್ರಿಟನ್ನಿಗೆ ಕೂಲಿಕಾರ ಸರಕಾರದ ಇನ್ನೊಂದು "ಮಿತವ್ಯಯ" ಮುಂಗಡ ಪತ್ರಿಕೆಯನ್ನು "ದಯಪಾಲಿಸಿ"ದರು. ೧೫೦೦೦ ಶಬ್ದಗಳ ಮುಂಗಡ ಪತ್ರ ಭಾಷಣದಿಂದ ಅವರು ಉತ್ಪನ್ನ ಕರವನ್ನು ಮುಂದಿನ ವರ್ಷ ಒಟ್ಟು ೧೦ ಕೋಟಿ ಪೌಂಡಿನಷ್ಟು ಕಡಿಮೆ ಮಾಡಿ "ಫೋಟಿಬೊ" ಮನುಷ್ಯನಿಗೆ ಉಪಕಾರ ಮಾಡುವಂತೆ ಕಂಡರೂ ಬೀರ್, ವೈನ್ ಮೊದಲಾದ ಮಾದಕ ಪೇಯಗಳ ಮೇಲೆ ಮೊದಲೇ ಭಾರವಾಗಿದ್ದ ಕರ ಇನ್ನಷ್ಟು ಏರಿಸಿದರು. ಸಿಗರೇಟೂ ಪಾರಾಗಲಿಲ್ಲ. ಉದಾ: ೧೯೩೯ರಲ್ಲಿ ಪೈಂಟಿಗೆ ೮ ಪೆನ್ಸ್ ಇದ್ದ ಬೀರಿಗ ಈ ವರ್ಷ ೧೮ ಪೆನ್ಸ್ ಆಗುವದು. ೧೯೩೯ರಲ್ಲಿ ೨೦ ಸಿಗರೇಟಿಗೆ ೧೧½ ಪೆನ್ಸ್ ಇದ್ದರೆ ಕರಭಾರ ಹೊತ್ತು ಹೊತ್ತು ೧೯೪೮ರಲ್ಲಿ ೪೨ ಪೆನ್ಸ್ ಆಗುವದು. ಹೀಗೆ "ಮಿತವ್ಯಯ" ಮಾಡ ಹಚ್ಚಿ ಅವರು ಈ ವರ್ಷ ೩೩೦ ಲಕ್ಷ ಪೌಂಡ ಉಳಿತಾಯ ಮಾಡಿ ಬ್ರಿಟನ್ನಿನ ಸಾಲ ತೀರಿಸುವರಂತೆ.

ಈ ಹಣ ಉಳಿಸುವ ಮುಂಗಡ ಪತ್ರಿಕೆಗೆ ಜನತೆಯ ಪ್ರತಿಕ್ರಿಯೆಯೇನೆಂಬುದು ತಿಳಿಯಲು ಬೀವರಬ್ರೂಕರ "ಈವನಿಂಗ ಸ್ಟ್ಯಾಂಡರ್ಡ" ಪತ್ರಿಕೆಯ ಟೀಕೆಯೊಂದೆ ಸಾಕು: ಅದು ಮುಂಗಡ ಪತ್ರಿಕೆಯನ್ನು "ಕರಾಳ ಮುಂಗಡ ಪತ್ರ" ವೆಂದು ಕರೆದಿದೆ.

ಈಚೆಗೆ ನಡೆದ ಕೌಂಟಿ ಚುನಾವಣೆಗಳಲ್ಲಿ ಕೂಲಿಕಾರ ಪಕ್ಷ ಅನೇಕ ಸ್ಥಾನಗಳನ್ನು ಕಳೆದುಕೊಂಡದ್ದನ್ನು ನೋಡಿದರೆ ಬ್ರಿಟಿಶ ಜನತೆ ಕೂಲಿಕಾರ ಸರಕಾರದ ಕಾರಭಾರಕ್ಕೆ ಬೇಸತ್ತು ಪುನಃ ಚರ್ಚಿಲ್ಲರಿಗೆ ಶರಣು ಹೋಗುವಂತೆ ಕಾಣುತ್ತದೆ. ಈ ಮುಂಗಡ ಪತ್ರ ಅವರ ಬೇಸರಿಕೆಯನ್ನು ಕಡಿಮೆ ಮಾಡುವಂತೆ ಕಾಣುವದಿಲ್ಲ.

ಈಜಿಪ್ತ ಪೋಲೀಸರ ಮುಷ್ಕರ

ಈಜಿಪ್ತದ ಎರಡನೆಯ ಮಹಾ ನಗರವಾದ ಅಲೆಕ್ಝಾಂಡ್ರಿಯದಲ್ಲಿ ಪೋಲೀಸರು ಸಂಬಳದೇರಿಕೆಗಾಗಿ ಸಂಪು ಹೂಡಿದಂದಿನಿಂದ ಕೊಲೆ, ಕೊಳ್ಳೆ, ಸುಲಿಗೆ, ಸ್ವೇಚ್ಛಾಚಾರಗಳಿಗೆ ಲೆಕ್ಕವಿಲ್ಲವಾಗಿದೆ. ಪರಿಣಾಮವಾಗಿ ೨೦ ಜನರು ಸತ್ತಿದ್ದಾರೆ, ನೂರಾರು ಜನರು ಗಾಯಗೊಂಡಿದ್ದಾರೆ. ೧೦—೧೨ ಕಡೆ ಅಗ್ನಿ ತಾಂಡವ ನಡೆಸಿದ್ದಾರೆ.

ಕಾಯಿರೋ ನಗರದಲ್ಲಿ ಕರ್ಫ್ಯೂ ಜಾರಿ ಮಾಡಲಾಗಿತ್ತು. ೫ ಸಾವಿರ ಸೈನಿಕರು ನಗರ ರಕ್ಷಣೆಗಾಗಿ ಹಾಜರಿದ್ದಾರೆ.

ನಗರದ ಪರಿಸ್ಥಿತಿಯನ್ನು ಅವಲೋಕಿಸಿ ಮುಖ್ಯಮಂತ್ರಿ ನೊಕ್ರಾಶಿ ಪಾಶಾ ಅವರು ೨ ದಿನ ಜನರು ಮನೆಯಿಂದ ಹೊರ ಹೊರಡಬಾರದೆಂದು ಉಪದೇಶಿಸಿದ್ದಾರೆ. ಕೂಲಿಕುಂಡಿಗೆಗಳು ಈಗ ಬೀದಿಯಲ್ಲಿ ಬಂದಿವೆಯೆಂದು ಸಂರಕ್ಷಣಾಧಿಕಾರಿ ಹೇಳಿಕೊಂಡಿದ್ದಾನೆ.

ಅಲೆಕ್ಝಾಂಡ್ರಿಯದಲ್ಲಿ ಸಾವಿರಾರು ಪೋಲೀಸರು ಸಂಪು ಹೂಡಿದ್ದಾರೆ. ಬೀದಿಗಳಲ್ಲಿ ಪೋಲೀಸರ ಪಹರೆ [illegible] ಸೈನಿಕರಿಗೂ ಕೈಕೈ ಹತ್ತಿದೆ. ವಿದೇಶೀ [illegible]ಗಳಲ್ಲಿ ಜನರು ಲೂಟಿ [illegible] ಬೀದಿಯೊಂದರಲ್ಲಿ [illegible] ಗಿದೆ. ವಿದ್ಯಾರ್ಥಿಗಳು ಸಂಪುಗಾರರೊಡನೆ ಸೇರಿ ನೊಕ್ರಾಶಿ [illegible] ಪ್ರತಿಭಟನೆ ಮಾಡಿದ್ದಾರೆ. ಪೋಲೀಸರ [illegible] ಅಶ್ವಾಸನವನ್ನು [illegible], ಕೆಲ ಪೋಲೀಸರಿಗೆ ಶಿಕ್ಷೆ [illegible] ಸಂಬಳ [illegible] ಪರಿಸ್ಥಿತಿಯಿಂದ [illegible] ಈಗ ಉದ್ವಿಗ್ನತೆ [illegible] ಶಾಂತವಾಗಿದೆ.

ಸಂಪೆಂದರೆ ಸೈನ್ಯದ ಪ್ರತೀಕಾರ. ಹಿಂಸೆ [illegible]

ಗಡವು. ಒಮ್ಮೊಮ್ಮೆ ಶಸ್ತ್ರಾಸ್ತ್ರಗಳ ಒಂದು ರೂಪವಾದ ಇದು ದುರುಪಯೋಗ ಹೊಂದುವುದುಂಟು. ಆದರೆ ಪ್ರಸ್ತುತ ಪ್ರಸಂಗದಲ್ಲಿ ಸರಕಾರವು ಕೊಟ್ಟ ಅಶ್ವಾಸನವನ್ನು ಪೂರೈಸುತ್ತಿರುವುದರಿಂದ ಸಂಪನ್ನು ನ್ಯಾಯಬಾಹಿರವೆನ್ನಲಾಗದು. ಅಸಂತೃಪ್ತರನ್ನು ದಮನ ಮಾಡುವುದು ಸುಲಭವಲ್ಲ. ಮಾಡಲಾಗುವುದೋ ಇಲ್ಲವೋ ಎಂಬುದನ್ನು ಮೊದಲೇ ಕಂಡುಕೊಂಡು ಆಡಬೇಕು. ಇದಕ್ಕೆ ತಪ್ಪಿದ್ದೇ ಸರಕಾರ ಬಿಕಟ ಪರಿಸ್ಥಿತಿಯನ್ನೆದುರಿಸುವಂತೆ ಮಾಡಿದ್ದೆಂಬುದು ಮೇಲಿನ ಸಂಗತಿಯಿಂದ ಸ್ಪಷ್ಟವಾಗುತ್ತದೆ. ಪರಿಸ್ಥಿತಿ, 'ನೊಕ್ರಾಶಿ ಪಾಶಾ ತಲೆ ಬಾಗಿಸಬೇಕು' ಎನ್ನುವ ಮಟ್ಟಕ್ಕೆ ಬರುವವರೆಗೆ ಜಾರುದಾರಿಯಲ್ಲಿ ಅವಲಕ್ಷ್ಯ ಹಾಕಿಕೊಂಡು ಕುಳಿತದ್ದು ಸರಕಾರದ ಅಪರಾಧವೆಂದು ಯಾರಾದರೂ ಸಹಜವಾಗಿ ಹೇಳಬಹುದು.

ಬರ್ಲಿನ್ನಿನಲ್ಲಿ ಅಮೇರಿಕೆ— ರಶಿಯಗಳ ತಿಕ್ಕಾಟ

ಮೊನ್ನೆ ಮುಂಬಯಿಯಲ್ಲಿ ಸತ್ಕಾರ ಕೂಟವೊಂದರಲ್ಲಿ ಗಾರುಡಿಗನೊಬ್ಬನ ಮಂತ್ರದಿಂದ ಮುಗ್ಧನಾಗಿ ಒಬ್ಬಾತನು ಮುಂಬರುವ ಘಟನೆಗಳ ಭವಿಷ್ಯನುಡಿಯುತ್ತ ಮಾರ್ಚ ೧೯೪೯ ಕ್ಕೆ ಮೂರನೆ ಜಾಗತಿಕ ಯುದ್ಧ ಪ್ರಾರಂಭವಾಗುವದೆಂದು ಒದರಿಬಿಡನಂತೆ. ಗಾರುಡಿ, ಮಂತ್ರ, ಭವಿಷ್ಯಗಳಲ್ಲಿ ವಿಶ್ವಾಸವಿರಲಿ ಬಿಡಲಿ, ಈಚೆಗಿನ ಘಟನೆಗಳು ಇದು ನಿಜವಾದೀತೇ ಎಂಬ ಸಂಶಯಕ್ಕೆ ಅವಕಾಶ ಕೊಡುತ್ತವೆ. ಈ ಎರಡುವಾರಗಳಿಂದ ಅಮೇರಿಕನ್ನರಿಗೂ ರಶಿಯನ್ನರಿಗೂ ಮತ್ತು ರಶಿಯನ್ನರಿಗೂ ಬ್ರಿಟಿಷರಿಗೂ ನಡುವೆ ಕೆಲ ಚಿಲ್ಲರೆ ತಿಕ್ಕಾಟಗಳು ನಡೆದಿವೆ. ಈಗಿನ ಸಂಕಷ್ಟ ಸ್ಥಿತಿಯಲ್ಲಿ ಅವು ಎಷ್ಟು ಹೊತ್ತಿಗೂ ಉರಿದೇಳಬಹುದು.

ರಶಿಯನ್ನರು ಬಳಸುವ ಕುತಂತ್ರಗಳನ್ನೇ ಅಮೇರಿಕನ್ ಸೈನಿಕರಿಂದು ಬಳಸತೊಡಗಿ, ಸೋವಿಯಟ್ ವಲಯದ ರೇಲ್ವೆ ನಿಯಂತ್ರಣ ಕೇಂದ್ರವನ್ನು ಅಮೇರಿಕನ್ ವಿಭಾಗದಲ್ಲಿ ತಡೆದರೆಂದು ತಿಳಿದುಬರುತ್ತದೆ. ಆ ಕೇಂದ್ರದ ತಮ್ಮ ಕಾರ್ಯಾಲಯಕ್ಕೆ ಹೋಗುತ್ತಿದ್ದ ಸೋವಿಯೆಟ್ ಅಧಿಕಾರಿಗಳನ್ನು ಅಮೇರಿಕನ್ ಸೈನಿಕರು ತಡೆದುದನ್ನು ಸೋವಿಯಟ್ ಸರಕಾರ ಪ್ರತಿಭಟಿಸಿತು. ಆದರೆ ಆ ಪ್ರತಿಭಟನೆಯನ್ನು ವಿಚಾರಿಸಲು ಈಗ ಸಮಯವಿಲ್ಲವೆಂದೂ ಅದಕ್ಕೆ ಮೊದಲು ಅಮೇರಿಕನ್ ಪೂರೈಕೆ ರೈಲುಗಳು ನಿರಾತಂಕವಾಗಿ ಬರ್ಲಿನ್ನಿಗೆ ಹೋಗುವ ಸಮಸ್ಯೆಯನ್ನು ಬಗೆಹರಿಸಿ ಕೊಳ್ಳಬೇಕೆಂದೂ ಅಮೇರಿಕನ್ ಸೇನಾಧಿಕಾರಿ ಉತ್ತರವಿತ್ತನು.

೩೦ ಅಮೇರಿಕನ್ ಸೈನಿಕರು ಟಾಮಿ ಬಂದೂಕುಗಳನ್ನು ಹಿಡಿದುಕೊಂಡು ಮುಮ್ಮಾಳಿಗೆಯ ಕೆಂಪು ಇಟ್ಟಿಗೆಯ ಸೋವಿಯಟ್ ನಿಯಂತ್ರಣ ಕೇಂದ್ರವನ್ನು ನಡುರಾತ್ರಿಯಲ್ಲಿ ಹಿಡಿದುದು ಅಮೇರಿಕೆ ಮತ್ತು ರಶಿಯಗಳ ನಡುವೆ ನಡೆದ ಭಾವೀ ಯುದ್ಧದ ನಾಂದಿಯೆನ್ನಬಹುದಾಗಿದೆ. ಇದು ಬಿಸಿ ಹೇಗೆ ಏರುತ್ತಿದೆ ಎಂಬುದನ್ನು ನಿದರ್ಶಿಸುತ್ತದೆ.

ರಶಿಯನ್ ಅಧಿಕಾರಿಗಳು ಉಕ್ತ ಸ್ಥಳದಲ್ಲಿ ಬಂದು ಅಮೇರಿಕನ್ ಅಧಿಕಾರಿಗಳನ್ನು ಕೇಳಿದರೆ ಸಮರ್ಪಕ ಉತ್ತರ ಸಿಗದುದರಿಂದ ಅವರು ಕ್ರುದ್ಧರಾಗಿ ಒಮ್ಮೆ ಗುಂಡುಹಾರಿಸಿ ಹಿಂದಿರುಗಿದರು. ಬರ್ಲಿನ್ನನ್ನು ಪಾಶ್ಚಾತ್ಯ ಮಿತ್ರರು ಲೂಟಿ ಮಾಡುತ್ತಿದ್ದಾರೆಂದು ರಶಿಯನ್ನರು ದೂರಿಕೊಂಡರು ಮತ್ತು ಚತುರ್ರಾಷ್ಟ್ರಗಳೂ ನಿಯಂತ್ರಣ ಸಮಿತಿಗಳಲ್ಲಿ ೭ ರಿಂದ [illegible] ಹೊರಬಿದ್ದಿರುವುದನ್ನು ಸಾರಿದರು.

ಬ್ರಿಟಿಶ ಆಕ್ರಮಿತ ಜರ್ಮನಿಯಲ್ಲಿ ಒಬ್ಬ ರಶಿಯನ್ ಸೇನಾಧಿಕಾರಿಯನ್ನು ಯಾರೋ ಕೊಲೆ ಮಾಡಿದರೆಂದು ಆಮೇಲೆ ಸುದ್ದಿ ಹೊರಟಿತು. ಅತ್ತ ಬ್ರಿಟಿಶ ವಿಮಾನವೊಂದು ಪ್ರವಾಸಿಗರೊಡನೆ ರಶಿಯನ್ ವಿಭಾಗವನ್ನು ಹಾದು ಹೋಗುತ್ತಿದ್ದಾಗ ರಶಿಯನ್ ಯುದ್ಧ ವಿಮಾನವೊಂದಕ್ಕೆ ಢಿಕ್ಕಿಹೊಡೆದು ೧೪ ಜನ ಪ್ರವಾಸಿಗರು ಸತ್ತರು. ಈ ಬಗ್ಗೆ ರಶಿಯನ್ನರು ವಿಷಾದ ಪ್ರದರ್ಶಿಸಿದ್ದಾರೆ ನಿಜ. ಆದರೆ ಬರ್ಲಿನ್ನಿನಿಂದ ಆಂಗ್ಲೋ—ಅಮೇರಿಕನ್ನರನ್ನು ಹೊರಗೆ ಹಾಕುವ ಉಪಾಯಗಳನ್ನು ಅವರು ಹುಡುಕುತ್ತಿದ್ದಾರೆಂಬಲ್ಲಿ ಸಂಶಯವಿಲ್ಲ. ಇವರಾದರೂ ಅಲ್ಲಿಂದ ಕದಲಲಾರೆವೆನ್ನುತ್ತಿದ್ದಾರೆ.

ರಶಿಯನ್ ವಿಭಾಗದಲ್ಲಿ ಯುದ್ಧದ ಸಿದ್ಧತೆ ನಡೆದಿದ್ದು ಕಂದಕ ತೋಡುವದು, ಟ್ಯಾಂಕುಗಳ ಸಂಗ್ರಹ ಆಗುತ್ತಿವೆಯೆಂದು ಫ್ರೆಂಚ ಪತ್ರಿಕೆಯೊಂದರ ವರದಿ. ಈ ಹಿಂದೆ ಇದಕ್ಕಿಂತ ಚಿಲ್ಲರೆ ಕಾರಣಗಳಿಗಾಗಿ ಯುದ್ಧ ಉರಿದದ್ದುಂಟು. ಈಗ ಹಾಗಾಗದೆನ್ನುವ ಎದೆ ಯಾರಿಗಿದೆ?

ಪ್ರೊ. ಹೆರಾಲ್ಡ ಜೆ. ಲಾಸ್ಕಿಯವರ (ಇಲ್ಲೇ ಬೇರೊಂದೆಡೆ ಕೊಟ್ಟ) ಹಿತವಾದವೇನಾದರೂ ರಾಷ್ಟ್ರನಾಯಕರ ಕಿವಿಗೆ ಹಿತವೆನಿಸಿದಲ್ಲಿ, ಇದು ಇಲ್ಲಿಗೇ ಮುಗಿದು ಜಗತ್ತು ಶಾಂತಿಯ ಕನಸನ್ನಾದರೂ ಕಾಣುವ ಆಶೆಯನ್ನಿಟ್ಟುಕೊಳ್ಳಬಹುದು. ಇಬ್ಬಣಗಳಲ್ಲಿ ಇಬ್ಬರ ಇಲ್ಲವೆ ಒಬ್ಬರ ರಣೋನ್ಮಾದ ಹೆಚ್ಚಿದರೂ ಅದರಿಂದ ೩ ನೆಯ ಮಹಾಯುದ್ಧ ಹುಟ್ಟಿ ಪ್ರಲಯದೇವತೆಗೆ ಆಮಂತ್ರಣ ಕೊಟ್ಟಂತಾಗದಿರದು.

ಗೋವೆಯಲ್ಲಿ ನಕಲಿ ನೋಟಿನ ಕಾರಖಾನೆ!

ಗೋವೆಯ ಸುರಕ್ಷಿತತೆಯನ್ನು ಕಾಯುವ ಪೋಲೀಸರೂ ಭಾರತೀಯ ಪೋಲೀಸರೊಂದಿಗೆ ಗೋವಾ–ಸಾವರಿತವಾಡಿ ಗಡಿಯಲ್ಲಿ ಒಂದು ಹಳ್ಳಿಗೆ ಮುತ್ತಿಗೆ ಹಾಕಿ, ಭಾರತದ ರಿಜರ್ವ್ ಬ್ಯಾಂಕಿನ ನೂರು ರೂಪಾಯಿ ನೋಟನ್ನು ಪ್ರತಿ ತೆಗೆವ ಒಂದು ಕಳ್ಳರ ಗುಂಪಿನಲ್ಲಿಯ ಮೂವರನ್ನು ಹಿಡಿದರು. ಅವರಲ್ಲಿ ಒಬ್ಬನು ತನ್ನಲ್ಲಿದ್ದ ವಿಷವನ್ನು ತಿಂದು ತಕ್ಷಣ ಆತ್ಮಹತ್ಯೆ ಮಾಡಿಕೊಂಡನು.

ನೋಟನ್ನು ಅಚ್ಚುಮಾಡಲು ಸಂಗ್ರಹಿಸಿದ್ದ ಅಚ್ಚಿನ ಯಂತ್ರೋಪಕರಣಗಳು, ಕಾಗದ, ಬಣ್ಣ, ಅಚ್ಚು ಮುಂತಾದವನ್ನು ವಶಪಡಿಸಿಕೊಳ್ಳಲಾಯಿತು.

ಮುತ್ತಿಗೆಯನ್ನು ಮೊದಲೇ ವಾಸನೆ ಹಿಡಿದು ನಕಲಿ ನೋಟುಗಳನ್ನು ಮುಂಚಿನ ರಾತ್ರಿ ಸುಟ್ಟರೆಂದೂ ಅರೆಸುಟ್ಟ ಕೆಲ ನೋಟುಗಳು ದೊರೆತವೆಂದೂ ವರದಿಯಿದೆ.

೨ ಲಕ್ಷ ರೂಪಾಯಿಯ ಕೃತಕ ನೋಟುಗಳನ್ನು ನಿಜವಾದ ೭೫ ಸಾವಿರ ಹಣಕ್ಕೆ ಆ ಕಳ್ಳರು ಮಾರುತ್ತಿದ್ದರೆಂದೂ ಹೇಳಲಾಗಿದೆ.



ಚಿಯಾಂಗ ಕೈಶೇಕ

ಚಿಯಾಂಗರಿಗೆ ಅಧ್ಯಕ್ಷತೆ ಬೇಡ

ಚೀನದ ಅಧ್ಯಕ್ಷರಾದ ಜನರಲಿಸಿಮೋ ಚಿಯಾಂಗ್ ಕೈಶೇಕರು ಮುಂಬರುವ ಅಧ್ಯಕ್ಷ ಪದದ ಚುನಾವಣೆಗೆ ತಾವು ಸ್ಪರ್ಧಿಸುವುದಿಲ್ಲವೆಂದು ಸಾರಿದರು. ಒಬ್ಬ ಪಕ್ಷಾತೀತ ವ್ಯಕ್ತಿಯನ್ನು ಆರಿಸಬೇಕೆಂದು ಅವರು ಸೂಚಿಸಿದರು.

ರಾಷ್ಟ್ರೀಯ ಶಾಸನ ಸಭೆಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಸ್ಥಾನಗಳಿಗೆ ಬೇಗ ಚುನಾವಣೆ ನಡೆಯಲಿದೆ. ಚಿಯಾಂಗರು ಅಧ್ಯಕ್ಷ ಪದಕ್ಕೆ ಅವಿರೋಧದಿಂದ ಆರಿಸಲ್ಪಡುವರೆಂದು ನಿರೀಕ್ಷಿಸಲಾಗಿತ್ತು.

ಚೀನದ ಸುಪ್ರಸಿದ್ಧ ತತ್ವಜ್ಞಾನಿಗಳೂ ರಾಜನೀತಿಜ್ಞರೂ ಆದ ಡಾ. ಹೂಶಿಮ್ ಅವರು ಚೀನದ ಹೊಸ ಅಧ್ಯಕ್ಷರಾಗಬಹುದೆಂದು ಸುದ್ದಿಯಿದೆ. ಹಾಗಾದಲ್ಲಿ ಚಿಯಾಂಗರು ಮುಖ್ಯಮಂತ್ರಿಗಳಾಗಬಹುದು. ಚಿಯಾಂಗ ವಿವರಿಸಿದ ಅಧ್ಯಕ್ಷ ಗುಣಗಳೆಲ್ಲ ಡಾ. ಹೂಶಿಮರಲ್ಲಿವೆಯೆಂದು ಹೇಳಲಾಗುತ್ತದೆ.

ಕಮ್ಯುನಿಸ್ಟರೊಡನೆ ನಡೆದ ಕಾಳಗದಲ್ಲಿ ಪ್ರಗತಿಯಿಲ್ಲದ್ದು ಮಾತ್ರವಲ್ಲ ತಮ್ಮ ಕೈಕೆಳಗಿನ ಅಧಿಕಾರಿಗಳೊಡನೆ ಮತಭೇದ ತಲೆದೋರಿ ತತ್ಪರಿಣಾಮವಾಗಿ ಗೌರವಭಂಗ ಹೊಂದಿ, ಆಯಾಸ ಬೇಸರಗಳಿಂದ ಕಂಗೆಟ್ಟುದೇ ಚಿಯಾಂಗರ ತ್ಯಾಗ ಬುದ್ಧಿಗೆ ಕಾರಣವೆಂದು ಕೆಲ ಅಭಿಮತಿಗಳಿಗೆ ಹೊಳೆಯದಿರಲಾರದು. ರಾಜ್ಯದ ಅರಾಜಕತೆ ದಿನೇ ದಿನೇ ಹೆಚ್ಚುತ್ತಿದ್ದು ಪರಿಸ್ಥಿತಿಯನ್ನು ಹತೋಟಿಗೆ ತರಲು ಶ್ರಮಿಸುವ ಉತ್ಸಾಹ ಕುಂದಿದ ಚಿಯಾಂಗರು ಎಲ್ಲಿಯವರೆಗೆ ತಾಳಿಕೊಂಡಾರು.

ಪಾಲಿಸ್ತಾನದಲ್ಲಿ ಅರಬರ ಹತ್ಯೆ

ಯಹೂದಿಗಳ ಹಗನ್ನ ದಲದವರು ಜೆರೂಸಲೇಮಿನ ಜೆಜ್ ರೀಲ್ ಕೊಳ್ಳದಲ್ಲಿ ತಾ ೪ ರ ರಾತ್ರಿ ದಂಡೆತ್ತಿಬಂದ ಅರಬರನ್ನು ಹಿಂದೂಡಿಸುವಲ್ಲಿ ಅವರಲ್ಲಿಯ ನೂರಾರು ಜನರನ್ನು ಸಂಹರಿಸಿದುದಾಗಿ ಯಹೂದಿಗಳ ಸುದ್ದಿ ಸಂಸ್ಥೆ ತಿಳಿಸುತ್ತದೆ.

ದ್ವಂದ್ವವು ಸುಮಾರು ೧೧ ಗಂಟೆಗಳ ಕಾಲ ನಡೆಯಿತೆಂದೂ ಯಹೂದಿಗಳಲ್ಲಿ ಇಬ್ಬರು ಸತ್ತರು ಮತ್ತು ೧೨ ಜನರು ಗಾಯಗೊಂಡರು ಎಂದೂ ತಿಳಿಯುತ್ತದೆ.

ಇತರ ವರದಿಗಳ ಪ್ರಕಾರ ಹಗನ್ನ ದಲವು ರಾಮ್ಲೆ ಪ್ರದೇಶದ ಅರಬ ಸೇನಾಧಿಕಾರಿ ಶೇಕ್ ಹಸನ್ ಸಲಾಮೆಯ ಮುಖ್ಯ ಠಾಣೆಯನ್ನು ಬಾಂಬಿಕ್ಕಿ ಸುಟ್ಟ ಸುದ್ದಿಯಿದೆ. ಅದು ತೆಲ್ ಅವೀವಿನಿಂದ ೧೫ ಮೈಲು ದೂರದಲ್ಲಿದೆ. ಆ ಕಾಲದಲ್ಲಿ ಶೇಕ್ ಹಸನ್ನನಿದ್ದಿಲ್ಲವೆಂದೂ ಅಂತರ್ವಾಸಿಗಳಲ್ಲಿ ಅನೇಕರು ಭೂಗತರಾದರೆಂದೂ ತಿಳಿಯುತ್ತದೆ.

ಅರಬ ಹಳ್ಳಿಯಾದ ಕಾಸ್ತೇಲು ಯಹೂದಿಗಳ ಕೈಯಲ್ಲೇ ಇದೆ. ಜೆರೂಸಲೇಮಿಗೆ ಹೋಗುತ್ತಿದ್ದ ಆಹಾರ ವಾಹನಗಳನ್ನು ತಡೆಯುತ್ತಿದ್ದ ಅರಬರನ್ನು ಬಗ್ಗುಬಡಿಯಲು ಕಳೆದವಾರ ಆ ಹಳ್ಳಿಯನ್ನು ಅವರು ಹಿಡಿದಿದ್ದರು.

ಹೈಫಾದಿಂದ ಅರಬರು ಅಬಲಾವೃದ್ಧರೊಡನೆ ನಿರ್ಗಮಿಸತೊಡಗಿದ್ದಾರೆ. ಅದು ಮೊದಲಿಂದಲೂ ಭಯಂಕರ ರಣರಂಗವಾಗಿತ್ತು. ಸಾರ್ವಜನಿಕ ಪಕ್ಷದಿಂದ ಸುಮಾರು ೬ ಸಾವಿರದಿಂದ ೮ ಸಾವಿರ ವರೆಗೆ ಅರಬ ಬಾಲಬಾಲಿಕೆಯರನ್ನು ಸಿರಿಯ ಮತ್ತು ಲೆಬನಾನುಗಳಿಗೆ ಒಯ್ಯಲಾಯಿತು.

ಹೈಫಾಕ್ಕೆ ದಕ್ಷಿಣದಲ್ಲಿರುವ ಮಿಶ್ಮೇರ ಹೀಮಕದಲ್ಲಿ ಉಭಯ ಪಕ್ಷದವರೂ ಜಯಿಸಿದುದಾಗಿ ಹೇಳುತ್ತಾರೆ. ಸತ್ಯವನ್ನು ಪರೀಕ್ಷಿಸಿ ನೋಡಬೇಕಾಗಿದೆ. ಅಂತೂ ಹಾಣಾಹಾಣಿ ಇಬ್ಬಣದವರಲ್ಲಿ ನಡೆದೇ ಇದೆ. ಲೀಲಾವಾದ ಶರಣರಾದ ಭಾನಿಕರು ಜಗತ್ತಿನ ಮಹಾ ರಾಷ್ಟ್ರನಾಯಕರ ಗಂಭೀರ ಮೌನವನ್ನು ಕಂಡು ಕೈಮುಗಿದು ನಿಲ್ಲಬಹುದು. ರಾಜನೀತಿಜ್ಞನು ಅಮೇರಿಕ, ಬ್ರಿಟನ್ನ ಮತ್ತು ರಶಿಯಗಳ ತಲೆಯ ಮೇಲೆ ಅಪರಾಧ ಹೊರಿಸದೆ ಬಿಡನು. ಇವು ಭದ್ರತಾ ಮಂಡಲದಲ್ಲಿ ಸ್ವಾರ್ಥದ ಚದುರಂಗವಾಡುತ್ತ ಕುಳಿತುದೇ ಪಾಲಿಸ್ತಾನದ ಪ್ರಜೆಗಳ ಮನೆಗೆ ಬೆಂಕಿ ಹತ್ತಿದಂತಾದುದಕ್ಕೆ ಕಾರಣವಲ್ಲವೇ?

ಮಿಸ್ಸೋರಿ ವಿಶ್ವವಿದ್ಯಾನಿಲಯದಲ್ಲಿ ಗಾಂಧೀಜಿಯ ಭಾವಚಿತ್ರ ಅನಾವರಣ ಮಹೋತ್ಸವ ಮಾಡಿದಾಗ ತೆಗೆದ ಚಿತ್ರ



(೧) ಭಾರತೀಯ ವಿದ್ಯಾರ್ಥಿ ಸಂಘದ ಕಾರ್ಯದರ್ಶಿಗಳಾದ [illegible] ಕೃಷ್ಣಮೂರ್ತಿಗಳು ಮಹಾತ್ಮರ ಕಡೆ ಕೈತೋರಿಸುತ್ತ ಕಣ್ಣೀರು ಸುರಿಸುತ್ತಿರುವುದು, (೨) ಸಭೆಯ ಅಧ್ಯಕ್ಷರಾಗಿ ಭಾವಚಿತ್ರವನ್ನು ಪಡೆದ ಡಾ. ಥಾಮಸ್ ಎ. ಬ್ರ್ಯಾಡಿ, ವಿಶ್ವವಿದ್ಯಾನಿಲಯದ ಉಪಾಧ್ಯಕ್ಷರು, (೩) [illegible] ರು ವಿಶ್ವವಿದ್ಯಾನಿಲಯದ ಚರಿತ್ರೆಯ ಪ್ರೊಫೆಸರರು ಶ್ರೀ ಜೆಸ್ಸಿ ರೆಂಚರು.

ಜಗತ್ತಿನಲ್ಲಿ ಶಾಂತಿಯನ್ನು ನೆಲೆಗೊಳಿಸಲು ಆಟ್ಲೀ-ಸ್ಟಾಲಿನ್ನರು ಸಮರ್ಥರು

ಬ್ರಸೆಲ್ಸ್ ಒಪ್ಪಂದಕ್ಕೆ ಬಿದ್ದ ಸಹಿ ಮತ್ತು ಅಧ್ಯಕ್ಷ ಟ್ರೂಮನ್ನರು ಕಾಂಗ್ರೆಸಿನಲ್ಲಿ ಮಾಡಿದ ಭಾಷಣ ಇವುಗಳಿಂದ ಕ್ರೂರತಮವಾದ ಭಾವಿ ಯುದ್ಧವು ಹೊಸದೊಂದು ಪ್ರಖರವಾದ ಹಂತವನ್ನು ಮುಟ್ಟಿದಂತಾಯಿತು. ಆ ಒಪ್ಪಂದವು ಈಗ ಕೂಡ ಕಟ್ಟಡದ ಯೋಜನೆಯಾಗಿದೆಯಲ್ಲದೆ ಕಟ್ಟಡವಾಗಿ ಪರಿಣಮಿಸಿಲ್ಲ. ಯೋಜನೆಯನ್ನು ತಯಾರಿಸುವುದರಲ್ಲಿ ಎಲ್ಲರೂ ಒಪ್ಪಂದಕ್ಕೆ ಬಂದಷ್ಟು ಕಟ್ಟಬೇಕಾದ ನಿರ್ಮಾಣವು ಸುಲಭವಲ್ಲ. ಆದರೆ ಅದು ನಿರ್ಮಾಣವಾಗಬೇಕಾಗಿರುವುದರ ತ್ವರೆ ಯುರೋಪನ್ನು ವಿಭಜಿಸುವ ಗೋಡೆಯಾಗದೆ ೨ ಭಾಗಗಳನ್ನೂ ಕೂಡಿಸುವ ಸೇತುವಾಗಬಹುದಾಗಿದೆ.

ಒಪ್ಪಂದಕ್ಕೆ ಹಾಕಿದ ಸಹಿಯ ನಿಜವಾದ ಅರ್ಥ— ರಾಷ್ಟ್ರಧರ್ಮದ ಮೇಲೆ ನಿಂತ ರಾಜ್ಯವು ಇನ್ನು ಮುಂದೆ ಒಂದು ಆರ್ಥಿಕ ಇಲ್ಲವೆ ಸಮರನೈತಿಕ ಪ್ರದೇಶ ಎನ್ನಿಸದು, ಹಾಗೆ ಎನ್ನಿಸಬೇಕಾದರೆ ಅದಕ್ಕೆ ಅಮೇರಿಕದ ಸಂಯುಕ್ತ ಸಂಸ್ಥಾನ ಇಲ್ಲವೆ ಸೋವಿಯಟ್ ರಶಿಯದಂತೆ ಖಂಡಲಕ್ಷಣವಿರಬೇಕು. ರಾಷ್ಟ್ರೀಯತೆಯು ಹೆಚ್ಚು ಹೆಚ್ಚಾಗಿ ಸಾರ್ವಭೌಮ ರಾಜ್ಯವೆನ್ನಿಸಿಕೊಳ್ಳಲು ಬಯಸುವುದಕ್ಕೆ ಜಗತ್ತಿನ ಸಮಾಜದಲ್ಲಿ ಸ್ಥಾನವಿಲ್ಲ; ಅದು ಇರಬೇಕಾದರೆ ಒಂದು ದೇಶದಲ್ಲಿಯ ಗಡಿಮಿತಿಯುಳ್ಳ ಪ್ರಾಂತವೊಂದರಂತೆ ಮಾತ್ರ.

ನಮಗಿಂದು ಹೊಸದೊಂದು ಜ್ಞಾನಯುಗ, ಬೆಳಕುಗಾಲ ಬೇಕಾಗಿದೆ. ಮಹಾ ಐರೋಪ್ಯರಾದ ವೋಲ್ಟೇರ್ ಮತ್ತು ಗೋಯ್ಟೆಯವರಿಗಿದ್ದಂತಹ ವಿಶ್ವ ವ್ಯಕ್ತಿಯಾದ ಮನೋಧರ್ಮಕ್ಕೆ ನಾವು ಶರಣಾಗಬೇಕು. ರಾಷ್ಟ್ರೀಯತೆಯಿಂದು ಸಂಕುಚಿತವಾಗಿ ಪರಿಣಮಿಸಿದೆ. ಈ ಕಾಲದಲ್ಲಿ 'ತಪ್ಪಾಗಲಿ ಸರಿಯಾಗಲಿ, ನನ್ನ ನಾಡು ಮಾಡಿದ್ದನ್ನು ನಾನು ಎತ್ತಿಹಿಡಿಯಬೇಕು' ಎಂಬವರಿಗೆ ರಾಜ್ಯಭಾರ ನಿರ್ವಹಣಕ್ಕೆ ಅಗತ್ಯವಾದ ಮರ್ಮಜ್ಞತೆ ಮತ್ತು ಪ್ರತಿಭೆಗಳಿಲ್ಲವೆನ್ನಬೇಕಾಗುತ್ತದೆ.

ಅಧ್ಯಕ್ಷ ಟ್ರೂಮನ್ನರ ಭಾಷಣವೊಂದು ಉಷ್ಣಮಾಪಕ ಯಂತ್ರವಾಗಿ ಅಂತಾರಾಷ್ಟ್ರೀಯ ವಾತಾವರಣದಲ್ಲಿರುವ ಜ್ವರದ ಉಷ್ಣಾಂಶವನ್ನು ಗೊತ್ತುಹಚ್ಚಿದೆ. ೧೯೩೮ರ ಮಳೆಗಾಲದಲ್ಲಿ ಜರ್ಮನಿಯು ಜೆಕೋಸ್ಲೊವೇಕಿಯವನ್ನು ಆಕ್ರಮಿಸಿದ ಬಳಿಕ ಇಂದಿನ ವರೆಗೆ ಎಂದೂ ನಾವು ಅಪಾಯದ ಜರಿಯ ಅಂಚಿಗೆ ಇಷ್ಟು ಸಮೀಪವರ್ತಿಗಳಾಗಿ ಇದ್ದುದಿಲ್ಲ. ಯುದ್ಧದ ಕಲ್ಪನೆಯ ಸುತ್ತ ಅನಿವಾರ್ಯತೆಯ ಆವರಣ ಹಬ್ಬುತ್ತ ಬಂದಿದೆ. ಎರಡು ಪಕ್ಷಗಳಲ್ಲಿಯೂ ಧುರೀಣರು ಪರಸ್ಪರ ವಾದ ಮಾಡುವುದರತ್ತ ಉದಾಸೀನರಾಗಿ ಒಬ್ಬರನ್ನೊಬ್ಬರು ಕೀಳ್ಗಳೆವುದರಲ್ಲೇ ಮಗ್ನರಾಗುವ ಪ್ರವೃತ್ತಿಯನ್ನು ತಾಳುತ್ತಲಿದ್ದಾರೆ. ಈ ರೀತಿಯಿಂದ ಸುದ್ದಿಯು ದಿನೇ ದಿನೇ ವಿಶಿಷ್ಟತೆಗೊಂಡು ಬಂದು ಪಕ್ಷದ್ವಯದ ನಡುವಣ ಅಂತರ ಅಗಲವಾಗುತ್ತಿರುವುದನ್ನು ಸೂಚಿಸುತ್ತಿದೆ. ಪತ್ರಿಕಾವ್ಯವಸಾಯಿಗಳು— ಇದು ಕರಿ, ಇದು ಬಿಳಿ— ಎಂದು ವರ್ಗೀಕರಣ ಮಾಡುವಂತೆ— ಇವರು ನಮ್ಮ ಹಗೆಗಳು, ಇವರು ಗೆಳೆಯರು— ಎಂದು ಬೊಟ್ಟುಮಾಡಿ ತೋರಿಸಲಾರಂಭಿಸಿದ್ದಾರೆ.

೧೯೩೯ರ ಹಿಂದೆ ನಾವು (ಲೀಗ್ ಆಫ್ ನೇಶನ್ಸ್) ರಾಷ್ಟ್ರಸಂಘವನ್ನು ನೋಡುತ್ತಿದ್ದ— ಹವಿಸೆಯ ಅಪನಂಬಿಕೆಗೆ ಗಂಭೀರವಾಗಿ ಹತ್ತಿರವೆನಿಸುವ— ಭಾವದಿಂದ ಇಂದಿನ (ಯುನೈಟೆಡ್ ನೇಶನ್ಸ್) ರಾಷ್ಟ್ರಸಂಘದತ್ತ ನೋಡುತ್ತಿದ್ದೇವೆ. ಅದು ವಿಸ್ತರಿಸಿದ ವಿನಯವಷ್ಟೇ ಅಲ್ಲದೆ, ಆ ಮಂತ್ರಿಸಿದ ಶ್ರದ್ಧೆಯಲ್ಲ. ಮತ್ತೊಂದು ಶಿಬಿರದಲ್ಲಿರುವವರ ತಪ್ಪುಗಳನ್ನು ನಾವು ಹುಡುಕತೊಡಗುತ್ತೇವೆ. ವಾಸ್ತವಿಕವಾಗಿ ನಾವು ಅದರಲ್ಲಿರುವ ಸಾಮಂಜಸ್ಯಗಳನ್ನು ನೋಡುವ ದೃಷ್ಟಿಯನ್ನೇ ಕಳೆದುಕೊಂಡಿದ್ದೇವೆ. ಎರಡೂ ಪಕ್ಷಗಳನ್ನು ಕಂಡರೆ, ಗ್ಲಾಡಿಯೇಟರ್ಸ್ ಎಂಬ ಹೆಸರಿನ ಜಟ್ಟಿಗಳು ಯುದ್ಧಕ್ಕೆ ತಯಾರಿದ್ದರೂ ಮೊದಲು ಮೇಲೆ ಬೀಳಲು ಅಷ್ಟು ಸಿದ್ಧರಾಗಿರದೆ ಪರಸ್ಪರ ನಿರೀಕ್ಷಿಸುತ್ತ ನಿಂತಂತೆ ತೋರುತ್ತದೆ. ಅನ್ಯಥನು ಕಾರ್ಯವು ಸಂಭವಿಸಿಯೇ ತೀರುವುದೆಂಬ ಅಚಲ ವಿಶ್ವಾಸದ ಮೇಲೆ ನನ್ನ ಚಿತ್ತವೃತ್ತಿ ಪರಿಪೋಷ ಹೊಂದುತ್ತಿದೆ; ಮತ್ತು ನಿರಾಶಾವಾದದತ್ತ ಶಾನೇ ಸಾಗಿದರೂ ಅನಿವಾ-


ಧುರೀಣರ ಕ್ರೋಧಾಂಧತೆ— ರಾಷ್ಟ್ರಗಳ ರಣಸನ್ನಾಹ— ಮೊದಲು ಕೈಯೆತ್ತಲು ಅಂಜಿಕೆ— ಶಾಂತಿ ಪ್ರಯತ್ನದ ಅಭಾವ— ಪ್ರಸಾದನಾರೋಪದ ಶಂಕೆ—

ಅಂತರ್ದೇಶೀಯ ವಾತಾವರಣದಲ್ಲಿ ರಣೋನ್ಮಾದ ಪಸರಿಸುತ್ತಿರುವುದನ್ನು ಲಕ್ಷಿಸಿ, ಇಂತಹ ಸಂಕಟಗ್ರಸ್ತ ಸಮಯದಲ್ಲಿ ಮಹಾ-ರಾಷ್ಟ್ರಗಳೆನಿಸಿದ ಇಂಗ್ಲಂಡು ರಶಿಯಗಳ ನಾಯಕ ಪಟ್ಟದಲ್ಲಿ ಮಂಡಿಸಿರುವ ಆಟ್ಲೀ-ಸ್ಟಾಲಿನ್ನರು ಸಂಭಾವ್ಯಯುದ್ಧವನ್ನು ಸಂಭವಿಸದಂತೆ ಮಾಡಿ, ಪ್ರಜಾಸತ್ತೆಯ ನಿಜವಾದ ಧ್ಯೇಯವೆನಿಸುವ ಶಾಂತಿಯನ್ನು ಹೇಗೆ ಕಾಯಬಲ್ಲರೆಂಬುದನ್ನು ಈ ಕೆಳಗಿನ ಲೇಖದಲ್ಲಿ ಜಗತ್ಪ್ರಸಿದ್ಧ ಲೇಖಕರಾದ ಇಂಗ್ಲಂಡಿನ ಪ್ರೊ. ಹೆರಾಲ್ಡ್ ಜೆ. ಲಾಸ್ಕಿಯವರು ವಿವೇಚಿಸಿದ್ದಾರೆ.

ರ್ಯವಾಗಿ ತಾವು ಅತ್ತ ಒತ್ತಲ್ಪಟ್ಟಿರುವುದಾಗಿ ತಿಳಿದುಕೊಂಡಿರುವ ರಾಜಕಾರ್ಯಪ್ರವೀಣರೇ ಬಹಳ. ಶಾಂತಿಗೆ ಯತ್ನಿಸಿದರೆ ಅದು ಪ್ರಸಾದನ (Appeasement) ಎಂದು ಕೊಂಡಾರೆಂಬ ಭಯದಿಂದ ನಾವು ಒಬ್ಬರನ್ನೊಬ್ಬರು ಯುದ್ಧದತ್ತ ಜಗ್ಗಿಕೊಂಡು ಹೊರಟಿದ್ದೇವೆ.

ಅಂಜಿಕೆಗೆ ಕಾರಣವಿಲ್ಲ


ಅದು ತಪ್ಪುತಿಳುವಳಿಕೆಯೆಂದು ನನ್ನ ಮತ. ಯಾವುದು ಅಪಾಯಕ್ಕೊಳಗಾಗಿದೆ ಎಂಬುದರತ್ತ ಅದು ಸರಿಯಾದ ಲಕ್ಷ್ಯವಿತ್ತಿಲ್ಲ. ಒಣ ಮರ್ಯಾದೆಗಾಗಿ ಅಂಜುವ ಸಮಯವಿದಲ್ಲ. ಗೌರವಯುತವಾದ ಒಪ್ಪಂದಕ್ಕೆ ಅವಕಾಶವಿದೆಯೋ ಹೇಗೆಂಬುದನ್ನು ತನ್ನ ಧುರೀಣರ ಮೂಲಕ ಪರಿಶೋಧಿಸಿ ಎಂದೂ ಯಾವ ನಾಡೂ ನಷ್ಟಹೊಂದಿಲ್ಲ. ಹೊಸ ಜಾಗತಿಕ ಯುದ್ಧದಿಂದ ಲಾಭ ಪಡೆಯಬಲ್ಲ ರಾಷ್ಟ್ರವೊಂದೂ ಕಂಡುಬರುವುದಿಲ್ಲ. ಇದನ್ನು ತಿಳಿದುಕೊಳ್ಳದ ನಾಗರಿಕರು ಯಾವ ನಾಡಿನಲ್ಲೂ ಇಲ್ಲ. ಸ್ಪಷ್ಟವಾದ ಉದಾಹರಣೆಯನ್ನು ತೆಗೆದುಕೊಳ್ಳುವುದಾದರೆ, ನಾಳೆ ಸೋವಿಯಟ್ ರಶಿಯವನ್ನು ಅಮೇರಿಕ ಸೋಲಿಸಿತೆನ್ನೋಣ; ಅಗ ಇದೇ ಅಮೇರಿಕವನ್ನೇ ಸೈನ್ಯಮಯಮಾಡಿದರೂ ರಶಿಯವನ್ನು ಆಕ್ರಮಿಸಿ ಆಳುವುದು ದುಸ್ತರವಾದೀತು. ಅದರಿಂದ ಪ್ರಜಾಸತ್ತೆ ಹೇಗೋ ಹಾಗೆ "ಸ್ವತಂತ್ರ ಸಾಹಸವೂ (Free Enterprise)" ಫಲಿಸಲಾರದು. ಅಷ್ಟೇ ಏಕೆ— 'ಗ್ಯಾಡರೀನ' ಹಾದಿಯಂತೆ ನಾವು ವಿನಾಶೋನ್ಮುಖರಾದರೂ ಆಗಬಹುದು. ನನಗಂತೂ ತಿಳಿಯದು ನಾವಿಂದು ನಮ್ಮ ಭಾವನೆಗಳಾದ ಭಯ, ಸಂಶಯ, ದ್ವೇಷ ಇವುಗಳನ್ನೇ ತಿಂದು ಬದುಕುವ ಭಯಂಕರ ಸ್ಥಿತಿಗೆ ಮುಟ್ಟಿರುವೆವು. ಅವೇ ನಮ್ಮ ವಿಚಾರವನ್ನು ಪ್ರಚೋದಿಸತಕ್ಕವಾಗಿವೆ. ಕ್ರೋಧಪರವಶರಾಗಿ ನಾವು ಬುದ್ಧಿಶೂನ್ಯರಾಗುತ್ತ ಬಂದಿದ್ದೇವೆ.



ಸ್ಟಾಲಿನ

ಪರಿವರ್ತನ

ಸಿನೇಟರ ಟ್ಯಾಫ್ಟ್‌ನ ಅಭಿಪ್ರಾಯವು ಹೆಚ್ಚಾಗಿ ನನಗೆ ಸೇರುವುದಿಲ್ಲ; ಹಾಗಾದರೂ ಕಡೆಯ ಚರ್ಚೆಯಲ್ಲಿ ಅವನು — 'ನಾವು ಯುದ್ಧವನ್ನೇ ಮಾಡಬೇಕೆಂದಿದ್ದರೆ ಯುರೋಪಿಗೆ ಸಹಾಯ ಮಾಡುವ ಮಾರ್ಶಲ್ ಯೋಜನೆಯೊಂದು ಹುಚ್ಚು ಕಾರಭಾರ; ಶಾಂತಿ ಸ್ಥಾಪನೆಗೆ ನಾವು ಹೊರಟಿದ್ದರೆ ಆ ಬಗ್ಗೆ ನಾವು ಪ್ರಯತ್ನ ಮಾಡತೊಡಗಬೇಕು. ಇಬ್ಬರವರೂ ತಾವು ಎಲ್ಲಿದ್ದೇವೆ, ಎತ್ತ ಹೊರಟಿದ್ದೇವೆ, ಎಂಬುದನ್ನು ವಿಚಾರಿಸತೊಡಗಬೇಕು. ಸ್ಟಾಲಿನ್ನರು ಬುದ್ಧಿವಂತರಾಗಿದ್ದರೆ ಹಾಗೆ ಮಾಡಿ ಸಮಾಜಸತ್ತಾವಾದಕ್ಕೆ ಹೆಚ್ಚು ಜನಬಲವನ್ನು ಪಡೆಯುತ್ತಿದ್ದರು; ಅದರ ಬದಲು ಅವರೀಗ ತಮ್ಮ ಸಹೋದ್ಯೋಗಿಗಳೊಡನೆ ಕ್ರೆಮ್ಲಿನ್ನಿನ ಕಲ್ಪನಾತೀತವಾದ ಅಂಧಕಾರದಲ್ಲಿ ಕುಳಿತು ಚಿಂತಾಮಗ್ನರಾಗಿದ್ದಾರೆ. ಅನೇಕ ರೀತಿಯಿಂದ ಮನುಷ್ಯರ ವಿಚಾರಶಕ್ತಿಯನ್ನು ಅವರು ಕೆರಳಿಸಬಲ್ಲರು; ಜೆಕೊಸ್ಲೊವೇಕಿಯದಲ್ಲಿನಂಥ ಅಸಮರ್ಥನೀಯವಾದ ಶುದ್ಧೀಕರಣದ ಕೊಲೆಯನ್ನು ನಿಲ್ಲಿಸಬಲ್ಲರು. ಅನಿಷ್ಟವೂ ಗುಪ್ತವೂ ಆದ ಹುಣ್ಣಾಗಿದೆ ಫ್ರಾಂಕೋ — ಸ್ಪೈಯಿನನ್ನು ತಯಾರಿಸುವುದನ್ನು ನಿಲ್ಲಿಸುವ ಶರ್ತಿನಮೇಲೆ ಅವರು ಗ್ರೀಸಿನ ದುರಂತವನ್ನು ಕೊನೆಗಾಣಿಸಲು ನ್ಯಾಯವಾದ ಸಹಕಾರವನ್ನು ನೀಡಬಹುದಾಗಿತ್ತು; ಪರಮಾಣು ಶಕ್ತಿಯ ಬಗ್ಗೆ ಉಂಟಾದ ಬಿಕ್ಕಟ್ಟನ್ನು ನ್ಯಾಯವಾದ ಸಲಹೆಯಿಂದ ಬಗೆಹರಿಸಬಹುದಾಗಿತ್ತು. ಸಂ. ರಾ. ಸಂಘದ ಆಶ್ರಯದಲ್ಲಿ ಅವರು ತುರ್ಕಿ ಇಲ್ಲವೆ ಪರ್ಷಿಯದ ಸಂಬಂಧದಲ್ಲಿ ಹೊಸದೊಂದು ಕ್ರಮವನ್ನು ತೆಗೆದುಕೊಳ್ಳಲು ಮುಂದೆ ಬರಬಹುದಾಗಿತ್ತು. ರಶಿಯನ್ನರಿಗೆ ಸಹಜವಾದ ಔದಾರ್ಯವನ್ನು ತೋರಿ ಆಸ್ಟ್ರಿಯನ್ನರನ್ನು ಆಕ್ರಮಣದ ಚಿತ್ರಹಿಂಸೆಯಿಂದ ಮುಕ್ತಗೊಳಿಸಬಹುದಾಗಿತ್ತು. ಮಾರ್ಶಲ್ ಯೋಜನೆಯನ್ನು ಪ್ಯಾರಿಸ್ಸಿನಲ್ಲಿ ತಿರಸ್ಕರಿಸಿದ್ದೂ ತಪ್ಪಾಯಿತು. ಅದರಿಂದ ಕೆಲವೇ ತಿಂಗಳಲ್ಲಿ ಇಡಿ ಪೂರ್ವ ಯುರೋಪು ನರಳುವಂತಾದೀತು ಎಂದುಹೇಳಿ ಟ್ರೂಮನ್ನರ ಇತ್ತೀಚಿನ ವಾಗ್ದಾನದ ಪ್ರಾಮಾಣಿಕತೆಯನ್ನು ಪರೀಕ್ಷಿಸಬಹುದಾಗಿತ್ತು. ಮಾಸ್ಕೋದಲ್ಲಿ ಪ್ರಸಿದ್ಧವಾದ ಪರಿವರ್ತನವನ್ನು ಸಾಧಿಸುವ ಕಾಲಬಂದಿದೆ ಎಂದು ಸ್ಟಾಲಿನ್ನರು ತಮ್ಮ ಸಹೋದ್ಯೋಗಿಗಳಿಗೆ ಹೇಳಬಹುದಾಗಿತ್ತು. ಅದನ್ನು ಬಿಟ್ಟು ಅವರು ಪಶ್ಚಿಮ ಯುರೋಪು ಮತ್ತು ಅಮೇರಿಕಗಳನ್ನು ವಂಚಿಸಹೋಗಿ ತಮ್ಮನ್ನೇ ತಾವು ವಂಚಿಸಿಕೊಳ್ಳುತ್ತಿದ್ದಾರೆ. ಇತಿಹಾಸದಲ್ಲಿ ಅತ್ಯುನ್ನತ ಸ್ಥಾನ ಪಡೆಯಬೇಕೆಂದಿದ್ದರೆ, ಪಾಶ್ಚಾತ್ಯ ರಾಜಕಾರ್ಯ ಪ್ರವೀಣರಾರೂ ಅರಿಯದಿರುವಂಥ ಸೈನ್ಯಬಲದಿಂದ ಸಂಪಾದಿಸಿದ ವಿಜಯದಿಂದ ಶಾಂತಿಸ್ಥಾಪನೆ ಮಾಡುವುದು ಹೇಗೆಂಬುದನ್ನು ಅವರು ತೋರಿಸಿಕೊಡಬೇಕಾಗಿತ್ತು. ಏನೇ ಆಗಲಿ, ಯುದ್ಧದತ್ತ ಒಲಿಕೆ ಹೆಚ್ಚಾಗಲು ಅವರು ಅವಕಾಶವಿತ್ತುದೇ ಆದರೆ ಮಾರ್ಕ್ಸ್ ಮತ್ತು ಎಂಗೆಲ್ಸರು ಉದಾತ್ತ ಕಲ್ಪನೆಯಲ್ಲಿ ಕಂಡ ಸಾಮ್ಯವಾದಿ ಪ್ರಜಾಸತ್ತೆಯಲ್ಲಿಯ ಸ್ವತಂತ್ರ ಜನತೆಯ ಕನಸನ್ನು ನನಸಾಗಿ ಮಾಡುವ ಸೋವಿಯಟ್ ರಶಿಯವು ಅಲ್ಲಿ ಉಳಿಯಲಾರದು; ಸನಿಹದ ಭವಿಷ್ಯತ್ಕಾಲದಲ್ಲಿ ಹಾಗೆ ಆಶಿಸಲು ಧೈರ್ಯವಿರದ ಜನತೆಯುಳ್ಳ ಕ್ಷುದ್ರವೂ ಮರುಸ್ಥಲಸದೃಶವೂ ಆದ ಅಪ್ರಯೋಜಕ ಪ್ರದೇಶವಾಗಿ ಅದು ಪರಿಣಮಿಸೀತು.



ಆಟ್ಲಿ

ಮಾತಾಡುತ್ತ ಕುಳಿತುಕೊಳ್ಳುವ ಕಾಲವಲ್ಲ

ಇದು ಕೇವಲ ಸ್ಟಾಲಿನ್ನರಿಗಷ್ಟೇ ಅಲ್ಲ; ಅಟ್ಲಿಯವರಿಗೂ ಸಮಪ್ರಮಾಣದಲ್ಲಿ ಅನ್ವಯಿಸುತ್ತದೆ. ನಮ್ಮ ಸುತ್ತ ಯುದ್ಧದ ಅನೇಕ ಹಾದಿಗಳಿವೆ; ಹಾಗೆಯೇ ಶಾಂತಿ ಮಾರ್ಗಗಳು ಅನೇಕವಿವೆ. ಶಾಂತಿ ಮಾರ್ಗದ ಹೆಬ್ಬಾಗಿಲಿಗೆ ಹಾಕಿದ ಬೀಗವನ್ನು ತೆರೆವ ಸೋವಿಯಟ್ ಮುಖಂಡರ ಮನಸ್ಸನ್ನು ಅಟ್ಲಿಯವರು ಅಲ್ಲಿಗೆ ಹೋಗಿ ಹುಡುಕಿತೆಗೆಯಬೇಕೆಂದು ನಾನು ಹೇಳುತ್ತೇನೆ. ಅನಿವಾರ್ಯವಾದಲ್ಲಿ ಪಾಶ್ಚಾತ್ಯರಾದ ನಾವು ಪ್ರಾಣವನ್ನೇ ಕೊಡಲು ಸಿದ್ಧರಿರುವ ಮೂಲತತ್ವಗಳ ವಿರುದ್ಧವಾದ ಯಾವ ಸೂಚನೆಯನ್ನೂ ಸ್ವೀಕರಿಸಬೇಕಾಗಿಲ್ಲ. ಆದರೆ ೧೯೩೯–೪೫ರ ಉತ್ಪಾತದ ನಂತರ ಹೀಗೆ ವಿವೇಚನಾ ಬುದ್ಧಿಯಿಂದ ಎಲ್ಲಿಯೂ / ಅಪ್ಯಾಯಕವಾಗಿ ಯುದ್ಧ ಸಿದ್ಧತೆ ಮುಂದರಿಯುವುದು ಅಯೋಗ್ಯವಾಗುವದು; ಅದರಿಂದ ಚರ್ಚೆಯೊಂದುದೇ ಅಪ್ರಯೋಜಕವೆನಿಸಿಬಿಟ್ಟಿದೆ. ಅದು ಯಾವಾಗಲೂ ಪ್ರಯೋಜನಕಾರಿಯೇ. ಅಂತರಾಷ್ಟ್ರೀಯ ಭ್ರಾಂತಿಗೆ ಅದೊಂದು ಸುರಕ್ಷಿತತೆಯ ಕವಚ. ಅದನ್ನು ಅತಿತ್ವರೆಯಿಂದ ಆರಂಭಿಸಲು ಬರದು. ವಿದೇಶ ಕಾಬಿನವರು ತಂತಮ್ಮ ವಿಚಿತ್ರ ಕಲ್ಪನೆಯ ಜಾಲವನ್ನು ಹೆಣೆಯುತ್ತಿರಲಿ. ಪ್ರಜಾರಾಜ್ಯಕ್ಕೆ ಅಗತ್ಯವಾದ ಶಾಂತಿಯನ್ನು ಪ್ರಜಾತಂತ್ರದ ಮೂಲಕ ಪಾತ್ರಿಮಾಡಿಕೊಡುವುದೇ ಪ್ರಜಾಧುರೀಣನ ಕರ್ತವ್ಯ. ಶಾಂತಿ ಮತ್ತು ಸ್ನೇಹ ಸಾಧ್ಯವೋ ಅಲ್ಲವೋ ಎಂಬುದನ್ನು ಪರೀಕ್ಷಿಸಲು ಸ್ಟಾಲಿನ್ನರಿಗೆ ಇಂಥ ಬಿಡದಿದ್ದರೆ, ಧರ್ಮ ಮತ್ತು ಮಹತ್ವಾಕಾಂಕ್ಷೆಗಳ ಆವರವಿದ್ದು ಅದು ಬಂದರೆ ಶಾಂತಿಸ್ಥಾಪಕನಾದ ವೀರನ ಮಹತ್ವವನ್ನು ಅವರಿಗೆ ಅಟ್ಲಿಯವರು ತಿಳಿಸಿ ಹೇಳಬೇಕು. ಇಲ್ಲವೆ ರಶಿಯದ ಸಮಾಜಸತ್ತಾವಾದದ ಪೈಶಾಚಿಕ ಪ್ರಭಾವತೆಯನ್ನು (Immensity) ಜಗತ್ತಿಗೆ ತೋರಿಸಿಯೇ ಬಿಡುವೆನೆಂಬ ದೃಢಸಂಕಲ್ಪವನ್ನು ತಾಳಬೇಕು. ಅವರು ಅದ್ವಿ ಆತಂಕಗಳನ್ನು ಬದಿಗೊತ್ತಿ ಅವಕಾಶ ಇರುವ ಈ ಕಾಲದಲ್ಲಿ ಕಾರ್ಯಪ್ರವೃತ್ತರಾದರೆ ಇತಿಹಾಸದಲ್ಲಿಯ ಈ ಚಿತ್ರಹಿಂಸಾಗ್ರಸ್ತ ಯುಗದ ಬಿಡುಗಡೆಯನ್ನು ಸುರಕ್ಷಿತವಾಗಿಡುವುದರಲ್ಲಿ ಬಹುದೊಡ್ಡ ಪಾತ್ರವನ್ನು ವಹಿಸಬಲ್ಲರು. ಅಂತಹ ಕಾಲಗಳಲ್ಲಿ ಚರ್ಚೆಯೊಂದುದು ಬರಿಯದಾಗಿ [illegible] ನಿಲ್ಲಬೇಕು.

ಹರಿಜನ

ಸರ್ವೋದಯ ದೀಕ್ಷೆ

ಕೆಲವೊಂದು ವಿಶಿಷ್ಟ ಕಾರ್ಯಕ್ರಮಗಳನ್ನು ಜಯಸ್ವಿ ಮಾಡುವದಕ್ಕೆ ಮಾತ್ರ ಸಹಕರಿಸುವ ಮತ್ತು ಉಳಿದ ಸಮಯದಲ್ಲೆಲ್ಲ ಸ್ವತಂತ್ರವಾಗಿಯೇ ಕಾರ್ಯ ಮಾಡುತ್ತಿರುವ ವಿವಿಧ ವಿಧಾಯಕ ಸಂಘಗಳಿಂದ ಅಹಿಂಸಾ ಜೀವನದಿಂದ ಹೊರಹೊಮ್ಮಬಹುದಾಗಿದ್ದ ಪ್ರಕಾಶವು ಸರ್ವತ್ರ ಪ್ರಸಾರವಾಗಲು ಅಸಮರ್ಥವಾಗಿದೆಯೆಂದು ಹಲವು ದಿನಗಳಿಂದ ಎನಿಸಹತ್ತಿದೆ. ಪ್ರತಿಯೊಬ್ಬ ತನ್ನ ಸಂಘದ ಸಂಕುಚಿತ ಧೋರಣಕ್ಕನುಸಾರವಾಗಿಯೆ ಕೆಲಸ ಮಾಡಿದ್ದು ಇದರ ಕಾರಣವು. ಸಂಯುಕ್ತವಾಗಿ ಪರಸ್ಪರ ಸಹಕರಿಸಿ ಕಾರ್ಯ ಮಾಡುವ ಅವಶ್ಯಕತೆ ಇದರಿಂದ ಉಂಟಾಗಿತ್ತು; ವಿಧಾಯಕ ಕಾರ್ಯಕರ್ತರ ಪರಿಷತ್ತು ಇಂಥದೊಂದು ಮಾರ್ಗವನ್ನನುಸರಿಸಬೇಕೆಂದು ಶಿಫಾರಸು ಮಾಡಿತು. ಇದರಿಂದ ಸಂಯುಕ್ತೀಕರಣಕ್ಕೆ ಅವಕಾಶ ದೊರೆತಂತಾಯಿತು. ವಿವಿಧ ಸಂಘಗಳ ಕಾರ್ಯಕರ್ತರ ವೈಯಕ್ತಿಕ ಜೀವನದಲ್ಲಿ ಬದಲಾವಣೆಯಾಗುವುದು ಸಂಯುಕ್ತ ಕಾರ್ಯಕ್ರಮದ ದೃಷ್ಟಿಯಿಂದ ಅವಶ್ಯವೆನಿಸುತ್ತದೆ. ಯಾವದೇ ಬಗೆಯ ವಿಧಾಯಕ ಚಟುವಟಿಕೆಗಳಲ್ಲಿ ತೊಡಗುವ ಕಾರ್ಯಕರ್ತರು ಕನಿಷ್ಠ ಈ ಏಳು ಕೆಳಗಿನ ವ್ರತಗಳನ್ನು ಪಾಲಿಸಬೇಕೆಂದು ಸೂಚಿಸಲಾಯಿತು; ಅ. ಭಾ. ಚ. ಸಂಘವು ಈ ಆಶಯದ ಒಂದು ಗೊತ್ತುವಳಿಯನ್ನೂ ಸ್ವೀಕರಿಸಿತು.

೧) ಪ್ರತಿಯೊಬ್ಬ ಕಾರ್ಯಕರ್ತ ನಿಯತವಾಗಿ ನೂಲಬೇಕು.

೨) ಸ್ವತಃ ನೂತ, ಇಲ್ಲವೆ ಮನೆಯಲ್ಲಿ ನೂತ ಇಲ್ಲವೆ ಪ್ರಮಾಣಪತ್ರ ಪಡೆದ ನೂಲಿನಿಂದ ತಯಾರಾದ ಖಾದಿಯನ್ನು ಅವನು ಧರಿಸಬೇಕು.

೩) ತಕ್ಕಮಟ್ಟಿಗೆ ಅವನು ಹಳ್ಳಿಗಳಲ್ಲಿ ತಯಾರಾದ ಸರಕುಗಳನ್ನೇ ಉಪಯೋಗಿಸಬೇಕು.

೪) ಮನೆಯಲ್ಲಿರುವಾಗ ಅವನು ಆಕಳ ಹಾಲನ್ನೇ ಉಪಯೋಗಿಸಲು ಪ್ರಯತ್ನಿಸಬೇಕು.

೫) ಅವನು ಸ್ವತಃ ತಿಂಗಳಲ್ಲಿ ಒಮ್ಮೆಯಾದರೂ ಶೌಚಕೂಪಗಳನ್ನು ಸ್ವಚ್ಛ ಮಾಡಬೇಕು ಇಲ್ಲವೆ ಹಳ್ಳಿಯ ಸ್ವಚ್ಛತೆಯ ಯಾವದೊಂದು ಕೆಲಸವನ್ನು ಮಾಡಬೇಕು.

೬) ಮೂಲ ಶಿಕ್ಷಣ ಶಾಲೆಗಳಿದ್ದಲ್ಲೆಲ್ಲ ಅವನು ತನ್ನ ಮಕ್ಕಳಿಗೆ ಆ ಶಾಲೆಗಳಲ್ಲಿಯೆ ಶಿಕ್ಷಣ ಕೊಡಿಸಬೇಕು.

೭) ಅವನು ದೇವನಾಗರಿ, ಉರ್ದು ಮತ್ತು ಒಂದಾದರೂ ದಕ್ಷಿಣ ಹಿಂದುಸ್ತಾನದ ಲಿಪಿಯನ್ನು ಕಲಿಯಲು ಪ್ರಯತ್ನಿಸಬೇಕು.

೧) ನಿಯತವಾಗಿ ನೂಲುವುದೆಂದರೆ ಅದೊಂದು ಬಿಡಲಾರದ ವಿಧಿಯೆಂದು ಹೇಳುವ ಉದ್ದೇಶವಿಲ್ಲ. ತರುಣನಿರಲಿ ವೃದ್ಧನಿರಲಿ ಶ್ರೀಮಂತನಿರಲಿ ಬಡವನಿರಲಿ ಪ್ರತಿಯೊಬ್ಬ ವ್ಯಕ್ತಿಯು ಸಾಮೂಹಿಕವಾಗಿ ಮಾಡತಕ್ಕ ಒಂದು ಕೆಲಸವಿರಲಿ ಎಂಬ ಜೀವನದ ಮೂಲಭೂತ ತತ್ವಕ್ಕೆ ದೃಢವಾಗಿ ಬದ್ಧರಾಗುಳಿಯಬೇಕೆಂಬುದರ ದ್ಯೋತಕವೆಂದು ಈ ನಿಯಮವನ್ನಿಡಲಾಗಿದೆ. ಸಂಯುಕ್ತ ಕಾರ್ಯವು ಏನನ್ನು ಸಾಧಿಸಬಲ್ಲುದೆಂಬುದರ ಪ್ರತ್ಯಕ್ಷ ನಿದರ್ಶನವನ್ನು ನೂಲುವದು ತೋರಿಸುತ್ತದೆ. ಇದೇ ಸರ್ವೋದಯ ದೀಕ್ಷೆ. ಎರಡನೆಯವರು ಮಾಡಿದ ಹಂಜಿಗಳನ್ನು ಉಪಯೋಗಿಸುವ ವಿಚಾರವನ್ನು ನೂಲುವವರು ಇಟ್ಟುಕೊಳ್ಳಬಾರದೆಂದೂ ಅವನು ಅರಿಸದೇ ಇದ್ದ ಹತ್ತಿಯಿಂದ ಸ್ವತಃ ತನಾಡು ಮತ್ತು ಉಳಿದ ವಿಧಾನಗಳಿಂದ ಹಂಜಿ ಮಾಡಿಕೊಳ್ಳಬೇಕೆಂದೂ ನಾನು ಸೂಚಿಸಬಯಸುತ್ತೇನೆ. ಇದಾದರೂ ನೂಲುವುದರ ಭಾಗವು; ಇದಕ್ಕಾಗಿ ಹಲವಾರು ಸಲ ಇಡೀ ವೇಳೆಯನ್ನು ಕಳೆಯಬೇಕಾಗಿ ಬಂದು ನೂಲುವದಕ್ಕೆ ವೇಳೆ ದೊರೆಯದಿದ್ದರೂ ಚಿಂತೆಯಿಲ್ಲ. ಎರಡು ಸಲ ಜಾಸ್ತಿಯಾಗಿ ಹುರಿ ಹಾಕದಿದ್ದರೂ ನೂಲಿನ ಕೆಲಸ ಪೂರ್ಣವಾಗಲಿಲ್ಲೆಂದು ಅವನು ಭಾವಿಸತಕ್ಕದ್ದು.

೨) ಹೆಚ್ಚು ನಂಬರಿನ ನೂಲು ತೆಗೆದು ಅದರಿಂದ ತಯಾರಾದ ನಯವಾದ ಖಾದಿಯನ್ನು ಎರಡನೆಯವರಿಗೆ ಕೊಟ್ಟು ಅವರ ಒರಟಾದ ಖಾದಿಯನ್ನು ತಾನು ಧರಿಸುವದಕ್ಕೂ ಯಾವದೇ ಬಗೆಯ ಆಕ್ಷೇಪವಿಲ್ಲ. ಸ್ವಾವಲಂಬನದ ಮಾರ್ಗದಿಂದ ಪರಸ್ಪರ ಸಹಕರಿಸುವದು ಹೆಚ್ಚು ಉಚಿತವೇ. ಆ ಪಟ್ಟಿಯನ್ನು ಪಡೆದ ಖಾದಿಯನ್ನು ಕೊಳ್ಳುವರು ಅವಶ್ಯಕತೆಗಳನ್ನು ಪೂರೈಸಿಕೊಳ್ಳುವ ಮಟ್ಟಿಗೆ ಮಾತ್ರ ಮರ್ಯಾದಿತವಾಗಿರತಕ್ಕದ್ದು. ಅವರಿಗೆ ಬೇಕಾಗುವ ಖಾದಿಯನ್ನೆಲ್ಲ ಪೂರೈಸುವ ಸಾಧನ ಅವಾಗಬಾರದು.

೩) 'ತಕ್ಕಮಟ್ಟಿಗೆ' ಎಂಬ ಶಬ್ದಗಳ ಅರ್ಥ ಈ ವ್ರತಾಚರಣೆಯಿಂದ ಪಾರಾಗುವದಲ್ಲ. ಹಳ್ಳಿಗಳಲ್ಲಿ ತಯಾರಾದ ಸರಕುಗಳು ಬೇಕಾದಷ್ಟಿರುವದರಿಂದ ಅವು ಅವಶ್ಯವಾಗಿವೆ. ಹಳ್ಳಿಗಳ ಮನೋವೃತ್ತಿಯನ್ನು ಬೆಳೆಸುವದೇ ಉದ್ದೇಶವಾಗಿದೆ. ಯಾವದೊಂದು ನಿಯಮವನ್ನು ಯಂತ್ರದಂತೆ ಪಾಲಿಸುವದಕ್ಕಿಂತ ಉದ್ದೇಶವನ್ನು ತಿಳಿದುಕೊಂಡು ಆಚರಿಸುವದು ಹೆಚ್ಚು ಮಹತ್ವದ್ದಾಗಿದೆ. ಉದ್ದೇಶವು ಸ್ಪಷ್ಟವಾಗಿದ್ದರೆ ಅದರ ಆಚರಣೆಗೆ ಒಂದು ಬಗೆಯ ಅರ್ಥವುಂಟು. ಇಲ್ಲದಿದ್ದರೆ ಅದು ಅಂಧಾನುಕರಣವಾಗಿ ಒಂದು ಭಾರವಾಗಿ ಪರಿಣಮಿಸುವದು.

೪) ಕಾರ್ಯಕರ್ತರು ತಮ್ಮ ಕಾರ್ಯದಲ್ಲಿ ನಿರತರಾಗಲು ಸಮರ್ಥರಾಗುವದಕ್ಕಾಗಿ ಬೇಕೆಂತಲೆ ಆಕಳ ಹಾಲಿನ ನಿಯಮವನ್ನು ಸ್ವಲ್ಪ ಶಿಥಿಲಗೊಳಿಸಲಾಗಿದೆ. ಆಕಳ ಹಾಲನ್ನೇ ಉಪಯೋಗಿಸಬೇಕೆಂದು ಒತ್ತಾಯಪಡಿಸುವಲ್ಲಿ ಎಮ್ಮೆಯ ಬಗ್ಗೆ ಯಾವದೇ ಬಗೆಯ ದ್ವೇಷ ಭಾವನೆಯಿಲ್ಲ ಎಂಬುದನ್ನು ತೋರಿಸುವದೂ ಇದರ ಉದ್ದೇಶವಾಗಿದೆ. ಇದರಿಂದ ಕೆಲ ಮಟ್ಟಿಗೆ ಎಮ್ಮೆಗೂ ಸಹಾಯ ದೊರೆಯುವದು. ಆಕಳದ ಬಗೆ ಪ್ರಯತ್ನವನ್ನು ಕೇಂದ್ರೀಕರಿಸುವದು ಸದ್ಯದ ಅವಶ್ಯಕತೆಯಾಗಿದೆ.

೫) ಹರಿಜನರಲ್ಲಿ ಮತ್ತು ಉಳಿದವರಲ್ಲಿದ್ದ ಭೇದ ಭಾವನೆಗಳನ್ನು ಅಳಿಸಬೇಕಾಗಿದ್ದರೆ ಹರಿಜನರು ಸಾಮಾನ್ಯವಾಗಿ ಮಾಡುವ ಕೆಲಸಗಳಿಗಾಗಿದ್ದ ಅಸ್ಪೃಶ್ಯ ಭಾವನೆಯೂ ಅಳಿಯಲಿಕ್ಕೆ ಬೇಕು. ಈ ತತ್ವವನ್ನು ಪ್ರತಿಪಾದಿಸುವದಕ್ಕಾಗಿಯೆ ಮೇಲಿನ ನಿಯಮವನ್ನು ಸೂಚಿಸಲಾಗಿದೆ. ಪ್ರತಿಯೊಬ್ಬ ಮಾನವ ಹೇಸಿಗೆ ಮಾಡುವದುಂಟು. ಪ್ರತಿಯೊಬ್ಬ ಅದನ್ನು ಸ್ವಚ್ಛ ಮಾಡುವಲ್ಲಿ ಸಹಾಯಕನಾಗಲಿಕ್ಕೆ ಬೇಕು. ಉಚ್ಚವರ್ಗದವರೆಂದು ಹೇಳಿಕೊಳ್ಳುವವರು ಈ ಬಗೆಯ ಕೆಲಸದಲ್ಲಿ ಒಳ್ಳೆ ಆತುರತೆಯಿಂದ ಮತ್ತು ಉತ್ಸಾಹದಿಂದ ಭಾಗವಹಿಸಿದ್ದಾದರೆ ಅತ್ಯಂತ ಮಹತ್ವದ ಮತ್ತು ಅವಶ್ಯಕ ಸಾಮಾಜಿಕ ಕ್ರಾಂತಿಯನ್ನು ನಾವು ಮಾಡಿದಂತಾಗುವದು!

೬) ಮೂಲ ಶಿಕ್ಷಣವು ಶಿಕ್ಷಣದ ಅತ್ಯುತ್ತಮ ಪದ್ಧತಿಯೆಂದು ಅನಿಸಿದ್ದಾದರೆ ಕೇವಲ ಎರಡನೆಯವರ ಮಕ್ಕಳಿಗೇ ಅದನ್ನು ಕೊಟ್ಟು ತಮ್ಮ ಮಕ್ಕಳಿಗೆ ಅದರ ಲಾಭ ದೊರೆಯದಂತೆ ಮಾಡುವದು ಹಾಸ್ಯಾಸ್ಪದವೆ. ಆದುದರಿಂದ ಈ ನಿಯಮವನ್ನು ಹಾಕುವದು ನಿಜವಾಗಿ ಅನವಶ್ಯಕವಾಗಿತ್ತು. ಆದರೆ ಹಲವು ಸಲ ಸ್ಪಷ್ಟವಾಗಿದ್ದುದನ್ನೆ ನಾವು ಮರೆಯುವ ಸಂಭವವುಂಟು. ಆದುದರಿಂದ ಈ ನಿಯಮವನ್ನು ಸ್ಪಷ್ಟವಾಗಿ ಉಲ್ಲೇಖಿಸುವದು ಅವಶ್ಯವೆನಿಸಿತು.

೭) ದೇವನಾಗರಿ ಮತ್ತು ಉರ್ದು ಲಿಪಿಗಳ ಜೊತೆಯಲ್ಲಿ ದ್ರಾವಿಡ ಲಿಪಿಯೊಂದನ್ನೂ ಕಲಿಯಬೇಕೆಂಬ ಸೂಚನೆಗೆ ನಾನು ಹೊಣೆಗಾರನು; ಈ ಪ್ರಯತ್ನ ಮಾಡದೆ ಅಖಿಲ ಹಿಂದುಸ್ತಾನದ ಒಕ್ಕಟ್ಟು ಸಾಧಿಸುವಲ್ಲಿ ನಾವು ಯಶಸ್ವಿಯಾಗಲಾರೆವೆಂದು ನನಗೆನಿಸುತ್ತದೆ. ಲಿಪಿ ಜ್ಞಾನ ಮಾಡಿಕೊಳ್ಳಬೇಕೆಂದರೆ ಭಾಷೆಯನ್ನೂ ಕಲಿಯುವದು ಅವಶ್ಯವೆಂದು ಬೇರೆ ಹೇಳಬೇಕಿಲ್ಲ. ದಕ್ಷಿಣ ಹಿಂದುಸ್ತಾನದ ನಾಲ್ಕು ಭಾಷೆಗಳಿದ್ದು ಮೂರು ಲಿಪಿಗಳಿವೆ. ಈ ಸೂಚನೆಯಲ್ಲಡಗಿರುವ ತತ್ವವನ್ನರಿತುಕೊಳ್ಳಲು ಈ ಭಾಷೆಗಳಲ್ಲಿ ಯಾವದೊಂದನ್ನು ಕಲಿತರೆ ಸಾಕು. ತತ್ವ ಮತ್ತು ಅದರ ಮಹತ್ವವನ್ನು ಅರಿತುಕೊಂಡದ್ದಾದರೆ ಕಾರ್ಯವು ಅಷ್ಟೊಂದು ಕಠಿಣವಾಗದು. ಉತ್ತರ ಹಿಂದುಸ್ತಾನದ ಭಾಷೆಗಳಲ್ಲಿಯ ಲಿಂಗಗಳ ಗೊಂದಲದಿಂದ ದಕ್ಷಿಣ ಹಿಂದುಸ್ತಾನದ ಜನರಿಗೆ ಅವನ್ನು ಕಲಿಯಲು ಬಹಳ ಕಠಿನ ಹೋಗುವದುಂಟು. ಆದರೆ ಉತ್ತರ ಹಿಂದುಸ್ತಾನದ ಜನರಿಗೆ ದಕ್ಷಿಣ ಹಿಂದುಸ್ತಾನದ ಭಾಷೆ ಕಲಿಯುವದು ಬಹಳ ಸುಲಭವೆಂದು ಸ್ವಾನುಭವದಿಂದ ಹೇಳಬಲ್ಲೆ. ಕಠಿನ ಸುಲಭದ ಪ್ರಶ್ನೆಯನ್ನು ಬಿಟ್ಟುಕೊಟ್ಟರೂ ಐಕ್ಯದ ದೃಷ್ಟಿಯಿಂದ ದಕ್ಷಿಣ ಹಿಂದುಸ್ತಾನದ ಜನರಿಗೆ ಹಿಂದಿಯನ್ನು ಕಲಿಯಬೇಕೆಂದು ಬೋಧಿಸಿ ಅದರ ಸಾಧನೆಗಾಗಿ ನಾವು ಸ್ವತಃ ಪ್ರಯತ್ನ ಮಾಡದಿರುವುದು ನ್ಯಾಯ್ಯವಲ್ಲ. ಅದು ಕಾರ್ಯಕಾರಿಯೂ ಆಗಲಾರದು. ಮೊದಲು ಮೂಲಾಕ್ಷರಗಳನ್ನು ಕಲಿತು ಆ ಲಿಪಿಯಲ್ಲಿ ಬರೆದ ಭಗವದ್ಗೀತೆಯಂಥ ಪರಿಚಿತ ಪುಸ್ತಕವನ್ನು ಓದಲು ಪ್ರಾರಂಭಿಸುವದು ಲಿಪಿ ಕಲಿಯುವದಕ್ಕೆ ಅತ್ಯಂತ ಸುಲಭವಾದ ಉಪಾಯವು. ಪ್ರತ್ಯೇಕ ಜೋಡಕ್ಷರ ರೂಪಗಳನ್ನು ಬಿಟ್ಟು ತಮಿಳಿನ ಅಥವಾ ಲೋಕನಾಗರಿ ಲಿಪಿಯ ನಿಯಮದಂತೆ ಅರ್ಧಾಕ್ಷರಗಳನ್ನು ಕೂಡಿಸಲು ಒಂದು ಸಾಮಾನ್ಯ ಸಂಕೇತವನ್ನು ಗೊತ್ತುಪಡಿಸಿದ್ದಾದರೆ ಲಿಪಿಗಳ ಅಭ್ಯಾಸ ಶೀಘ್ರವಾಗಿ ಬಹಳ ಸುಲಭವಾಗುವದು. ಆದರೆ ವಿವಿಧ ಲಿಪಿಗಳ ಬರಹಗಾರರಲ್ಲಿ ವಿವೇಕೋದಯವಾದಾಗಲೆ ಇದು ಶಕ್ಯವಾಗುವದು.

ಈ ಮೇಲಿನ ಕಾರ್ಯಕ್ರಮವು ಅತ್ಯುನ್ನತಿಯ ಶಿಸ್ತಿನ ಕಾರ್ಯಕ್ರಮ. ವಿವಿಧ ಸಂಘಗಳ ಕಾರ್ಯಕರ್ತರು ಅವಶ್ಯವಾಗಿ ಆಚರಿಸತಕ್ಕ ನಿಯಮಗಳಿವು. ನಮ್ಮಲ್ಲಿ ಪ್ರತಿಯೊಬ್ಬ ಆಚರಿಸತಕ್ಕ ನಿಯಮಗಳು. ಸರ್ವೋದಯ ಸಮಾಜದ ಸೇವಕರು ಆಚರಣೆಯ ಈ ನಿಯಮಗಳನ್ನು ಪಾಲಿಸಿದ್ದಾದರೆ ಸಮಾಜವು ಸೂರ್ಯಪ್ರಕಾಶದಂತೆ ದಿಕ್ಕು ದಿಕ್ಕುಗಳಲ್ಲಿ ಪಸರಿಸಬಲ್ಲುದು. ಈ ನಿಯಮಗಳನ್ನು ಕೇವಲ ಉದಾಹರಣೆಗಾಗಿಯೆಂದು ದಿಗ್ದರ್ಶಿಸಲಾಗಿದೆ. ವಿಚಾರಶೀಲ ಸೇವಕರು ತಮ್ಮ ನೈತಿಕೋನ್ನತಿಯ ದೃಷ್ಟಿಯಿಂದ ಈ ನಿಯಮಗಳನ್ನು ಹೆಚ್ಚಿಸಿಕೊಳ್ಳಬೇಕು. ನಿಯಮಗಳನ್ನು ಹೆಚ್ಚಿಸಿಕೊಳ್ಳುವಾಗ ಅವರು ಎರಡು ಕರಾರುಗಳನ್ನು ಮಾತ್ರ ಪಾಲಿಸಲಿಕ್ಕೆ ಬೇಕು. ಮೊದಲನೆಯದಾಗಿ ಈ ವ್ರತಾಚರಣೆಯು ಒಂದು ಬಗೆಯ ಭಾರವೆಂದು ಭಾವಿಸತಕ್ಕದ್ದಲ್ಲ. ದಿಕ್ಸೂಚಿಯಂತೆ ಅದು ಜೀವನದ ಮಾರ್ಗದರ್ಶನ ಮಾಡತಕ್ಕದ್ದು ಮತ್ತು ಅದನ್ನು ಮೊದಲಿಗಿಂತ ಸುಲಭಗೊಳಿಸತಕ್ಕದ್ದು. ಎರಡನೆಯದಾಗಿ ವ್ಯಕ್ತಿ ವ್ಯಕ್ತಿಗಳಲ್ಲಿಯ ಅಸೂಯೆ ಹೆಚ್ಚುವಂತೆ ತುಲನೆ ಮಾಡುವದಕ್ಕಾಗಿ ಈ ವ್ರತಾಚರಣೆಯು ಉಪಯೋಗ ಮಾಡಿಕೊಳ್ಳತಕ್ಕದ್ದಲ್ಲ. ಈ ಕರಾರುಗಳನ್ನು ಪಾಲಿಸದಿದ್ದರೆ ಅವರು ಸಂಕುಚಿತ ಮತ್ತು ದೋಷೈಕದೃಷ್ಟಿಯವರಾಗುವರು. ಇದರಿಂದ ನಿಯಮಗಳ ಉದ್ದೇಶವೆ ಹಾಳಾಗಿಹೋಗುವದು. ಇದನ್ನು ಲಕ್ಷಿಸಿ ಸೇವಕರಾಗಬಯಸುವ ಪ್ರತಿಯೊಬ್ಬ ಯೋಗ್ಯ ರೀತಿಯಿಂದ ವ್ರತಗಳನ್ನಾಚರಿಸಿ ತರಬೇತು ಹೊಂದಬೇಕೆಂದು ನಾನು ಹೇಳಬಯಸುತ್ತೇನೆ.

(ಮೂಲ ಹಿಂದಿಯಿಂದ ಅನುವಾದಿತ)

—ವಿನೋಬಾ ಭಾವೆ

ನಿಜಾಮ ಸಂಸ್ಥಾನ

ನಿಜಾಮರ ಸಂಸ್ಥಾನದಿಂದ ನಿತ್ಯವೂ ಹೃದಯವಿದ್ರಾವಕ ಸುದ್ದಿಗಳು ಬರುತ್ತಿವೆ. ಕಳೆದ ಕೆಲವು ತಿಂಗಳಿಂದ ಚಿಕ್ಕದಾದರೂ ಪ್ರಬಲವಾದ ಗುಂಪೊಂದು ಸಂಸ್ಥಾನದ ಬೇರೆ ಬೇರೆ ಭಾಗಗಳಲ್ಲಿಯೂ ನೆರೆ ಹೊರೆಯ ಪ್ರದೇಶಗಳಲ್ಲಿಯೂ ಶುದ್ಧ ಅಮಾನುಷ ವ್ಯಾಪಾರಗಳನ್ನು ನಡೆಸುತ್ತಿದೆ. ಆಳುವವರಿಗೆ ಅದನ್ನು ತಡೆಯುವ ಮನಸ್ಸಿಲ್ಲವೊ ಶಕ್ತಿಯಿಲ್ಲವೊ ತಿಳಿಯದು. ದುರ್ದೈವದಿಂದ ಅರಸನೂ ಆಳುವ ಅಧಿಕಾರಿಗಳೂ ಈ ಪ್ರಬಲ ಗುಂಪೂ ಎಲ್ಲರೂ ಮುಸ್ಲಿಮರಾಗಿದ್ದು ದಬ್ಬಾಳಿಕೆಗೊಳಗಾದವರು ಹಿಂದುಗಳಾಗಿದ್ದಾರೆ. ಪೀಡಕ ಪೀಡಿತರಲ್ಲಿರುವ ಧರ್ಮಭೇದವೇ ಈ ಭೇದದ ಮೂಲವೆಂದು ತೋರುತ್ತದೆ.

ಈಚೆಗೆ ಕೆಲ ವರ್ಷಗಳಿಂದ ಸೈತಾನನು ಧರ್ಮರೂಪವನ್ನು ಧರಿಸಿ ನಮ್ಮ ನಾಡನ್ನು ಹೊಕ್ಕಿದ್ದಾನೆ. ೧೯೪೬ ಅಗಸ್ಟಿನಿಂದಲೂ ಅತ್ಯಂತ ಅಕರಾಳ ವಿಕರಾಳ ರೂಪದಲ್ಲಿ ಅವನು ತಾಂಡವವಾಡುತ್ತಿರುವದನ್ನು ನೋಡಿದ್ದೇವೆ. ಎರಡು ಕಠೋರತರ ಉಪವಾಸಗಳಿಂದ ಗಾಂಧೀಜಿ ದಿಲ್ಲಿಯಲ್ಲಿಯೂ ಕಲಕತ್ತೆಯಲ್ಲಿಯೂ ಅವನ ಆಟವನ್ನು ತಡೆಯಲು ಸಮರ್ಥರಾದರು. ಆತಂಕದಿಂದ ಉರಿದೆದ್ದ ಸೈತಾನನು ಗಾಂಧೀಜಿಯ ಪ್ರಾಣವನ್ನೇ ತೆಗೆದುಕೊಂಡು ಸೇಡು ತೀರಿಸಿದನು. ಹಿಂದುಸ್ತಾನ ಪಾಕಿಸ್ತಾನಗಳೆರಡರಲ್ಲಿರುವ ಮುಸ್ಲಿಮರೂ ಅವರ ಉಪಕಾರವನ್ನು ಕೃತಜ್ಞತೆಯಿಂದ ಒಪ್ಪಿಸಿಕೊಂಡಿದ್ದಾರೆ.

ಆದರೆ ಇದರಿಂದ ಭಾರತ ರಂಗದಲ್ಲಿ ಸೈತಾನ ಲೀಲೆ ಸಮಾಪ್ತವಾಗಿದೆಂದು ಭಾವಿಸಕೂಡದು. ಉತ್ತರದಲ್ಲಿ ತಡೆಯಲ್ಪಟ್ಟ ಅವನು ನಿಜಾಮರ ರಾಜ್ಯದಲ್ಲಿ ತಲೆಯೆತ್ತಿದ್ದಾನೆ. ಧೈರ್ಯದಿಂದ ಅವನನ್ನು ತಡೆಗಟ್ಟದಿದ್ದರೆ ಅವನು ಎಂಥೆಂಥ ಭಯಾನಕ ರೂಪಗಳನ್ನು ಧರಿಸುವನೋ ಹೇಳಲಾಗದು.

ಅಸತ್ಯವನ್ನು ವಿರೋಧಿಸುವಲ್ಲಿ ಸರಕಾರಿ ಮತ್ತು ರಾಜಕೀಯ ಉಪಾಯಗಳು ಸತ್ಯಾಗ್ರಹ ರೀತಿಯಿಂದ ಭಿನ್ನವಾಗಿವೆ. ಗಾಂಧೀಜಿ ಎರಡನೆ ದಾರಿಯನ್ನು ತೋರಿಸಿದ್ದಾರೆ. ಸತ್ಯಾಗ್ರಹಿಯಾದವನು ಅಲ್ಪಸಂಖ್ಯಾಕ ಬಹುಸಂಖ್ಯಾಕರೆಂಬ ಭೇದ ಭಾವನೆಯಿಂದ ವಿಚಾರ ಮಾಡುವದಿಲ್ಲ. ಮೊದಲು ದೊಡ್ಡ ತಪ್ಪು ಮಾಡಿದವನಾರು ಮತ್ತೆ ಚಿಲ್ಲರೆ ತಪ್ಪು ಮಾಡಿದವನಾರು ಎಂದು ತೂಗಿನೋಡುತ್ತ ಅವನು ಕಾಲಕಳೆಯುವದಿಲ್ಲ. ನಿಜವಾಗಿ ಗಂಡಾಂತರ ಯಾರಿಗೆ ಒದಗಿದೆ— ತತ್ಕಾಲದಲ್ಲಿ ಯಾರು ಪೀಡೆಗೊಳಗಾಗಿದ್ದಾರೆ— ಇದನ್ನೇ ಬಗೆದು ಅವರನ್ನು ಉಳಿಸಲು ಶಕ್ತಿಮೀರಿ ಹೆಣಗುತ್ತಾನೆ. ಹೀಗೆ ಮಾಡುವದು ಎಲ್ಲ ಸತ್ಯಾಗ್ರಹಿಗಳಿಗೆ- ಅದರಲ್ಲಿಯೂ ಸೇವಕರ ಸಮೂಹಕ್ಕೇ ಸೇರಿದ ಸತ್ಯಾಗ್ರಹಿಗೆ— ಧರ್ಮ. ಈ ಪ್ರಕಾರ ಗಾಂಧೀಜಿ ಸಿಖ—ಹಿಂದುಗಳ ಅನ್ಯಾಯಗಳನ್ನೆದುರಿಸಲು ಮುಸ್ಲಿಮರ ಪರವಾಗಿ ಸರ್ವ ಶಕ್ತಿಯನ್ನು ವಿನಿಯೋಗಿಸಿದರು. ಅಂತೆಯೇ ನ್ಯಾಯಬುದ್ಧಿಯ ಮುಸ್ಲಿಮರು ತಮ್ಮವರೇ ಅನ್ಯಾಯಗಾರರಾಗಿರುವಲ್ಲಿ ಹಿಂದೂ-ಸಿಖ ಮೊದಲಾದವರಿಗೋಸ್ಕರ ಹೆಣಗಬೇಕು. ಅಂಥ ಪ್ರಯತ್ನದಲ್ಲಿರುವ ಗಂಡಾಂತರವೇ ಅದನ್ನು ಸತ್ವಶಾಲಿಯಾಗಿಯೂ ಸತ್ಯಾಗ್ರಹ ಸ್ವರೂಪದ್ದಾಗಿಯೂ ಮಾಡುವದು.

ನನ್ನ ನಮ್ರ ಅಭಿಪ್ರಾಯವಿದು: ಹಿಂದುಸ್ತಾನ-ಪಾಕಿಸ್ತಾನಗಳಲ್ಲಿರುವ ಮತ್ತು ಸ್ವತಃ ನಿಜಾಮ ಸಂಸ್ಥಾನದ ವಿಚಾರಶೀಲ ಮತ್ತು ನ್ಯಾಯಶೀಲ ಮುಸ್ಲಿಮರು ವೈಯಕ್ತಿಕವಾಗಿಯೂ ಸಾಮೂಹಿಕವಾಗಿಯೂ ಈ ಮುಸ್ಲಿಮ ಗುಂಪಿನ ಜಾತಿಯ ಹೆಸರಲ್ಲಿ ನಡೆದ ಅತ್ಯಾಚಾರವನ್ನು ಖಂಡಿಸಿ ಅದರಿಂದ ಬರಬಹುದಾದ ಅಪಾಯಗಳನ್ನು ಸಹಿಸಲು ಸಿದ್ಧರಾಗಬೇಕು.

ಸೇ—೪—೪೮ — ಕಿಶೋರಲಾಲ ಮಶ್ರುವಾಲಾ

ಸರ್ವೋದಯ ಸಮಾಜ

ಸರ್ವೋದಯ ಸಮಾಜದ ನಿಯಮ ನಿರ್ಬಂಧಗಳ ಬಗ್ಗೆ ಬರೆಬರೆದು ಕೇಳಲಾಗುತ್ತಿದೆ. 'ಹರಿಜನ'ದ ಎಪ್ರಿಲ್ ೪ ನೇ ತಾ.ನ ಸಂಚಿಕೆಯಲ್ಲಿ ಈ ವಿಷಯದ ಮುಖ್ಯ ಗೊತ್ತುವಳಿಯನ್ನು ಓದುಗರು ನೋಡಬಹುದು. ಈ ಗೊತ್ತುವಳಿಯು ಸೇವಾಗ್ರಾಮದ ಸಮ್ಮೇಲನದಲ್ಲಿ ಅಂಗೀಕೃತವಾಯಿತು. ಅದೇ ಸಂಚಿಕೆಯಲ್ಲಿ ಡಾ. ರಾಜೇಂದ್ರ ಪ್ರಸಾದರ ಲೇಖನವೂ ಉಂಟು. ಅದು ಈ ಸಮಾಜದ ಹಿನ್ನೆಲೆಯನ್ನು ವಿಶದೀಕರಿಸುವದು. ಆ ಗೊತ್ತುವಳಿಯ ಕೊನೆಗೆ ಕಾರ್ಯಕಾರೀ ಸಮಿತಿಯ ನಾಮಾವಲಿಯನ್ನು ಕೊಡಲಾಗಿದೆ. ಈ ಸಮಿತಿಯು ಅವಶ್ಯ ಕಂಡರೆ ಅಧಿಕಾರೀ ವರ್ಗವನ್ನು ಆಯ್ದುಕೊಂಡು ತನ್ನ ಕೆಲಸಗಳನ್ನು ಪೂರೈಸಲು ತಕ್ಕ ಕ್ರಮ ಕೈಕೊಳ್ಳಬಲ್ಲದು. ಮೇಲ್ಕಾಣಿಸಿದ ಸಮಿತಿಗೆ ಸದಸ್ಯರನ್ನು ನಾಮಕರಣ ಮಾಡುವ ಅಧಿಕಾರ ಪಡೆದ ಡಾ. ರಾಜೇಂದ್ರ ಪ್ರಸಾದ ಮತ್ತು ಶ್ರೀ. ಕಿಶೋರಲಾಲ ಮಶ್ರುವಾಲಾ ಇವರುಗಳಿಗೇ ಆ ಸಮಿತಿಯಲ್ಲಿ ಸ್ಥಾನವಿಲ್ಲ ಎಂಬುದನ್ನು ಎಲ್ಲರೂ ಗಮನಿಸತಕ್ಕ ಮಾತಾಗಿದೆ. ಅವರು ಸಮಾಜದ ಸೇವಕರಾಗಿ ಮಾತ್ರ ಉಳಿಯುವರು ಹಾಗೂ ಈ ಮೂಲಕವೇ ತಮ್ಮ ಕೈಯಿಂದಾದ ಸೇವೆ ಸಲ್ಲಿಸುವರು. ಆದರೆ ಸಮಾಜದ ವಿಷಯಕ್ಕೆ ಹೆಚ್ಚಿನ ವಿವರ ಬೇಕೆನಿಸಿದವರು, ಸರ್ವೋದಯ ಸಮಾಜದ ಆಮಂತ್ರಕರಾದ ಶ್ರೀ. ಆರ್. ಎಸ್. ಧೋತ್ರೆ, ಆಮಂತ್ರಕ, ಸರ್ವೋದಯ ಸಮಾಜ, ಬಜಾಜವಾಡಿ, ವರ್ಧಾ ಈ ವಿಳಾಸಕ್ಕೆ ಬರೆದುಕೊಳ್ಳಬೇಕು. ಈ ಬಗ್ಗೆ ಬರೆವ ಪ್ರತಿ ಪತ್ರಕ್ಕೂ 'ಸರ್ವೋದಯ ಸಮಾಜ' ಎಂದು ಪ್ರತ್ಯೇಕವಾಗಿ ಉಲ್ಲೇಖಿಸಿದರೆ ಅನುಕೂಲವಾಗಿರುವದು.

ಹರಿಜನದಲ್ಲಿ ಪ್ರಕಟವಾದುದಕ್ಕಿಂತ ಹೆಚ್ಚಿಗೆ ನಿಜವಾಗಿ ನೋಡಿದರೆ, ಈ ಬಗ್ಗೆ ಈಗಲೇ ಅರಿಯಬೇಕಾದುದೇನೂ ಇಲ್ಲ. ಸರ್ವೋದಯ ಸಮಾಜವೆಂಬ ಹೆಸರು ಕೆಲವರಿಗೆ ಹೊಸದಾಗಿ ತೋರಬಹುದು. ಗಾಂಧೀಜಿಯವರ ರಚನಾತ್ಮಕ ಸಂಘಟನೆಗಳ ಬಗ್ಗೆ ಅವರೇ ಬರೆದ ವಿಚಾರಗಳೂ ಸಾಹಿತ್ಯವೂ ಸಾರ್ವಜನಿಕರ ಎದುರಿಗೆ ಈಗಾಗಲೇ ಇದ್ದೇ ಇದೆ. ಮೊದಲಿನಂತೆ ಅವನ್ನೇ ಮುಂದೆ ಸಾಗಿಸಿಕೊಂಡು ಹೋಗಬೇಕಾಗಿದೆ ಅಷ್ಟೇ. ಗಾಂಧೀಜಿಯ ಆ ವಿಚಾರಗಳೇ ಆ ಸಾಹಿತ್ಯವೇ ಸರ್ವೋದಯದ ಆಧಾರ ಸಾಹಿತ್ಯವೆಂದು ಹೇಳಲು ಅಡ್ಡಿಯಿಲ್ಲ. ಯಾವ ಸಾಹಿತ್ಯವೂ ಅಸ್ತಿತ್ವದಲ್ಲಿ ಇಲ್ಲವೆಂದಿಟ್ಟುಕೊಂಡರೂ ಸೇವಕನಾದವನು ಪಾಲಿಸಬೇಕಾದ ನಿಯಮವೆಂದರೆ ಸತ್ಯ ಅಹಿಂಸೆಯ ಮೂಲ ತತ್ವಗಳನ್ನು ಅನುಸರಿಸುವದು. ಇವುಗಳಿಗೆ ಸಮ್ಮತವಾದ ರೀತಿಯಲ್ಲಿಯೇ ವೈಯಕ್ತಿಕ ಜೀವನವನ್ನು ರೂಪಿಸುತ್ತ, ಉಪಯುಕ್ತ ಸೇವಾಕಾರ್ಯಗಳನ್ನು ನೆರವೇರಿಸುತ್ತ, ಸರ್ವರ ದೈಹಿಕ, ಬೌದ್ಧಿಕ, ಮಾನಸಿಕ, ನೈತಿಕ ಮತ್ತು ಆರ್ಥಿಕ ಉನ್ನತಿಗೆ ಲೋಕಕಲ್ಯಾಣಕ್ಕೆ ಅವನು ಕಾರಣನಾಗಬೇಕು. ಆ ಗೊತ್ತುವಳಿಯಲ್ಲಿ ಕಾಣಿಸಲಾದ ವಿವಿಧ ರಚನಾತ್ಮಕ ಕಾರ್ಯಗಳು ಸ್ವಯಂ ಸ್ಪಷ್ಟವಾಗಿವೆಯಲ್ಲದೆ ಕಾರ್ಯ ಯಾವ ದಾರಿಯಲ್ಲಿ ಸಾಗತಕ್ಕದ್ದೆಂಬುದರ ಬಗ್ಗೆ ಮಾರ್ಗದರ್ಶನವೂ ಇದೆ. ಅವಶ್ಯವೆನಿಸಿದಾಗ ಹೆಚ್ಚಿನ ಕಾರ್ಯಕ್ರಮಗಳನ್ನೂ ಸೇರಿಸಿಕೊಳ್ಳಬಹುದು. ಸೇವಕನಾದವನು ಈ ಸಮಿತಿಯ ಆದೇಶ ನಿರ್ದೇಶಗಳಿಗಾಗಿ ಕಾಯ್ದು ಸೇವಾ ಕಾರ್ಯಗಳನ್ನು ತಡೆದಿರುವ ಅಗತ್ಯವೇನೂ ಇಲ್ಲ. ಅಗತ್ಯ ತೋರಿದರೆ ಮಾತ್ರ ಸಮಿತಿಯು ಮಾರ್ಗದರ್ಶನ ಮಾಡಬಹುದು. ಸೇವಕನು ಸ್ವಯಂ ಪ್ರೇರಕ.

—ಕೊನೆಯ ಪುಟಕ್ಕೆ

ನನಗೆ ಗಾಂಧೀಜಿಯಿಂದ ದೊರೆತುದೇನು

ಗಾಂಧೀಜಿಯನ್ನು ಕುರಿತು ಪರಿಜ್ಞಾನವನ್ನು ಹೊರತೆಗೆದುಕೊಳ್ಳಲು ಹಿಂದುಸ್ತಾನದಲ್ಲಿ ಸಂಚರಿಸುತ್ತಿರುವ ಅಮೇರಿಕನ್ ಯುವಕನೊಬ್ಬನು ನನಗೆ ಈ ಪ್ರಶ್ನೆಯನ್ನು ಹಾಕಿದನು:

“ ಗಾಂಧೀಜಿಯೊಡನೆ ನೀವು ಇಷ್ಟು ಕಾಲ ಸಂಬಂಧ ಇಟ್ಟುಕೊಂಡಿದ್ದಿರಲ್ಲ, ಅವರಿಂದ ನಿಮಗೆ ವಿಶೇಷವಾಗಿ ದೊರೆತದ್ದು ಯಾವುದು? ”

ಪ್ರಶ್ನೆಯೇನೋ ನೇರವಾಗಿ ಸರಳವಾಗಿತ್ತು. ಆದರೆ ಅದು ನನ್ನನ್ನು ಪೇಚಿನಲ್ಲಿ ಕೆಡಹಿತು. ಅದಕ್ಕೆ ಏನು ಉತ್ತರ ಕೊಡಬೇಕೋ ನನಗೆ ಕಾಣಲಿಲ್ಲ. ಅವರೊಡನೆ ನಾನು ಮುವ್ವತ್ತು ವರ್ಷ ಕಾಲ ನಿಕಟ ಸಂಬಂಧವನ್ನು ಇಟ್ಟುಕೊಂಡಿದ್ದೆನು ಮತ್ತು ಅವರಿಂದ ಅಸಂಖ್ಯ ವಿಷಯಗಳನ್ನು ಕಲಿತುಕೊಂಡಿದ್ದೆನೆಂಬುದೂ ನಿಸ್ಸಂಶಯ. ಆದರೂ ಅವುಗಳಲ್ಲಿ ಮುಖ್ಯವಾದ ಕೆಲವಂಶಗಳನ್ನು ಕೂಡ ಯಾದಿ ಮಾಡಿ ಹೇಗೆ ತೋರಿಸಬೇಕೆಂದು ನನಗೆ ತಿಳಿಯಲಿಲ್ಲ. ಕೆಲ ನಿಮಿಷ ಚಿಂತಿಸಿ ಕಡೆಗೆ ಹೇಳಿದೆ:

“ ನನಗೆ ಅವರ ಅಂತಃಕರಣ ದೊರೆತಿತ್ತು. ಒಂದೇ ಮಾತಿನಲ್ಲಿ ಇದಕ್ಕಿಂತ ಹೆಚ್ಚೇನೂ ಹೇಳಲಾರೆ. ಅವರು ನನ್ನಲ್ಲಿ ಪ್ರೀತಿಯಿಟ್ಟಿದ್ದರು ನನ್ನನ್ನು ತಮ್ಮ ವಿಶ್ವಾಸ ಪಾತ್ರನಾಗಿ ಮಾಡಿಕೊಂಡಿದ್ದರು. ಏನೇ ಒದಗಿದರೂ ಅವರು ಆ ಪ್ರೀತಿವಿಶ್ವಾಸಗಳಲ್ಲಿ ಅವಲೇಶವನ್ನಾದರೂ ಹಿಂದೆ ತೆಗೆದುಕೊಳ್ಳಲಿಲ್ಲ. ನಾನು ಇನ್ನು ಏನೇನೇ ಹೇಳಿದರೂ ಅದೆಲ್ಲವೂ ಈ ಮಾತಿನ ಉಪಾಂಗವಾಗಿಯೇ ಉಳಿದೀತು. ”

ನನ್ನ ಉತ್ತರದಿಂದ ಆ ತರುಣನಿಗೆ ಅಷ್ಟು ಸಮಾಧಾನವಾದಂತೆ ಕಾಣಿಸಲಿಲ್ಲ. ಕಥೆ ಉಪಕಥೆಗಳಿಂದೊಡಗೂಡಿದ ವಿವರವಾದ ಯಾದಿಯನ್ನು ಅತ ಅಪೇಕ್ಷಿಸಿದ್ದನೊ ಏನೊ. ಆದರೆ ನನ್ನ ನೆನಪು ಅದಕ್ಕೆ ಸಹಾಯ ಮಾಡದೆ ಹೋಯಿತು. ಅಂತೂ ಆ ರಾತ್ರಿ ಹಾಗೆಯೇ ನಾವು ಅಗಲಿದೆವು.

ಮರುದಿನ ಮುಂಜಾನೆ ನಿಷ್ಕರ್ಷೆಯಾಗಿ ಉಲ್ಲೇಖಿಸಬಹುದಾದ ಒಂದು ಮಾತನ್ನು ಅವನಿಗೆ ಹೇಳಿದೆ. ಅದೆಂದರೆ, ನಮ್ಮ ಮನಸ್ಸಿನಲ್ಲಿ ಯಾರ ಮೇಲೆ ಏನಾದರೂ ಅಪ್ರಿಯ ಭಾವನೆಗಳಿದ್ದಲ್ಲಿ ಅಂಥವನೊಡನೆ ನೇರವಾಗಿ ಮಾತಾಡುವುದೊಳ್ಳಿತೆಂದು ಗಾಂಧೀಜಿ ನನಗೆ ಉಪದೇಶಿಸಿದ್ದರು. ಇಂಥ ಧೈರ್ಯ ನಮ್ಮ ಜನರಿಗಿಲ್ಲದ್ದು ದುಃಖದ ಸಂಗತಿಯೆಂದು ಅವರು ಅನ್ನುತಿದ್ದರು. ಅಮುಕ ಮನುಷ್ಯನ ಮೇಲೆ ಏನಾದರೂ ಸಂಶಯ ಇಲ್ಲವೆ ಅಸಂತುಷ್ಟಿಗೆ ಕಾರಣವಿದ್ದರೆ ನಾವು ಬೇರೆ ಎಲ್ಲರೊಡನೆ ಆ ವಿಷಯವನ್ನು ಚರ್ಚಿಸುತ್ತೇವೆಯೇ ಹೊರತು ಆ ಮನುಷನ ಮುಂದೆ ತುಟಿ ಎರಡು ಮಾಡುವುದಿಲ್ಲ. ತದ್ವಿರುದ್ಧವಾಗಿ ಆ ಮನುಷನ ಮೇಲೆ ನಮಗಾವ ಕಲುಷವೂ ಇಲ್ಲವೋ ಎಂಬಂತೆ ಅವನ ಮುಂದೆ ಮಾತಾಡುತ್ತೇವೆ. ಸರಿಯಾದ ಮನುಷ್ಯನ ಮುಂದೆ ನಮ್ಮ ನಿಜವಾದ ಅಂತರಂಗವನ್ನು ಬಿಚ್ಚದೆ ಇರುವ ದುರಭ್ಯಾಸವನ್ನು ನಾವು ಕಲಿತಿದ್ದೇವೆ. ಇದೇ ಒಳ್ಳೆಯ ನಡೆತೆಯ ಲಕ್ಷಣವೆಂದು ಕೂಡ ನಾವು ಬಗೆಯುತ್ತೇವೆ ನಿಜವಾಗಿ ನೋಡಿದರೆ ಅದು ಒಂದು ದೌರ್ಬಲ್ಯವೆ ಸರಿ. ಈ ಅಳುಬುರುಕತನವನ್ನು ಕಳೆಯಲು ನಾವು ಅಸ್ಥೆಯಿಂದ ಪ್ರಯತ್ನಿಸಬೇಕೆಂದು ಅವರು ಹೇಳುತಿದ್ದರು. ಈ ಮಾತಿನಲ್ಲಿ ಗಾಂಧೀಜಿಯು ನುಡಿ ಯೇಸು ಕ್ರಿಸ್ತನನ್ನು ನೆನಪಿಗೆ ತರುತ್ತದೆ. ಹೇಳಿದ್ದ ಯೇಸುಃ “ ದೇವರಿಗೆ ನಡೆದುಕೊಳ್ಳಲು ಗುಡಿಗೆ ಹೋದಾಗ ನಿನಗೆ ನಿನ್ನ ತಮ್ಮನ ಮೇಲೆ ಏನಾದರೂ ಮನಃಕಲುಷವಿರುವದು ನೆನಪಾದರೆ ಹಾಗೆಯೇ ಹಿಂದೆ ಆ ಮಾತನ್ನು ತಮ್ಮನೊಡನೆ ಮೊದಲು ಬಗೆಹರಿಸಿಕೊಂಡು ಆ ಮೇಲೆಯೇ ದೇವರಿಗೆ ಹರಕೆ ಒಪ್ಪಿಸು” ಹೀಗೆಂದು ನಾನು ಆ ಯುವಕನಿಗೆ ಹೇಳಿದೆ.

ಈ ಉಪದೇಶವನ್ನು ಆಚರಣೆಗಿಳಿಸಲು ನಾನು ಪ್ರಯತ್ನಿಸುತ್ತ ಬಂದಿದ್ದೇನೆ ಒಟ್ಟಿನ ಅದರ ಪರಿಣಾಮ ಮೇಲೆ ಒಳಿತೆ ಆಗಿದೆ ನನ್ನ ಮನಸನ್ನು ಬಿಚ್ಚುವ ಅವಸರದಲ್ಲಿ ಉದ್ರೇಕಗೊಳ್ಳುವ ದುರ್ಗುಣ ನನ್ನಲ್ಲಿರದಿರುತ್ತಿದ್ದರೆ ಇನ್ನೂ ಒಳಿತಾಗುತಿತ್ತು- ಭಾವನೆಗಳ ಮೇಲೆ ಹಿಡಿತವಿಲ್ಲದ್ದು ನನಗೆ ದೊಡ್ಡ ತೊಡಕಾಗಿದೆ ಆದರೆ ನೇರವಾಗಿ ನಿರ್ದಾಕ್ಷಿಣ್ಯವಾಗಿ ಮಾತಾಡುವದು ತಪ್ಪು ಎಂದು ಅನ್ನಿಸಿಕೊಂಡ ಮನುಷನನ್ನು ನೋಯಿಸಿದರೂ ತಪ್ಪು ತಿಳಿವಳಿಕೆ, ಕಪಟ,ನಿಂದೆ ಅವುಗಳನ್ನು ಪರಿಹರಿಸುವದೆಂಬುದು ನನ್ನ ಅನುಭವ. ಅಮುಕ ಮನುಷ್ಯನ ಮೇಲೆ ಮನಸಿನಲ್ಲಿರುವ ಹಗ್ಗ ಅವನೆದುರೇ ಅದಿ ಬಿಟ್ಟರೆ ಮುಂದೆ ಅದನ್ನು ಸಿಕ್ಕ ಸಿಕ್ಕವರೊಡನೆ ಚರ್ಚಿಸುವ ಆತುರವೇ ಅಳಿದುಹೋಗುವದು.

ವರ್ಧಾ — ಕಿ. ಘ. ಮಶ್ರುವಾಲಾ
೨೯—೩—೪೮

ದೇವರೇನು ಮಾಡಬಹುದಿತ್ತೊ?

ಒಬ್ಬ ತರುಣ ಗ್ರಾಮಸೇವಕನು ಬರೆಯುತ್ತಾನೆ—

“ ಬಾಪು ಅವರ ಕೊಲೆಯ ಮೂಲಕ ನನಗೆ ದೇವರಿದ್ದಾನೆಂಬ ಬಗ್ಗೆ ಸಂದೇಹವಾಗುತ್ತಿದೆ. ಬಾಪು ತಮ್ಮನ್ನು ದೇವರಿಗೆ ಒಪ್ಪಿಸಿಕೊಂಡು ಬಿಟ್ಟಿದ್ದರು ಅವನ್ನು ಅಂಥ ಹಿಂಸೆಯಿಂದ ದೇವರು ರಕ್ಷಿಸಲಿಲ್ಲ, ನಿಸರ್ಗವೂ ರಕ್ಷಿಸಲಿಲ್ಲ. ಅಹಿಂಸೆಯ ಅಜೇಯ ಮೂರ್ತಿ ಹಿಂಸೆಗೆ ಬಲಿಯಾಗಿ ಹೋಯ್ತು. ಈ ವಿಚಾರವು ನನ್ನನ್ನು ಗೊಂದಲದಲ್ಲಿ ನೂಕಿದೆ, ಹಾಗೂ ನನ್ನ ವಿಚಾರವು ದೇವರ ವಿಷಯಕ ನನ್ನ ನಂಬಿಗೆಯನ್ನು ದೃಢಪಡಿಸುತ್ತಿಲ್ಲ. ಬಾಪು ಈ ಅಂಥ ಬಲಾತ್ಕಾರಕ್ಕೇಕೆ ಬಲಿಯಾದರು? ”

ಇದೇ ಬಗೆಯ ಸಂದೇಹಗಳನ್ನು ವ್ಯಕ್ತಗೊಳಿಸುವ ಅನ್ನು ಬೇರೆಯವರ ಪತ್ರಗಳೂ ಉಂಟು ದೇವರ ಸ್ವಭಾವ ವಿಷಯಕ ಪ್ರಶ್ನೆಗಳು ಇದಕ್ಕೂ ಸುಲಭವಾಗಿದ್ದರೂ ಅವನ್ನು ಅರಿತುಕೊಳ್ಳುವದು ಅಷ್ಟು ಸುಲಭವಲ್ಲ. ಬೌದ್ಧಿಕ ವಿಚಾರದಿಂದಲೇ ಎಲ್ಲ ಸಂದೇಹಗಳ ನಿವಾರಣೆಯಾಗಲಾರವು. ಬೌದ್ಧಿಕ ವಿಚಾರಕ್ಕೆ ಸೂಕ್ಷ್ಮ ನಿರೀಕ್ಷಣೆಯು, ಪ್ರತ್ಯಕ್ಷ ಪ್ರಯೋಗದ ಮತ್ತು ಸ್ವಾನುಭವದ ಬಲಬೇಕು. ಸ್ವಾನುಭವದ, ವಿಷಯದಲ್ಲಿ ವಯೋಮಾನವೂ ಒಂದು ಮಹತ್ವದ ಅಂಶವೇ, ಉದಾಹರಣೆಗಾಗಿ, ೮ ವರ್ಷದ ಒಬ್ಬ ಹುಡುಗನು ಅದೆಂತಹ ವಿಷಯ ಲಂಪಟವಾತಾವರಣದಲ್ಲಿಯೇ ಬೆಳೆದಿದ್ದರೂ ಅವನಿಗೆ ಲೈಂಗಿಕ ವಿಷಯಗಳನ್ನು ಸರಿಯಾಗಿ ಅರಿಯುವದಾಗಲೀ ತಿಳಿಸುವದಾಗಲೀ ಸಾಧ್ಯವಿಲ್ಲ. ಅವನು ತನ್ನ ವಯಸ್ಸಿನ ಹುಡುಗರಿಗಿಂತ ಬೇಗ ಮತ್ತು ಹೆಚ್ಚು ಗ್ರಹಿಸಬಹುದಾದರೂ ಕನಿಷ್ಠ ೧೨-೧೪ ವರ್ಷದ ಹುಡುಗನಷ್ಟು ಸಮರ್ಪಕವಾಗಿ ಗ್ರಹಿಸಲಾರ. ಅತ್ಮ ತತ್ವಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಇದಕ್ಕೂ ಹೆಚ್ಚಿನ ಪರಿಪಕ್ವ ವಯ ಬೇಡವೆ? ಸಾಧನೆಗೆ ಅತ್ಮ ಸಂಯಮವೂ ವಯಸ್ಸೂ ಇನ್ನು ಇದ ಗುಣಗಳೊಡನೆ ಅದಕ್ಕೆಬೇಕೇಬೇಕು. ಈ ವಿಷಯದ ಬೆನ್ನು ಹತ್ತುವದಾಗಿಯೇ ಪ್ರಶ್ನೆ ಕೇಳಿದವರು ನಿರ್ಧರಿಸಿದ್ದರೆ ಈ ಮಾತುಗಳಿಗೆಲ್ಲ. ಇನ್ನೊಬ್ಬರು ಸಿದ್ಧಗೊಳಿಸಿಟ್ಟ ಉತ್ತರಗಳಿಗಾಗಿ ಹಂಬಲಿಸಕೂಡದು. ಅವರು ತಾವೇ ಇನ್ನೂ ಆಳವಾಗಿ ವಿಚಾರಿಸಬೇಕು. ಇನ್ನೂ ಸಂಯಮಿತ ಜೀವನದಿಂದ ಅಂತರ್ಬಾಹ್ಯ ಅನುಭವ ಪಡೆಯಬೇಕು. ಅಗ ಮಾತ್ರ ಅವರಿಗೆ, ಇನ್ನೆಲ್ಲರನ್ನಲ್ಲದಿದ್ದರೂ ತಮ್ಮನ್ನು ತಣಿಸಬಲ್ಲ ಉತ್ತರ ದೊರಕಬಹುದು.

ಆದರೆ ಅವರ ಪ್ರಶ್ನೆಗಳನ್ನು ಇನ್ನಷ್ಟು ತಿಳಿಗೊಳಿಸಿ ನಾನು ಅವರಿಗೆ ನೆರವಾಗಬಹುದು. ನಿಜದ ಮಾತೆಂದರೆ, ದೇವರು ಇರುವನೊ ಇಲ್ಲವೊ ಎಂಬ ಪ್ರಶ್ನೆಯನ್ನಲ್ಲ ಅವರು ಎತ್ತಿದ್ದು. ಆದರೆ ಪ್ರಜಾ ಸತ್ತಾತ್ಮಕ ಘಟನಾ ಬದ್ಧ ರಾಜೇಶ್ವರನೊಬ್ಬನು ಇರುವನೋ ಇಲ್ಲವೊ ಎಂಬುದೇ ಅವರ ಪ್ರಶ್ನೆ. ಕೋಟ್ಯಾನುಕೋಟಿ ಜನರು ಗಾಂಧೀಜಿ ಬದುಕಿ ಇರಬೇಕೆಂದು ಬಯಸಿದ್ದರಾಗಿ ಅವರ ಗ್ರಹಿಕೆ. ಕೆಲವು ದುರಾತ್ಮರು ಅವರ ಮರಣಕ್ಕೆ ಮತಕೊಟ್ಟರು. ದೇವರೆಂಬವನೊಬ್ಬನು ಇದ್ದುದಾದರೆ ಅವನೇಕೆ ಬಹುಮತಕ್ಕೆ ಬೆಂಬಲ ಕೊಡಲಿಲ್ಲ? ಇದನ್ನು ದೇವರಾಗಲೀ ಅವನ ಪರವಾಗಿ ಇನ್ನಾರೇ ಆಗಲಿ ತಿಳಿಸಿ ಹೇಳಲಿ ಇಲ್ಲವಾದರೆ ಅವನು ಪದಚ್ಯುತನಾಗಲಿ. ಅವರ ಸಂದೇಹದ ರಹಸ್ಯವೇ ಇದಾಗಿರುವದು. ದೇವರು ಇನ್ನೇನಾದರೂ ಇರಬಹುದು. ಆದರೆ ಪ್ರಜಾಸತ್ತೆಯ ಘಟನಾಬದ್ಧ ಮಹಾಪ್ರಭು ಮಾತ್ರ ಅವನು ಖಂಡಿತ ಅಲ್ಲವೇ ಅಲ್ಲ. ಅರ್ಥಾತ ಅವನಿಗೊಂದು ಕಟ್ಟಳೆ ಉಂಟೇ ಉಂಟು. ಹಾಗೂ ಕಟ್ಟಳೆಗನುಸರಿಸಿಯೇ ಅವನ ಕೃತಿಗಳು ಜರಗುತ್ತವ. ಆದರೆ ಅವನ ಕಟ್ಟಳೆಗಳೆಲ್ಲ ಅಲಿಖಿತ. ಅವುಗಳ ಅಂತರ್ಯವನ್ನು ಅರಿತಿರುವರು ಇಲ್ಲವೆಂದರೂ ಸಲ್ಲುವದು.

ಇದಲ್ಲದೆ ಅವರ ಸಂದೇಹದ ಅಭಿಪ್ರಾಯವು ಹೀಗೂ ಉಂಟು ದೇವರು ಸದಾ ಸದಾ ಶಯನಿರುವನೇ ಅಥವಾ ಸದಾಶಯವುಳ್ಳವರಿಗೆ ಮಾತ್ರ ಇರುವನೆ? ಕೆಡುಕು ಕೃತಿಗಳು ಈ ಜಗದಲ್ಲಿ ಘಟಿಸುವ ಕಾರಣವೇನು? ಇಲ್ಲಿ ಇಬ್ಬಗೆಯ ಪೂರ್ವ ಗ್ರಹಿಕೆಗಳುಂಟು (೧) ತಾನು ಒಳಿತು ಕೆಡಕೆಂದು ತೀರ್ಮಾನಿಸಿದ್ದೇ ಸರಿ, (೨) ತಾನು ಕೆಡಕೆಂದು ತೀರ್ಮಾನಿಸಿದ್ದನ್ನು ಇನ್ನೊಬ್ಬನಿಗೆ ಮಾಡಲು ಆಸ್ಪದವಿದ್ದರೆ ದೇವರ ಕಟ್ಟಳೆಯೇ ದೋಷಯುಕ್ತವಾಗಿರಬೇಕು ಈ ಬಗೆಯ ಎರಡೂ ಪೂರ್ವ ಗ್ರಹಿಕೆಗಳು ಸಂಪೂರ್ಣ ತಪ್ಪಾಗಿರಬಹುದಲ್ಲವೆ? ಈ ಬಗೆಯ ಗ್ರಹಿಕೆಗಳನ್ನು ಮಾಡಿಕೊಳ್ಳುವಾಗ ಜಾಗರೂಕರಾಗಿದ್ದು ದೇವರು ಅವರ ಗ್ರಹಿಕೆಯನ್ನೇ ಸರಿಯೆಂದು ಸ್ವೀಕರಿಸಿ ಅದರಂತೆ ಅವನು ನಡೆದುಕೊಳ್ಳದೇಕೆಂದು ಬಯಸುತ್ತಾರೆ. ದೇವರ ಮನುಷ್ಯರು ವಿಚಾರಿಸುವ ವಿಧಾನವೇ ಬೇರೆ. ಅವರೆನ್ನುತ್ತಾರೆ. “ ನಿನ್ನ ಸಂಕಲ್ಪ ನಿನಗೆ; ಅದನ್ನು ಪೂರೈಸುವದು ಮಾತ್ರ ನಮ್ಮದು ” ಎಂದು ಅದರಿಂದ ತರುಣ ಮಿತ್ರರಿಗೆ ನಾನು ಹೀಗೆ ಹೇಳಬಯಸುತ್ತೇನೆ. ಜಗತ್ತಿನ ಮತ್ತು ಅವನ ಬಗ್ಗೆ ಇದ್ದ ನಮ್ಮ ತಿಳುವಳಿಕೆಯಿಂದ ದೇವರ ತೀರ್ಮಾನ ಮಾಡುವದು ಬೇಡ. ಅವನನ್ನು ಅತ್ಯಂತ ಶ್ರದ್ಧೆಯಿಂದ ಅರಸುವಾ. ಕೊನೆತನಕ ಇದನ್ನು ಶೋಧಿಸಿಯೇ ಬಿಡುವೆನೆಂಬ ನಿರ್ಧಾರವಿದ್ದರೆ ಮಾತ್ರ ಈ ಸಮಸ್ಯೆಯ ಬೆನ್ನು ಹತ್ತುವಾ. ಸ್ವತಃ ಒಳ್ಳೆಯವರಾಗಿರುವದಲ್ಲದೇ ಹೆರರಿಗೆ ಒಳಿತನ್ನು ಮಾಡುವಾ. ಈ ಸಾಧನ ಕಾಲದಲ್ಲಿ ಅತ್ಯಂತ ನಮ್ರಭಾವದಿಂದ ನಮ್ಮ ನಮ್ಮ ಧರ್ಮಗಳಲ್ಲಿಯೇ ಶಾಂತಿ ಸಿಕ್ಕುವದೆಂದು ನಂಬಿ ಸಾಗುವಾ.

ವರ್ಧಾ ಕಿಶೋರಿಲಾಲ ಮಶ್ರುವಾಲಾ
೨೯—೩—೪೮

ನಮ್ಮ ದೇಶದ ವ್ಯಾಪ್ತಿ

ಹಿಂದೀ ಒಕ್ಕೂಟದಿಂದ ಬೇರಾಗಿ ರಾಜಕೀಯ ಸ್ವಾತಂತ್ರ್ಯವನ್ನು ಪಡೆವಾಕ್ಷಣ ಸಿಂಹಳ ಹಾಗು ಪಾಕಿಸ್ತಾನ ಭಾಗಗಳು ನಮ್ಮ ದೇಶದ ಭಾಗಗಳಾಗದೆ ಹೊರಗಾದವೆ? ಆ ಭಾಗಗಳ ಪ್ರಜೆಗಳು ಇನ್ನು ನಮ್ಮ ದೇಶಬಾಂಧವರಲ್ಲವೆ?

ರಾಜಕೀಯ ದೃಷ್ಟಿಯಿಂದ ಬ್ರಿಟಿಶರು ಹಿಂದುಸ್ತಾನದಲ್ಲಿ ವರಿಷ್ಠ ಶಾಸಕರಾಗುವ ಮೊದಲು, ೧೯೫೭ಕ್ಕಿಂತ ಹಿಂದೆ,ಹಿಂದುಸ್ತಾನದಲ್ಲಿ ಒಂದಕ್ಕಿಂತ ಹೆಚ್ಚು ರಾಜ್ಯಗಳು ಇಲ್ಲದಿದ್ದ ಕಾಲವೇ ದುರ್ಲಭ. ಸಾಮಾನ್ಯವಾಗಿ ಯಾವಾಗಲೂ ಒಂದಲ್ಲ ಒಂದು ಭಾಗ, ಅದೆಷ್ಟೇ ಚಿಕ್ಕದಿದ್ದಿರಲಿ, ಪೂರ್ಣ ಸ್ವತಂತ್ರವಾಗಿಯೇ ಇರುತಿತ್ತು.

ದಮನವೆಂಬುದು ಪೋರ್ತುಗೀಜ ರಾಜ್ಯಕ್ಕೆ ಸೇರಿದ್ದು. ದಮನದಿಂದ ಏಳೆಂಟು ಮೈಲು ದೂರದಲ್ಲಿ ಪ್ರಾರಂಭವಾಗುವ ಸುರತ ಜಿಲ್ಲೆ ಹಿಂದೀ ಭಾಗ. ಪೋರ್ತುಗಾಲ ಬ್ರಿಟಿಶ ಸಾಮ್ರಾಜ್ಯದ ಸದಸ್ಯ ಕೂಡ ಅಲ್ಲ. ಪಾಕಿಸ್ತಾನ ಸಿಂಹಳಗಳು. ಸದಸ್ಯರು? ಆದರೂ ಸುರತ ನಿವಾಸಿಯಾವನಾದರೂ ದಮನದ ಜನರನ್ನು ವಿದೇಶೀಯರೆಂದು ಬಗೆಯುವನೆ? ದಮನದವನು ಸುರತದವರನ್ನು ವಿದೇಶೀಯರೆಂದೆಣಿಸುವನೆ? ಜಾತಿವರ್ಣ ಧರ್ಮ ಭೇದಗಳಿದ್ದರೂ ಆಹಾರ ವಿಹಾರ ಮುಟ್ಟುಚಟ್ಟುಗಳ ತೊಡಕುಗಳಿದ್ದರೂ ರಾಜಕೀಯ ಹಾಗು ಆಡಳಿತದ ಪೂರ್ಣ ಸ್ವಾತಂತ್ರ್ಯವಿದ್ದರೂ ಏಕೊ ಏನೊ ಬಂಗಾಲ ಗುಜರಾಥ ಕಾಶೀವಾಸ ಮದ್ರಾಸ ವಾಸಿಗಳೆಲ್ಲರೂ— ಹಿಂದುಗಳಿರಲಿ ಮುಸ್ಲಿಮರಿರಲಿ ಸೀಖರೋ ಪಾರ್ಸಿಗಳೊ ಇರಲಿ ಎಲ್ಲ ಒಂದೇ ಜನಾಂಗವೆಂಬ ಭಾವನೆ ಇದ್ದೇ ಇತ್ತು. ಬ್ರಿಟಿಶ ರಾಜ್ಯದಿಂದಲೇ ಈ ಭಾವನೆ ರೂಢಿಸಿತೆನ್ನುವದು ತಪ್ಪು. ದಕ್ಷಿಣ ಭಾರತದ ಶಂಕರಾಚಾರ್ಯರು ಕಾಶ್ಮೀರ ಕಾಶೀವಾಸ ಓದಿ ನಾಗಳಲ್ಲಿ ಪೀಠಗಳನ್ನು ಸ್ಥಾಪಿಸಿದರು. ಮಧ್ಯಪ್ರಾಂತದಲ್ಲಿ ಅವತರಿಸಿದ ವಲ್ಲಭಾಚಾರ್ಯರು ಮಥುರೆಯ ಸುತ್ತುಮುತ್ತ ತಮ್ಮ ಮತವನ್ನು ಹಬ್ಬಿಸಿದರು. ಅಯೋಧ್ಯೆಯ ಸಹಜಾನಂದರು ಗುಜರಾಥದಲ್ಲಿ ಧರ್ಮಪ್ರಚಾರಮಾಡಿದ್ದರೆ ಗುಜರಾಥದ ಸ್ವಾಮಿ ದಯಾನಂದರು ಪಂಜಾಬದಲ್ಲಿ ಪ್ರಚಾರಮಾಡಿದರು. ಇವೆಲ್ಲವೂ ನಡೆದುದು ಬ್ರಿಟಿಶರು ಬರುವದಕ್ಕೆ ಎಷ್ಟೋ ಮೊದಲು ಇಲ್ಲವೆ ಬ್ರಿಟಿಶ ಕಾಲದ ಆರಂಭದಲ್ಲಿಯೆ.

ಬ್ರಿಟಿಶ ರಾಜ್ಯಕ್ಕೆ ಮೊದಲು ನಮ್ಮ ಏಕರಾಷ್ಟ್ರೀಯತ್ವಕ್ಕೆ ಸಂಬಂಧಿಸಿದ ನಮ್ಮ ಮಾತುಗಳು ದೋಷಯುಕ್ತ ವಿದ್ದಿರಬಹುದು· ರಾಷ್ಟ್ರೀಯ ಭಾವನೆ ಪೂರ್ಣವಾಗಿ ಬೆಳೆಯದೆ ಉಳಿದಿರಬಹುದು. ಮಾತಿನದೋಷ ಇಂದಿಗೂ ಇದೆ ಗುಜರಾಥದಿಂದಲೋ ಯುಕ್ತಪ್ರಾಂತದಿಂದಲೋ ಮಹಾರಾಷ್ಟ್ರದಲ್ಲಿಬಂದುವಾಸಿಸುವವನು ತನ್ನ “ ದೇಶಕ್ಕೆ ” ಹೋಗದೆ ಎರಡು ವರ್ಷವಾಯಿತೆಂದು ಹೇಳುವದನ್ನು ಈಗ ಕೇಳಬಹುದು. ತಾನು ಪರದೇಶದಲ್ಲಿ ವಾಸಿಸುತಿದ್ದೇನೆಂದು ಅವನ ಹೇಳಿಕೆ “ದೇಶದಲ್ಲಿ” ಯಾವ ಸ್ಥಳದವನು ನೀನೆಂದು ಒಬ್ಬ ಗುಜರಾಥಿ ಇನ್ನೊಬ್ಬನನ್ನು ಕೇಳುತ್ತಾನೆ. ಆದರೆ ಇದು ಬರಿ ಭಾಷಾದೋಷ. ಯಾವದೆ ಜಾತಿಯ ಮದ್ರಾಸೀಯನನ್ನಾಗಲಿ ಬಂಗಾಲಿಯನ್ನಾಗಲಿ ಇಂಗ್ಲಿಷರಂತೆ ಇಲ್ಲವೆ ನಿಗ್ರೋ ಚೀನಿ ಜಪಾನೀಯರಂತೆ ವಿದೇಶೀಯನೆಂದು ಅವನು ಎಂದೂ ಬಗೆಯುವದಿಲ್ಲ. ಅವನು “ ದೇಶ ” ಶಬ್ದವನ್ನು “ ಪ್ರಾಂತ ” ದ ಬದಲು ಉಪಯೋಗಿಸುತ್ತಾನೆ ಅಷ್ಟೇ.

ಸೋರ್ತುಗಾಲದ ಅಂಕಿತದಲ್ಲಿದ್ದರೂ ದಮನ ಹೇಗೆ ಗುಜರಾಥದ ಭಾಗವೋ ಹಾಗೆಯೆ ಪೂರ್ವ ಪಶ್ಚಿಮ ಬಂಗಾಲ ಗಳೂ ಪೂರ್ವ ಪಶ್ಚಿಮ ಪಂಜಾಬಗಳೂ ಆಸಾಮ, ಸಿಂಧ, ಬಲುಚಿಸ್ತಾನ, ಗಢವಾಲಗಳೂ ವಿವಿಧ ರಾಜಕೀಯ ಆಡಳಿತಗಳಿಗೆ ಒಳಗಾಗಿದ್ದರೂ ಒಂದೇ ದೇಶದ ಭಾಗಗಳೇ ಸರಿ. ಕಾಲಕ್ಕೆ ತಕ್ಕಂತೆ ರಾಜಕೀಯ ವ್ಯವಸ್ಥೆ ಬದಲಾಗಬಹುದು. ಧಾರ್ಮಿಕ ಪ್ರಬೋಧನೆಗಳೂ ಬದಲಾಗಬಹುದು. ಭಾಷೆಗಳೂ ಪರಿವರ್ತನೆಗೊಳ್ಳಬಹುದು ಆದರೂ ನಾವು ನೇರವಾಗಿ ಆಲೋಚಿಸಿದರೆ, ತೋರಿಕೆಯ ಭೇದಗಳೇ ಮುಖ್ಯಭೂಮಿಕೆಗಳೆಂದೆನಿಸಿ ಅವನ್ನು ಅತ್ಯಾಧಿಕವಾಗಿ ಬಾಹ್ಯ ತಗೊಳಿಸದಿದ್ದರೆ, ಬಲೂಚಿ, ಸಿಂಧಿ, ಪಂಜಾಬಿ, ಪಠಾಣ ಅಥವಾ ಪೂರ್ವ ಬಂಗಾಲಿ ಪ್ರಜೆ ನಮ್ಮ ಮನಸಿನಲ್ಲಿ ದೇಶಬಾಂಧವನಲ್ಲದೆ ಹೊರಗಿನವನಾಗುಳಿಯಲಾರ. ಹಾಗೆಯೇ ಆ ಪ್ರಾಂತಗಳ ಪ್ರಜೆಗಳಾದರೂ ಚೀನಿಯರನ್ನೋ ಜಪಾನಿಗಳನ್ನೊ ಯುರೋಪಿಯನ್ನರನ್ನೋ ಭಾವಿಸುವಂತೆ ನಮ್ಮನ್ನು ವಿದೇಶೀಯರೆಂದು ತಿಳಿಯಲಾರರು. ಅನಿವಾರ್ಯ ಅವಿಚ್ಛಿನ್ನವಾದೊಂದು ಭೌಗೋಲಿಕ— ಸಾಂಸ್ಕೃತಿಕ ಐಕ್ಯವು ನಮ್ಮೆಲ್ಲರನ್ನು ಒಂದಾಗಿ ಬಿಗಿದು ಗಡಿನಾಡು-ಪಾಕಿಸ್ತಾನಗಳಿಂದ ಅಸಾಮ-ಸಿಂಹಳಗಳಾದಿಯಾಗಿ ಇಡೀ ದೇಶವನ್ನು ನಮ್ಮ ಮನೋಭೂಮಿಯಲ್ಲಿ ನಮ್ಮ ಮಾತೃಭೂಮಿಯೆಂದು ಪ್ರತಿಷ್ಠಿಸಿದೆ, ಎರಡೂ ಡೊಮಿನಿಯನ್ನುಗಳ ಭಾಗಗಳೂ ನಮ್ಮಗೆ “ಸ್ವದೇಶ”ವೇ ಅವುಗಳ ನಿವಾಸಿಗಳು ನಮ್ಮ ದೇಶಬಂಧುಗಳೆ. ಒಂದರ ಹಿತವೇ ಇನ್ನೊಂದರ ಹಿತ. ರಾಜಕೀಯ ವ್ಯವಸ್ಥೆಗಳು ಅಶಾಶ್ವತ. ಕಾಯದೆ ಅಝ್ಞರೂ ಕೆಲ ಹಿಂದೂ-ಶೀಖ ಧರ್ಮಾಂಧರೂ ಇದನ್ನು ಇಂದು ಒಪ್ಪಿಕೊಳ್ಳದಿದ್ದರೂ ಒಂದಲ್ಲ ಒಂದು ದಿನ ಹಾಗೆ ಮಾತಲೇಬೇಕಾಗುವದು. ಒಂದಾನೊಂದು ಕಾಲದಲ್ಲಿ ... ಮಾಡುತ್ತಿದ್ದಂತೆ “ಪಂಜಾಬ, ಸಿಂಧ, ಗುಜರಾಥ, ಮರಾಠಾ, ದ್ರಾವಿಡ, ಉತ್ಕಲ, ಬಂಗ, ವಿಂಧ್ಯ, ಹಿಮಾಚಲ, ಜಮುನಾ, ಗಂಗಾ, ಉಚ್ಛಲ ಸಿಂಧುತರಂಗ” ಎಂಬುದಾಗಿ ಇಂದಾದರೂ ನಮ್ಮ ದೇಶದ ಭಾಗಗಳನ್ನ ಎಣಿಸುವದು ತಪ್ಪಲ್ಲ.

ವರ್ಧಾ — ಕಿ. ಘ. ಮಶ್ರುವಾಲ
೩೧—೩—೪೮

ಸರ್ವೋದಯ ಸಮಾಜ

(ಆನೆಯ ಪುಟದಿಂದ)

ಯಿಂದ ತನಗೆ ಸರಿಕಂಡ ಹಾಗೆ ಜನಸೇವೆ ಮಾಡಬಹುದು, ಮತ್ತು ಅಗ ಹೆರರಿಗೆ ಈ ಬಗ್ಗೆ ಸಲಹೆ ಕೊಡಲೂ ಬಹುದು, ತಾನೂ ಪಡೆಯಬಹುದು.

ಸರ್ವೋದಯ ಸಮಾಜವು ರಾಜಕೀಯ ಅಥವಾ ಧಾರ್ಮಿಕ ಸಂಸ್ಥೆಯಲ್ಲ. ಇದು ಯಾವ ಪಂಥಕ್ಕೂ ಸೇರಿದ್ದಲ್ಲ. ಸತ್ಯ ಅಹಿಂಸೆಗಳೇ ಪಾಲನ ಯೋಗ್ಯ ನೀತಿಗಳೆಂದು ತಿಳಿದ ಬೇಕಾದವರು ಈ ಸಮಾಜದ ಸೇವಕರಾಗಬಹುದು. ಅವರ ರಾಜಕೀಯ ಧಾರ್ಮಿಕ ಆರ್ಥಿಕ ಅಭಿಮತಗಳು ಏನಿದ್ದರೂ ಆಗಬಹುದು. ಈ ಬಗೆಯ ಸೇವಕನಾಗಿರಲು ಯಾರ ನಿರ್ಬಂಧವೂ ಇಲ್ಲ. ಈ ಸೇವಕರಿಗೆ ವಿಶಿಷ್ಟಗೌರವ ಉಂಟಾಗುವದು ಎಂದು ತಿಳಿದುಕೊಳ್ಳುವ ಕಾರಣವು ಇಲ್ಲ. ನಿರಂತರ ಲೋಕ ಸೇವಾಬಲದಿಂದ ಮಾತ್ರ ಸ್ವಗೌರವ ಸ್ವಪ್ರಭಾವದ ಪುಣ್ಯ ಪಡೆಯಬಹುದಲ್ಲದೆ ಒಂದು ಸಾಮಾಜದ ನಾಮಮಾತ್ರ ಸದಸ್ಯರಾಗುವದರಿಂದ ಅದು ದೊರೆಕಲಾರದು. ಅದರೂ ಈ ಸಮಾಜದ ಸೇವಕನೆಂದು ಹೇಳಿಕೊಂಡು ತನ್ನ ಜೀವನ ತಿದ್ದಿಕೊಳ್ಳುವದಲ್ಲದೆ ನೆರೆಹೊರೆಯವರನ್ನೂ ತಿದ್ದುವ ಸಮಾಜದ ಆದರ್ಶದಂತೆ ಆಚರಣೆ ಇಟ್ಟುಕೊಳ್ಳುವ ಸಂಕಲ್ಪ ಒಂದು ಮಹಾಬಲವೆಂದೇ ಹೇಳಬೇಕಾಗುವದು. ಸೇವಾಭಾವವನ್ನು ಸರ್ವರಲ್ಲಿ ಹುಟ್ಟಿಸಲೆಂದೇ ಸರ್ವೋದಯ ಸಮಾಜವು ಅಸ್ತಿತ್ವದಲ್ಲಿ ಬಂದಿದೆ. ಸೇವಾಗ್ರಾಮದಲ್ಲಿ ನೆರೆದವರ ಮನೀಷೆ ಇದಲ್ಲದೆ ಇನ್ನೇನು ಇರಬಲ್ಲದು?

ವರ್ಧಾ ಶ್ಯಾಮಲಾಲ
೩೦—೩—೪೮

[ಶ್ರೀ. ಧೋತ್ರೆಯವರು ಶ್ರೀ. ವಿನೋಬಾ ಭಾವೆಯವರ ಜೊತೆಗೆ ದಿಲ್ಲಿ ಪ್ರವಾಸಕ್ಕೆ ಹೋದ ಕಾರಣ ಅವರ ಪರವಾಗಿ ಕಸ್ತೂರಬಾ ಗಾಂಧಿ ರಾಷ್ಟ್ರೀಯ ಸ್ಮಾರಕ ನಿಧಿಯ ಶ್ರೀ. ಶ್ಯಾಮಲಾಲರು ಸರ್ವೋದಯ ಸಮಾಜದ ಪತ್ರವ್ಯವಹಾರವನ್ನು ಪರಿಶೀಲಿಸುತ್ತಿದ್ದಾರೆ. ಸಮಾಜದ ಬಗ್ಗೆ ಅನೇಕ ಪ್ರಶ್ನೆ ಕೇಳಿ ಅವರಿಗೆ ಪತ್ರಗಳು ಬಂದುದರಿಂದ ಅವರು ಮೇಲ್ಕಾಣಿಸಿದ ಪ್ರಕಟನೆಯನ್ನು ನನ್ನ ಸೂಚನೆಯ ಮೇರೆಗೆ ಹೊರಡಿಸಿದ್ದಾರೆ.

ವರ್ಧಾ ಕಿಶೋರಿಲಾಲ ಮಶ್ರುವಾಲಾ
೨—೪—೪೮]

ಹಿರಿಯೋಲಗ ಚಟುವಟಿಕೆಗಳು

ಕೂಲಿಕಾರರಿಗೆ ಸರಕಾರಿ ವಿಮೆ

ಹಿರಿಯೋಲಗದಲ್ಲಿ ೩೩ ನೆಯ ರಂದು ಕೂಲಿಕಾರರ ಸರಕಾರಿ ವಿಮಾ ಮಸೂದೆಯು ಪಾಸಾಯಿತು. ಕೂಲಿಕಾರ ಮಂತ್ರಿ ಜಗಜೀವನರಾಮರು ಈ ಬಗ್ಗೆ ಮಾತನಾಡುತ್ತ, ಈ ರಾಷ್ಟ್ರದ ಕೂಲಿಕಾರ ಕಾಯದೆಗಳ ಇತಿಹಾಸದಲ್ಲಿ ಈ ಮಸೂದೆಯು ಹೊಸ ಅಧ್ಯಾಯ ತೆರೆದಿದೆ ಎಂದು ಮುಂತಾಗಿ ಹೇಳಿದರು. ಈ ಬಗ್ಗೆ ದೀರ್ಘ ಚರ್ಚೆ ನಡೆಯಿತು. ... ಸರಕಾರಿ ನೌಕರರಿಗೆ ... ಸರಕಾರೀ ವಿಮಾ ಯೋಜನೆ ಪ್ರಾರಂಭಿಸಬೇಕೆಂದು ... ಸರಕಾರೇತರ ನೌಕರರಿಗೂ ಇದು ಅನ್ವಯಿಸಬೇಕೆಂದು ಶ್ರೀ ಅನಂತಶಯನಂ ಹೇಳಿದರು. ಶ್ರೀ ವಿಶ್ವನಾಥದಾಸರು ಈ ಮಸೂದೆಯಿಂದ ೪೦ ಲಕ್ಷ ಕೂಲಿಕಾರರಿಗೆ ಮಾತ್ರ ಹಿತವಾಗುವದೆಂದೂ ಭಾರತದ ಐದು ಲಕ್ಷ ಹಳ್ಳಿಗಳಲ್ಲಿ ೧೩ ಕೋಟಿ ಒಕ್ಕಲಿಗರು ... ಇದ್ದು ಅವರ ಗತಿಯೇನು ಎಂದೂ ಕೇಳಿದರು. ಶ್ರೀ ಪಿ. ಶಿವರಾಯರು, ಈ ಮಸೂದೆಯನ್ನು ಕೂಡಲೇ ಪ್ರಾಂತೀಯ ಸರಕಾರಗಳು ಆಚರಣೆಯಲ್ಲಿ ತರುವಂತೆ ನೋಡಿಕೊಳ್ಳಬೇಕೆಂದು ಸೂಚಿಸಿದರು.

ಪ್ರಾಂತಿಕ ಸರಕಾರಗಳ ಅಭಿವಚನ

ಕೂಲಿಕಾರ ಮಂತ್ರಿಗಳು ಈ ಚರ್ಚೆಗೆ ಉತ್ತರಕೊಡುತ್ತ ಹೀಗೆ ಮೊದಲಾಗಿ ಹೇಳಿದರು:— ಈ ನಿರ್ಣಯವನ್ನು ಕಾರ್ಯರೂಪಕ್ಕೆ ತರುವ ಹೊಣೆಯು ಪ್ರಾಂತಿಕ ಸರಕಾರಗಳನ್ನೇ ಕೂಡಿದೆ. ಆದರೂ ಎಲ್ಲ ಸರಕಾರಗಳು ಈ ನಿರ್ಣಯವನ್ನು ಒಂದೇ ವಿಧವಾಗಿ ಪಾಲಿಸುವ ಹಾಗೆ ಕೇಂದ್ರ ಸರಕಾರವು ಖಂಡಿತ ದಕ್ಷತೆ ವಹಿಸುವದು. ಈ ಮಸೂದೆಯನ್ನು ಅನೇಕ ಪ್ರಾಂತಿಕ ಸರಕಾರಗಳು ಸ್ವಾಗತಿಸಿವೆಯಲ್ಲದೆ ಇದನ್ನು ಕೂಡಲೆ ಕಾರ್ಯಕಾರಿಯಾಗಿ ಮಾಡುವ ಅಭಿವಚನ ಕೊಟ್ಟಿವೆ. ಇತ್ತೀಚೆ ಪ್ರಾಂತಿಕ ಸರಕಾರಗಳು ಕೂಲಿಕಾರರ ಬಗ್ಗೆ ವಿಶೇಷ ಆಸ್ಥೆ ತೋರುತ್ತಿರುವ ಕಾರಣ ಅವುಗಳ ಬಗ್ಗೆ ಸಂಶಯ ಬೇಡ.

ಕೂಲಿಕಾರರ ಸ್ವಾರ್ಥಸಾಧಕ ಧುರೀಣರು

ದುರ್ದೈವದ ವಿಷಯವೆಂದರೆ ಈಗಿನ ಕೂಲಿಕಾರ ಧುರೀಣರು ಸ್ವಾರ್ಥಸಾಧನೆಗಾಗಿ ತಮ್ಮ ಅನುಯಾಯಿಗಳನ್ನು ಉಪಯೋಗಿಸಿಕೊಳ್ಳುತ್ತಿರುವರು. ಇದು ಸರ್ವರಿಗೂ ಗೊತ್ತಿದ್ದ ವಿಷಯವಾಗಿದೆ. ಕೂಲಿಕಾರರ ಅಜ್ಞಾನದ ಲಾಭಪಡೆದು ಧುರೀಣರೆನ್ನಿಸಿಕೊಳ್ಳುವವರು ಅವರಲ್ಲಿ ಅಸಂತೋಷವನ್ನು ಹಬ್ಬಿಸುತ್ತಿದ್ದಾರೆ ಮತ್ತು ಅವರನ್ನು ಅಜ್ಞಾನಾಂಧಕಾರದಲ್ಲಿ ಇಟ್ಟಿರುತ್ತಾರೆ. ಕಾರಣ ಈ ಮಸೂದೆಯ ಲಾಭಾಲಾಭಗಳನ್ನು ಕೂಲಿಕಾರರಿಗೆ ತಿಳಿಸಿ ಹೇಳುವ ಹೊಣೆಯನ್ನು ಶಾಸನ ಸಭೆಯ ಸದಸ್ಯರೇ ಇನ್ನು ಮೇಲೆ ಹೊರಬೇಕಾದೀತು. ಕೂಲಿಕಾರರ ಪರಿಸ್ಥಿತಿಯು ಇನ್ನೂ ಸುಧಾರಿಸಬೇಕು. ಅವರ ಆರ್ಥಿಕ ಪರಿಸ್ಥಿತಿಯು ಅವರ ಸ್ವಾರ್ಥಸಾಧಕ ಧುರೀಣರು ಹೊರಟುಹೋದಂದೇ ಸಾಧ್ಯವೆನ್ನ ಬಹುದಾಗಿದೆ.

ಸರ್ವರಿಗೂ ಉದ್ಯೋಗ

ಇನ್ನು ರೈತರನ್ನೂ ಸರಕಾರ ಅಲಕ್ಷಿಸಿಲ್ಲ. ಪ್ರತಿಯೊಬ್ಬ ಸದೃಢಕಾಯರಿಗೂ ಉದ್ಯೋಗ ಕಲ್ಪಿಸಿಕೊಡಬೇಕೆಂದು ಸರಕಾರದ ಮನಸ್ಸಿನಲ್ಲಿದೆ ಎಂದು ಮೊದಲಾಗಿ ಹೇಳಿದರು.

ಮಂತ್ರಿಗಳ ಉತ್ತರದ ನಂತರ ಕೂಲಿಕಾರರ ಸರಕಾರೀ ವಿಮಾ ಮಸೂದೆಯು ಸ್ವೀಕೃತವಾಯಿತು.

ಬಾಧಕವಲ್ಲದ ಜಾತೀಯ ಸಂಸ್ಥೆ ಇರಲಿ

ಶ್ರೀ ಅನಂತಶಯನಂ ಅಯ್ಯಂಗಾರರು ತಾ. ೩ ರಂದು ಹಿರಿಯೋಲಗದಲ್ಲಿ ಜಾತೀಯ ಸಂಸ್ಥೆಗಳು, ಸಾಂಸ್ಕೃತಿಕ, ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಏಳಿಗೆಗೆ ಹೆಣಗುತ್ತಿದ್ದರೆ ಅವಕ್ಕೆ ಅನುವುಗೊಡಬೇಕೆಂಬ ಹಾಗೂ ವಿಧ್ವಂಸಕ ಧೋರಣವಿಟ್ಟುಕೊಂಡ ಜಾತೀಯ ಸಂಸ್ಥೆಗಳನ್ನು ಸರಕಾರವು ದಮನಿಸಬೇಕೆಂಬ ಆಶಯದ ಗೊತ್ತುವಳಿ ಮಂಡಿಸಿದರು. ಮುಖ್ಯ ಮಂತ್ರಿಗಳಾದ ಪಂಡಿತ ನೆಹರು ಅವರು ಈ ಗೊತ್ತುವಳಿಗೆ ಬೆಂಬಲ ಕೊಟ್ಟು ಮಾತನಾಡಿ ಹೀಗೆ ಹೇಳಿದರು.

ಹಿಂದುಳಿದವರಿಗೆ ಆಶ್ವಾಸನ

ಇದರಲ್ಲಿ ಅಸಂಶಯವಾದ ಧ್ಯೇಯಸಾಧನೆಗಾಗಿ ಹಿಂದುಸ್ಥಾನ ಸರಕಾರವದರು ಶಕ್ತಿ ಸರ್ವಸ್ವವನ್ನೂ ಉಪಯೋಗಿಸುವರೆಂದು ಭರವಸೆ ಕೊಡುತ್ತೇವೆ. ಸಾಮಾಜಿಕ, ಆರ್ಥಿಕ ಮತ್ತು ಇನ್ನಿತರ ದೃಷ್ಟಿಯಿಂದ ಹಿಂದುಳಿದ ಜನರನ್ನು ಮುಂದೆ ತರುವ ಹೊಣೆ ನಮ್ಮ ಮೇಲಿದೆ. ಇವರಿಗಾಗಿ ಸರಕಾರವು ಸಾಧ್ಯವಿದ್ದುದನ್ನೆಲ್ಲ ಮಾಡುವ ಧೋರಣ ಇಟ್ಟುಕೊಂಡಿದೆ. ಇತ್ತೀಚೆ ಸಂಸಿದಿ ಪರಿಣತರಿಗೆ ಕೆಲವೊಂದು ಶಾಲೆಯ ಶಿಕ್ಷಣ, ತಿಶಿಕ್ಷವೃತ್ತಿ ಮೊದಲಾದ ವಿಶೇಷ ಸವಲತ್ತು ಕೊಡಲಾಗಿದೆ. ಇದೇ ಬಗೆಯ ಸೌಕರ್ಯ ಗುಡ್ಡಗಾಡ ಜನರಿಗೂ ಇತರ ಹಿಂದುಳಿದ ವರ್ಗದವರಿಗೂ ಕೊಡುವದು ಅಪರಿಹಾರ್ಯ. ಶಾಸನ ಸಭೆಯಲ್ಲಿ ಸಹ ಇವರಿಗಾಗಿ ಕೆಲವು ಸ್ಥಳ ಕಾದಿಡುವದು ಯೋಗ್ಯವೆಂದು ತಾತ್ಪೂರ್ತಿಕವಾಗಿ ಹಾಗೆ ನಿರ್ಧರಿಸಿದೆ. ಇವರು ತಮ್ಮ ಕಾಲ ಮೇಲೆ ನಿಲ್ಲುವಂತಾಗುವ ವರೆಗೆ ಈ ಬಗೆಯ ಉತ್ತೇಜನ ಅವಶ್ಯ ಎಂದು ಮೊದಲಾಗಿ ಮುಖ್ಯ ಮಂತ್ರಿಗಳು ಹೇಳಿದರು. ಈ ಗೊತ್ತುವಳಿ ಪ್ರಚಂಡ ಜಯಘೋಷದೊಡನೆ ಅಂಗೀಕೃತವಾಯಿತು.

ಜುನಾಗಡ ಆಸ್ತಿಯ ಬಗ್ಗೆ

ಮುಂಬಯಿ ಪ್ರಾಂತದ ಗೋಧ್ರಾದಲ್ಲಿ ನಡೆದ ಗಲಭೆಯ ಬಗ್ಗೆ ತಾ ೫ ರಂದು ಓಲಗದಲ್ಲಿ ಚರ್ಚೆ ನಡೆಯಿತು. ಮುಂಬಯಿ ಗೃಹ ಮಂತ್ರಿಗಳ ಹೇಳಿಕೆಯನ್ನೇ ಇಲ್ಲಿಯೂ ಹೇಳಲಾಯಿತು. ೩ ನೇ ತಾ. ದಿನ ಡಾ. ಅಂಬೇಡಕರರಿಂದ ಮಂಡಿಸಲ್ಪಟ್ಟ ಜುನಾಗಡ ಆಸ್ತಿಯನ್ನು ವಶಪಡಿಸಿಕೊಳ್ಳುವ ಮಸೂದೆಯು ಇಂದು ಹೆಚ್ಚಿನ ಚರ್ಚಾನಂತರ ಸ್ವೀಕೃತವಾಯಿತು. ಜುನಾಗಡ ಸಂಸ್ಥಾನದ ಕೆಲವೊಂದು ಆಸ್ತಿಯನ್ನು ವಶಪಡಿಸಿಕೊಳ್ಳಲು ಜುನಾಗಡ ಆಡಳಿತಗಾರರಿಗೆ ಅಧಿಕಾರ ಕೊಡತಕ್ಕದ್ದು ಎಂಬುದಾಗಿ ಈ ಮಸೂದೆಯ ಅಭಿಪ್ರಾಯವಿತ್ತು.

ದೊಡ್ಡ ಉದ್ಯೋಗಗಳು ಸರಕಾರದ ವಶದಲ್ಲಿ

ಉದ್ಯೋಗ ಮಂತ್ರಿ ಡಾ. ಶ್ಯಾಮಪ್ರಸಾದ ಮುಕರ್ಜಿಯವರು ತಾ ೬ ರಂದು ಹಿಂದುಸ್ಥಾನ ಸರಕಾರದ ಔದ್ಯೋಗಿಕ ಧೋರಣೆಯ ಬಗ್ಗೆ ಇದ್ದ ಗೊತ್ತುವಳಿಯನ್ನು ಮಂಡಿಸಿದರು. ದೇಶದಲ್ಲಿ ಈಗಿದ್ದ ಸಂಪದವನ್ನೆ ಹಂಚಿದರೆ ಬಡತನ ಪಂಚಿಪಂಚಿತೆಯೇ ಆಗುವದೆಂದೂ ಉತ್ಪಾದನ ಹೆಚ್ಚಿಸಿಬಂದ ಸಂಪದವನ್ನು ಹಂಚಲು ಬರುವ ಹಾಗೆ ಒಂದು ರಾಷ್ಟ್ರೀಯ ಯೋಜನಾ ಸಮಿತಿಯನ್ನು ನೇಮಿಸಬೇಕೆಂದೂ ಈ ಗೊತ್ತುವಳಿಯ ಅಭಿಪ್ರಾಯವಿದೆ. ಉದ್ಯೋಗಗಳಲ್ಲಿ ಕೇವಲ ಸರಕಾರಕ್ಕೇ ಸೇರಿದವು, ಸರಕಾರದ ನಿಯಂತ್ರಣದಲ್ಲಿ ಇದ್ದವು, ಖಾಸಗಿ ಜನರಿಗೆ ಬಿಟ್ಟುಕೊಡಬಹುದಾದವು ಎಂಬುದಾಗಿ ೩ ವಿಭಾಗ ಮಾಡಲಾಗಿದೆ. ಯಾವದೊಂದು ಉದ್ಯೋಗವನ್ನು ವಶಪಡಿಸಿಕೊಳ್ಳಬೇಕೆನಿಸಿದರೆ ಸರಕಾರಕ್ಕೆ ಸ್ವಯಂಸಿದ್ಧ ಅಧಿಕಾರವಿದೆ. ಹಾಗೆ ವಶಪಡಿಸಿಕೊಂಡ ಉದ್ಯೋಗಗಳಿಗೆ ಯೋಗ್ಯ ಪರಿಹಾರ ಕೊಡಲಾಗುವದು. ಕೂಲಿಕಾರ ಮತ್ತು ಬಂಡವಲದಾರರಲ್ಲಿ ಸಹಕಾರ ಸಾಧಿಸುವ ಉಪಾಯವೆಂದು ಔದ್ಯೋಗಿಕ ಪರಿಷತ್ತು ಡಿಸೆಂಬರದಲ್ಲಿ ಅಂಗೀಕರಿಸಿದ ಗೊತ್ತುವಳಿಯನ್ನು ಸರಕಾರವು ಒಪ್ಪಿದೆ. ವಿದೇಶೀಯರ ಬಂಡವಲವನ್ನು ಇಲ್ಲಿಯ ಉದ್ಯೋಗಗಳಲ್ಲಿ ತೊಡಗಿಸುವ ಬಗ್ಗೆಯೂ ಈ ಗೊತ್ತುವಳಿಯಲ್ಲಿ ಉಲ್ಲೇಖವಿದೆ.

ಆಸ್ತಿಶುಲ್ಕ ಮಸೂದೆ

ತಾ. ೬ ಕ್ಕೆ ಆಸ್ತಿ ಶುಲ್ಕ ಮಸೂದೆಯನ್ನು ಪರಿಶೀಲನಾ ಸಮಿತಿಗೆ ಒಪ್ಪಿಸಬೇಕೆಂಬ ಗೊತ್ತುವಳಿಯು ಸ್ವೀಕೃತವಾಯಿತು. ಈ ಮಸೂದೆಯನ್ನು ಮಂಡಿಸುತ್ತ ಅರ್ಥಸಚಿವರು ಹೀಗೆ ಹೇಳಿದರು:— ಇದನ್ನು ಕೆಲ ಧನಿಕರು ವಿರೋಧಿಸಬಹುದು. ಕೆಲವೇ ಜನರ ಕೈಯಲ್ಲಿ ಧನ ಸಂಚಯವಾಗಬಾರದೆಂದೇ ಈ ಮಸೂದೆಯ ಉದ್ದೇಶ. ಅವಿಭಕ್ತ ಹಿಂದೂ ಕುಟುಂಬದ ಮೇಲೆ ಇದರ ಪರಿಣಾಮವೇನಾಗಬಹುದೋ ಎಂಬುದನ್ನು ನಾನು ಆಳವಾಗಿ ವಿಚಾರಿಸುತ್ತಿರುವೆ.

ಒಬ್ಬರ ಪಶ್ಚಾತ್ ಇನ್ನೊಬ್ಬರ ಹೆಸರಿಗೆ ಆಸ್ತಿಯು ಬದಲಾಗುವ ಕಾಲಕ್ಕೆ ಇಂತಿಷ್ಟು ಕರ ಕೊಡತಕ್ಕದ್ದು ಎಂದು ಈ ಆಸ್ತಿ ಶುಲ್ಕದ ಗೊತ್ತುವಳಿಯ ಅಭಿಪ್ರಾಯವಾಗಿದೆ. ಇದರ ಪ್ರಕಾರ ಧನಿಕರು ಮೃತರಾದರೆ ಅವರ ಆಸ್ತಿಯ ಪ್ರಮಾಣದಂತೆ ಕರ ಹೇರುವ ಅಧಿಕಾರವು ಕೇಂದ್ರ ಸರಕಾರಕ್ಕೆ ಪ್ರಾಪ್ತವಾಗುವದು. ಕರದ ಪ್ರಮಾಣವೆಷ್ಟಿರಬೇಕು ಮತ್ತು ಬಂದ ಕರವನ್ನು ಕೇಂದ್ರ ಹಾಗೂ ಪ್ರಾಂತಗಳಲ್ಲಿ ಎಷ್ಟು ಹಂಚಬೇಕು ಎಂಬುದನ್ನು ಪ್ರಾಂತಿಕ ಸರಕಾರಗಳ ಸಲಹೆಯಂತೆ ನಿರ್ಧರಿಸಲಾಗುವದು.

ಬಾಬು ರಾಮನಾರಾಯಣ ಸಿಂಗರು ಈ ಆಸ್ತಿ ಶುಲ್ಕದ ಮಸೂದೆಯನ್ನು ವಿರೋಧಿಸಿ ಮಾತನಾಡಿದರು. ಸ್ವಾತಂತ್ರ್ಯ ಬಂದನಂತರ ಕರಗಳು ತಗ್ಗಬೇಕಲ್ಲದೆ ಬದುಕಿದರೆ ಕರ ಸತ್ತರೆ ಕರ ಹೀಗಾಗಿಹೋದರೆ ಹಳ್ಳಿಗರಂತೂ ಗಾಬರಿಯಾಗಿ ಹೋಗಬಹುದು. ಈ ಮಸೂದೆಯನ್ನು ಜನಾಭಿಪ್ರಾಯಕ್ಕೆ ಕಳಿಸಿದರೆ ಲಕ್ಷಾಂತರ ಹಳ್ಳಿಗರು ಖಂಡಿತ ಹಿಂತೆಗೆಯಿಸಿಕೊಳ್ಳಿರಿ ಎಂದು ಅಭಿಪ್ರಾಯ ವ್ಯಕ್ತಪಡಿಸುವರು. ಇಂತಹ ಕರಭಾರದಿಂದ ಇದು ರಾಷ್ಟ್ರೀಯ ಸರಕಾರವೇ ಎಂದು ಸಂದೇಹ ತಲೆದೋರುವದು. ಜನತೆ ಕೊಟ್ಟ ಜವಾಬ್ದಾರಿ ನಿಯೋಗವನ್ನು ದುರುಪಯೋಗ ಮಾಡುವದು ತಪ್ಪು. ಹೇಗಾದರೂ ಮಾಡಿ ಕರ ವಸೂಲಿ ಮಾಡುವದೇ ಸರಕಾರದ ಗುರಿಯಾಗಿದೆ ಎಂಬುದನ್ನು ಮೊದಲು ಮನಗಾಣಿಸಿಕೊಡುವದು ಸರಕಾರದ ಕರ್ತವ್ಯ. ಈ ಮೊದಲಿನ ಸರಕಾರ ಜನರ ಧನವನ್ನು ಅಪವ್ಯಯ ಮಾಡುತ್ತ ಬಂದಿತ್ತು. ಮುಂದುವರಿದ ರಾಷ್ಟ್ರಗಳಲ್ಲಿ ಈ ಕರವಿದೆ ಎಂದು ಅರ್ಥಸಚಿವರು ಸಮರ್ಥನೆ ಮಾಡಿಕೊಂಡಿದ್ದಾರೆ. ಹಿಂದುಸ್ಥಾನವು ಮುಂದುವರಿದ ರಾಷ್ಟ್ರವೇ? ಎಂದು ಮುಂತಾಗಿ ಬಾಬು ನಾರಾಯಣ ಸಿಂಗರು ಹೇಳಿದರು. ಇದರಂತೆ ಇನ್ನು ಕೆಲವರೂ ವಿರೋಧಿಸಿದರು. ಅರ್ಥಸಚಿವರು ಉತ್ತರ ಹೇಳಿದ ಮೇಲೆ ಈ ಮಸೂದೆ ಪರಿಶೀಲಕ ಸಮಿತಿಗೆ ಕಳಿಸಬೇಕೆಂದೂ ಅದರ ಸಂಬಂಧದಿಂದ ಅದನ್ನು ಲೋಕಾಂತರಿಸಬಹುದೆಂದೂ ತೀರ್ಮಾನವಾಯಿತು.

ಅಣು ಶಕ್ತಿ ಉತ್ಪಾದನೆ

ಅನಂತರ ಮುಖ್ಯ ಮಂತ್ರಿಗಳಾದ ಪಂ ಜವಾಹರಲಾಲರು ಅಣು ಶಕ್ತಿ ಉತ್ಪಾದನೆ ಮತ್ತು ನಿಯಂತ್ರಣದ ಮಸೂದೆಯನ್ನು ಮಂಡಿಸಿದರು. ಅಣುಶಕ್ತಿಯ ಸದುಪಯೋಗವೊಂದೇ ನಮ್ಮ ಗುರಿಯಲ್ಲದೆ ಅದನ್ನು ವಿಧ್ವಂಸಕವಾಗಿ ಉಪಯೋಗಿಸುವ ಇಚ್ಛೆ ಭಾರತಕ್ಕಿಲ್ಲವೆಂದು ಪಂ. ಜವಾಹರಲಾಲರು ಹೇಳಿದರು. ಸ್ವಲ್ಪ ಚರ್ಚೆಯಾಗಿ ಈ ಮಸೂದೆಯು ಸ್ವೀಕೃತವಾಯಿತು.

ಅನುಕೂಲಾಗ್ರ ಬದಲಾವಣೆ

ಪಂಡಿತ ಜವಾಹರರು ಔದ್ಯೋಗಿಕ ಧೋರಣದ ಬಗ್ಗೆ ಸುದೀರ್ಘ ಭಾಷಣಮಾಡುತ್ತ ತಾ. ೭ ರಂದು ಹೀಗೆ ಮೊದಲಾಗಿ ಹೇಳಿದರು:— ನಾವು ಹೊಸ ಉಪಕ್ರಮ ಕೈಕೊಳ್ಳುವಾಗ ಇದ್ದ ಪದ್ಧತಿಗೆ ಹಾನಿತಗಲದಂತೆ ಎಚ್ಚರಿಕೆವಹಿಸಬೇಕು. ಉದ್ಯೋಗದಲ್ಲಿ ಅನುಕೂಲಾಗ್ರ ಬದಲಾವಣೆಯಾಗಬೇಕೆಂಬುದರಲ್ಲಿ ನಾನು ಆಗ್ರಹಿಯೆಂದು ಹೇಳಬಲ್ಲೆ. ಆದರೆ ಈ ಅನುಕೂಲಾಗ್ರ ಪರಿವರ್ತನದಿಂದ ಇದ್ದುದೆಲ್ಲ ನಿರುಪಯುಕ್ತವಾಗಿ, ರಾಷ್ಟ್ರೀಕರಣಕ್ಕೆ ನಿಕ್ಕಹಾಗೆ ಹಣವೆಚ್ಚ ಮಾಡಬೇಕಾಗುವದು. ಹೀಗೆ ಮಾಡಿದ್ದಾದರೆ ನೂರಕ್ಕೆ ೮೦ ರಷ್ಟು ಹಾನಿಯನ್ನೇ ಕೊಂಡಂತಾದೀತು. ಅದ್ದರಿಂದ ಈ ದಿಶೆಯಲ್ಲಿ ಯೋಗ್ಯವಾದ ಮತ್ತು ವ್ಯವಹಾರ್ಯವಾದ ಮಾರ್ಗವನ್ನು ಅನುಸರಿಸುವದೇ ಸರಕಾರದ ಧೋರಣವಾಗಿದೆ. ಕೆಡಿಸುವದಕ್ಕಿಂತ ಕಟ್ಟಲು ಸಮಯ ಬಹಳಬೇಕು. ಕಾರಣ ಸದ್ಯದ ಔದ್ಯೋಗಿಕ ಪದ್ಧತಿಯನ್ನೇ ಅದಷ್ಟು ಬೇಗ ಬಲಿಸಬೇಕೆಂದು ನಾನು ಹೇಳಬಯಸುವೆ.

ನಮ್ಮದು ಜಾತ್ಯತೀತ ರಾಷ್ಟ್ರ

ಪಂಡಿತ ಜವಾಹರರು ತಾ. ೭ ಕ್ಕೆ ಕೆಲವರ ಪ್ರಶ್ನೆಗಳಿಗೆ ಉತ್ತರಕೊಡುತ್ತ, ನಮ್ಮ ಸರಕಾರ ಜಾತ್ಯತೀತ ಸರಕಾರ, ನಮ್ಮ ರಾಷ್ಟ್ರವು ಜಾತ್ಯತೀತ ರಾಷ್ಟ್ರ. ಇದನ್ನು ನಾವು ಮೊದಲೇ ಸಾರಿದ್ದೇವೆ. ನಮಗೆ ಗೊತ್ತಿದ್ದಂತೆ ಇನ್ನಾವ ರಾಷ್ಟ್ರವೂ ಜಾತ್ಯತೀತವಾಗಿಲ್ಲ ಎಂದು ಉದ್ಗಾರ ತೆಗೆದಾಗ ಓಲಗವು ಹರ್ಷಮುಖರಿತವಾಯಿತು.

ಹೊಸ ಅಯ್ಕೆಗೆ ಮತದಾರರ ಯಾದಿ

ಹೊಸ ಘಟನೆಯ ಪ್ರಕಾರ ಆಯ್ಕೆ ನಡೆಸಲು ಮತದಾರರ ಯಾದಿಗಳನ್ನು ಎಂದು ಸಿದ್ಧಗೊಳಿಸಲಾಗುವದು ಎಂದು ಪ್ರೊ. ರಂಗಾರು ಕೇಳಿದ ಪ್ರಶ್ನೆಗೆ ಡಾ. ಅಂಬೇಡಕರರು, ಹೊಸ ರಾಜ್ಯಘಟನೆಯು ಸ್ವೀಕೃತವಾಗುವದೆಂದು ಗ್ರಹಿಸಿ ಈಗಾಗಲೇ ಈ ಯಾದಿಯನ್ನು ಸಿದ್ಧಗೊಳಿಸುವ ಕೆಲಸ ಪ್ರಾರಂಭವಾಗಿಹೋಗಿದೆಯೆಂದು ಹೇಳಿದರು.

ಅಮೇರಿಕೆಗೆ ಪಂ. ನೆಹರೂರ ಸಂದೇಶ

ಜಗಕ್ಕೆ ಮಹಾತ್ಮರ ದಾನ

ಭಾರತದ ಮುಖ್ಯ ಮಂತ್ರಿಗಳಾದ ಪಂಡಿತ ಜವಾಹರಲಾಲ ನೆಹರು ತಾ ೮ ರಂದು ಅಮೇರಿಕೆಯನ್ನುದ್ದೇಶಿಸಿ ಆಕಾಶವಾಣಿಯಲ್ಲಿ ಮಾತನಾಡಿ ಸಾರವತ್ತಾದ ಸಂದೇಶ ಹೇಳಿದರು. ಸಂದೇಶದ ತಿರುಳು ಹೀಗಿದೆ.

ನಾವು ನಮ್ಮ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಸಂಬಂಧಗಳಲ್ಲಿ ನೈತಿಕ ಕಟ್ಟಳೆಗಳನ್ನು ಲೆಕ್ಕಿಸದೆ ಹೋದರೆ ನಮಗೆ ಚಿರಶಾಂತಿ ದೊರೆಯುವದು ಸಾಧ್ಯವಿಲ್ಲ. ಮಹಾತ್ಮಾ ಗಾಂಧಿಯವರು ಭಾರತದ ಸ್ವಾತಂತ್ರ್ಯಕ್ಕೊಂದೇ ಅಲ್ಲ, ಆದರೆ ಅಖಂಡ ಜಗದ ಶಾಶ್ವತ ಶಾಂತಿಗೆ ಅಮೂಲ್ಯ ಕಾಣಿಕೆ ಸಲ್ಲಿಸಿದ್ದಾರೆ. ಅಹಿಂಸೆಯ ತತ್ವವೆಂದರೆ ದಬ್ಬಾಳಿಕೆಗೆ ಮೌನದಿಂದ ತಲೆ ಬಾಗುವದಲ್ಲ. ಆದರೆ ಅಂತಾರಾಷ್ಟ್ರೀಯ ಮತಭೇದಗಳನ್ನು ಬಗೆಹರಿಸಿಕೊಳ್ಳಲು ಅದೊಂದು ದಿವ್ಯಾಸ್ತ್ರವಾಗಿದೆ.

ನಾವಿರುವದು ಗಂಡಾಂತರದ ಯುಗದಲ್ಲಿ. ಏನೋ ಶಾಂತಿ ನೆಲೆಸಿತು ಎಂದು ಸಮಾಧಾನಪಟ್ಟುಕೊಳ್ಳುತ್ತಿರುವಾಗಲೇ ಗುಟ್ಟಾಗಿ ಯುದ್ಧ ಸಿದ್ಧತೆಗಳು ನಡೆದಿರುತ್ತವೆ. ಗಂಡಾಂತರಗಳನ್ನು ಹಾವೇ ನಮ್ಮ ಕೈಯಿಂದ ರಚಿಸಿಕೊಳ್ಳುತ್ತಿರುವ ವಿಚಿತ್ರ ಯುಗವಿದು. ಈ ಗಂಡಾಂತರದ ಯುಗವು ಮಾನವ ಕುಲವನ್ನೇ ಎಲ್ಲಿ ನಿರ್ಮೂಲ ಮಾಡುವದೋ ಎಂದು ಭಯವಾಗುವದು.

ಏಕಜಗತ್ತು ಮತ್ತು ವಿಶ್ವ ಸರಕಾರಗಳ ಬಗ್ಗೆ ನಾವು ಮಾತಾಡುವೆವೇನೋ ನಿಜ. ಕೋಟ್ಯವಧಿ ಜನರು ಬೇಡುವದೂ ಇದೇ ಆಗಿದೆ. ಆದರೆ ರಾಜಕಾರಣಿಗಳ ಕೈವಾಡ ಕಂಟಕಗಳನ್ನು ನಿರ್ಮಿಸುವದರಲ್ಲಿ ತೊಡಗಿ ಹೋಗಿದೆ. ಒಬ್ಬನು ಗೆದ್ದರೆ ಇನ್ನೊಬ್ಬನು ಸೋಲುತ್ತಾನೆ. ಗೆದ್ದವನೂ ಸೋತವನಷ್ಟೇ ಹಾನಿಗೀಡಾಗುತ್ತಾನೆ. ಈ ಅಂಶವನ್ನು ನಾವು ಗಮನಿಸಬೇಡವೆ? ಗೆಲ್ಲುವ ಹಂಬಲದಲ್ಲಿ ಎಲ್ಲರನ್ನು ಹಾನಿಗೀಡು ಮಾಡುವದು ಜಾಣತನವಾದೀತೆ? ಸ್ವಸುಖ ಸಾಧನೆಯಲ್ಲಿ ವಿಶ್ವ ಶಾಂತಿಗೆ ಭಂಗ ತರುವದು ಯುಕ್ತವಾದೀತೆ?

ಅಂತಾರಾಷ್ಟ್ರೀಯ ಮತ ಭೇದಗಳುಂಟಾದಾಗ ಮಹಾತ್ಮರ ಅಹಿಂಸಾತತ್ವಕ್ಕೆ ಶರಣು ಹೋಗುವದೊಂದೇ ತಕ್ಕ ಉಪಾಯ. ಮಾನವ ಪ್ರಭಾವದ ಇಂದಿನ ಪರಿಮಿತಿಯನ್ನೂ ನಮ್ಮ ಮುಕ್ತದೃಷ್ಟಿಗಳು ಇಂದು ಎದುರಿಸಬೇಕಾಗಿರುವ ಸಂಗತಿಗಳನ್ನು ನಾವು ಅಲಕ್ಷಿಸುವದಿಲ್ಲ ನಿಜ. ಆದರಂತೆ ಇಂದಿನ ವಿಶಿಷ್ಟ ರಚನೆಯ ಜಗತ್ತಿನಲ್ಲಿ ಯುದ್ಧವನ್ನು ಸಂಪೂರ್ಣ ನಿರ್ಮೂಲ ಮಾಡುವದೂ ಸಾಧ್ಯವಾಗಲಿಕ್ಕಿಲ್ಲ. ಆದರೆ ನಮ್ಮ ಅಂತಾರಾಷ್ಟ್ರೀಯ ಸಂಬಂಧಗಳಲ್ಲಿ ನೈತಿಕ ಕಟ್ಟಳೆಗಳನ್ನು ಪಾಲಿಸದೆ ಹೋದರೆ ಜಗತ್ತಿಗೆ ಚಿರಶಾಂತಿ ದೊರೆಯಲಾರದು.

ವಿಶ್ವ ಸರಕಾರವೇ ಬೇಕು

ಜಗದ ಜಾಡ್ಯವು ಅಳಿಯಬೇಕಾದರೆ ವಿಶ್ವ ಸರಕಾರವೇ ಬೇಕು. ಒಂದಿಲ್ಲೊಂದು ದಿನ ಅದು ಬಂದೇ ಬರುವದು ಎಂದು ನನಗೆ ಮನದಟ್ಟಾಗಿದೆ. ಈ ಸರಕಾರದ ಘಟನೆಯನ್ನು ರಚಿಸುವದೂ ಅಷ್ಟೇನು ಕಠಿಣವಿಲ್ಲ. ಮಹಾ ಮಂಡಲದ ಯೋಜನೆಯನ್ನೇ ಸ್ವಲ್ಪ ವಿಸ್ತೃತಗೊಳಿಸಿದರೆ ಸಾಕು. ಈಗಿನ ಯುಕ್ತ ರಾಷ್ಟ್ರ ಸಂಸ್ಥೆಯ ಸ್ವರೂಪವನ್ನೇ ಬೆಳೆಸಿಕೊಳ್ಳಬಹುದು. ವಿಶ್ವ ಸರಕಾರದ ಮೂಲ ತತ್ವಗಳಿಗೆ ಅನುಗುಣವಾಗಿ ಪ್ರತಿ ರಾಷ್ಟ್ರಕ್ಕೂ ತನ್ನ ಪರಿಯಲ್ಲಿ ವಿಕಾಸ ಹೊಂದಲು ಅವಕಾಶ ಕೊಡಬೇಕು.

ಭೀತಿ ಬಯಲಾಗಬೇಕು

ಜಗತ್ತಿನಲ್ಲಿ ಪರಸ್ಪರರ ಬಗ್ಗೆ ಉಂಟಾಗಿರುವ ಭೀತಿ ಬಯಲಾಗಬೇಕು. ದ್ವೇಷ ಕ್ರೋಧ ಅಳಿದರೆ ಎಲ್ಲರೂ ಸುಖವಾಗಿ ಬಾಳಬಹುದು. ನ್ಯಾಯವಾದ ನೈತಿಕ ತಳಹದಿಯ ಮೇಲೆ ಎಲ್ಲ ರಾಷ್ಟ್ರಗಳೂ ಹೆಜ್ಜೆ ಹಾಕತೊಡಗಿದರೆ ಮಾನವ ಕುಲದ ಸುಖ ಸಾಧನೆಯ ಸಮಸ್ಯೆಯೇ ಬಿಟ್ಟು ಹೋಗುವದು. ಜಗವನ್ನು ಆವರಿಸಿದ ಕತ್ತಲೆ ಶಾಶ್ವತವಾಗಿ ಚದರುವದು ಲೋಕೋದ್ಧಾರದ ಕಾರ್ಯ ಸುಗಮವಾಗಿ ಸಾಗುವದು.

ಹೈದ್ರಾಬಾದ ಗಡಿಪ್ರದೇಶದ ಮೇಲೆ ನಿಜಾಮು ಪುಂಡರ ದಾಳಿ

ಕರ್ನಾಟಕದಲ್ಲಿ ನೀರಾವರಿ, ವಿದ್ಯುಚ್ಛಕ್ತಿಯ ಬಗ್ಗೆ ಸರಕಾರದ ಸ್ಪಷ್ಟೀಕರಣ

ಮುಂಬಯಿ ಶಾಸನಸಭೆಯ ಕಾರ್ಯಕಲಾಪ

ಮುಂಬಯಿ ಶಾಸನಸಭೆ ಮತ್ತು ವಿಧಿಮಂಡಳದ ಆಯವ್ಯಯ ಪತ್ರಿಕೆಯ ಅಧಿವೇಶನವು . ನೆಯ ತಾರೀಕಿನ ದಿನ ಮುಂದರಿಯಿತು. ಅಂದು ವಿಧಿಮಂಡಳದಲ್ಲಿ ಮುಂಬಯಿ ವರಿಷ್ಠನ್ಯಾಯಾಲಯ ಸ್ಥಾಪನೆಯ ತಿದ್ದುಪಡಿ ಮಸೂದೆ ಮತ್ತು ಹಿಂದೂ ದ್ವಿಪತ್ನೀವಿರೋಧ ಕಾಯದೆ (೧೯೪೬) ಯ ತಿದ್ದುಪಡಿ ಮಸೂದೆಗಳು ಸ್ವೀಕೃತವಾದುವು.

ಗಡಿಪ್ರದೇಶದ ಮೇಲೆ ದಾಳಿ

ಕಳೆದ ಕೆಲ ದಿನಗಳಲ್ಲಿ ಹೈದರಾಬಾದ ಗಡಿಗೆ ಹೊಂದಿದ ಮುಂಬಯಿ ಪ್ರಾಂತ್ಯದ ಹಳ್ಳಿಗಳ ಮೇಲೆ ದಾಳಿಯಾದುದು ನಿಜವೆಂದು ಗೃಹಮಂತ್ರಿಗಳು ಶಾಸನ ಸಭೆಯಲ್ಲಿ ಅವಸರದ ಒಂದು ಪ್ರಶ್ನೆಗೆ ಉತ್ತರ ಕೊಡುತ್ತ ೬ ನೇ ತಾರೀಕಿಗೆ ಹೇಳಿದರು. ಮೂರು ಹಳ್ಳಿಗಳ ಮೇಲೆ ದಾಳಿಯಾದದ್ದು ಈ ದಾಳಿಗಳಲ್ಲಿ ನಾಲ್ವರು ಮರಣ ಹೊಂದಿರುವರು ನಾಲ್ವರು ಗಾಯಗೊಂಡಿರುವರೆಂದೂ ಮಂತ್ರಿಗಳು ಹೇಳಿದರು. ಹೈದ್ರಾಬಾದ ನಾಗರಿಕರು ವಿಶೇಷತಃ ಇತ್ತೆಹಾದುಲ್ ಮುಸ್ಲಿಂ ಸಂಸ್ಥೆಯವರು ಮತ್ತು ಸಿದ್ಧೀಕದಳದವರು ದಾಳಿಗಾರರಾಗಿರುವರು ಸಶಸ್ತ್ರ ಪೋಲೀಸ ಮತ್ತು ಸೈನ್ಯಪಡೆಗಳು ವಾಯರಲೆಸ್ ಉಪಕರಣಗಳು ಮತ್ತು ಆಧುನಿಕ ಶಸ್ತ್ರಾಸ್ತ್ರಗಳೊಂದಿಗೆ ಹೈದ್ರಾಬಾದ ಗಡಿಗುಂಟ ಅನೇಕ ಸ್ಥಳಗಳಲ್ಲಿ [illegible]ಗಿದೆ. ಜನತೆಯ ವಿತ್ತ ಜೀವಿತಗಳ ರಕ್ಷಣೆಗಾಗಿ ಎಲ್ಲ ಬಗೆಯ ಉಪಾಯಗಳನ್ನು ಕೈಕೊಂಡಿದೆ ಎಂದೂ ಮಂತ್ರಿಗಳು ಹೇಳಿದರು.

ಹಿಂದುಳಿದ ವರ್ಗದವರಿಗೆ ಪ್ರಾಶಸ್ತ್ಯ

ಸರಕಾರೀ ನವಕರಿಗಳಲ್ಲಿ ಹರಿಜನರಿಗೆ ಪ್ರವೇಶ ದೊರೆವ ಬಗ್ಗೆ ಇರುವ ಅಡ್ಡಿ ಆತಂಕಗಳನ್ನು ತೆಗೆದುಹಾಕಲು ಮುಂಬಯಿ ಸರಕಾರವು ತನ್ನ ಕೈಲಾದಷ್ಟು ಮಾಡುವದು ಎಂದು ಮುಂಬಯಿ ಸರಕಾರದ ಮುಖ್ಯ ಮಂತ್ರಿಗಳು ಐದ ನೆಯ ತಾರೀಕಿನ ದಿನ ಆಶ್ವಾಸಿಸಿದರು.

ಆವಶ್ಯಕ ಅರ್ಹತೆಗಳಲ್ಲಿ ಕನಿಷ್ಠ ಅರ್ಹತೆಗಳಿರುವ ಹಿಂದುಳಿದ ವರ್ಗದ ಉಮೇದ್ವಾರರಿಗೆ ಸರಕಾರೀ ನವಕರಿಯಲ್ಲಿ ಪ್ರಾಶಸ್ತ್ಯ ಕೊಡಬೇಕೆಂಬುದೇ ಸರಕಾರದ ಧೋರಣವಾಗಿದೆ ಆದರೆ ಉಳಿದ ವರ್ಗದವರಿಗೂ ಸಂಖ್ಯಾನುಗುಣ ಪ್ರಾತಿನಿಧ್ಯ ಕೊಡಲು ಸರಕಾರ ಸಿದ್ಧವಿಲ್ಲ. ಇದು ಅವ್ಯವಹಾರ್ಯವಾದುದು ಎಲ್ಲ ವರ್ಗದವರಿಗೂ ಸಂಖ್ಯಾನುಗುಣ ನವಕರಿಗಳನ್ನು ಕೊಡಬೇಕೆಂದು ಗೊತ್ತುವಳಿಯಲ್ಲಿ ಹೇಳಿದ್ದಕ್ಕೆ ಒಪ್ಪಿದರೆ ಸರಕಾರಿ ಆಡಳಿತ ನಡೆಸಲು ಕುಶಲ ಜನರೆ ಸಿಕ್ಕದಂತಾಗುವದೆಂದು ಮುಖ್ಯ ಮಂತ್ರಿಗಳು ಸ್ಪಷ್ಟಪಡಿಸಿದರು. ಹೆಚ್ಚು ಹರಿಜನರನ್ನು ಸರಕಾರೀ ಹುದ್ದೆಗಳಿಗೆ ಆರಿಸಿಕೊಳ್ಳಲಾಗುವದೆಂದೂ ಹೇಳಿದರು. ಸೊಲ್ಲಾಪುರದ ಶ್ರೀ ಕಲ್ಯಾಣಿಯವರು ಈ ಆಶಯದ ಗೊತ್ತುವಳಿಯನ್ನು ತಂದಿದ್ದರು. ಎಲ್ಲ ಬಗೆಯ ವರ್ಣಭೇದಗಳನ್ನು ಮುಖ್ಯವಾಗಿ ಅಸ್ಪೃಶ್ಯತೆಯನ್ನು ನಿರ್ಮೂಲ ಮಾಡುವದೆ ಸರಕಾರದ ಉದ್ದೇಶವೆಂದೂ ಮಂತ್ರಿಗಳು ಸಾರಿದರು. ಜಿಲ್ಹೆಗಳಲ್ಲಿರುವ ಎಲ್ಲ ಪ್ರಾಂತೀಯ ರಸ್ತೆಗಳನ್ನು ಅವುಗಳನ್ನು ಸರಿಯಾಗಿರಿಸುವ ವೆಚ್ಚವನ್ನು ಲೋಕಲ್‌ಬೋರ್ಡಗಳಿಗೆ ಕೊಡುವ ವಿಚಾರ ಸರಕಾರಕ್ಕಿಲ್ಲವೆಂದು ಡಾ. ಗಿಲ್ಡರರು ಒಂದು ಪ್ರಶ್ನೆಗೆ ಉತ್ತರಿಸಿದರು.

ಪರೀಕ್ಷಾಪದ್ಧತಿ

[illegible]

ಯನ್ನು ಅದಷ್ಟು [illegible] ಮಂತ್ರಿಗಳು [illegible] ಭೂಳಾ ದೇಸಾಯರು ತಮ್ಮ ಗೊತ್ತುವಳಿಯನ್ನು ಹಿಂತೆಗೆದುಕೊಂಡರು ವಿದ್ಯಾರ್ಥಿಗಳ ಅರ್ಹತೆ ಮತ್ತು ಯೋಗ್ಯತೆಗಳನ್ನು ತಿಳಿದುಕೊಳ್ಳಲು ಬೇರೆ ವಿಧದ ಪರೀಕ್ಷೆ

ನಡೆಸಬೇಕೆಂದು ಶ್ರೀ. ಆರ್. ಎಸ್. ಹುಕ್ಕೇರಿಕರರು ಅಭಿಪ್ರಾಯಪಟ್ಟರು.

ಮುಂಬಯಿ ಔದ್ಯೋಗಿಕ ಸಂಬಂಧದ ಕಾಯಿದೆಯಲ್ಲಿ ಸಂಯುಕ್ತ ಸಮಿತಿ ಮತ್ತು ಕೂಲಿ ಮಂಡಳಿಗಳ ರಚನೆಯ ಏರ್ಪಾಡುಗಳುಳ್ಳ ಎರಡು ತಿದ್ದುಪಡಿಗಳು ಕೂಲಿಕಾರ ಮಂತ್ರಿಗಳಿಂದ ಮಂಡಿಸಲ್ಪಟ್ಟು ಸ್ವೀಕೃತವಾದವು [illegible]ಮಂತ್ರಿಗಳಾದ ಶ್ರೀ ಪಾಟೀಲ ಕಲ್ಲನಗೌಡರು ಮಸೂದೆಗೆ ಸೂಚಿಸಿದ ಶಾಬ್ದಿಕ ಬದಲಾವಣೆಗಳು ಸ್ವೀಕೃತವಾದವು.

ಮುಂಬಯಿ ಬಾಡಿಗೆ ಬಾನಾಸಿ ಮತ್ತು ವಸತಿ ಸೌಕರ್ಯದ ದರಗಳ ನಿಯಂತ್ರಣ ಕಾಯಿದೆ ೧೯೪೭ ತಿದ್ದುಪಡಿಯ ಮಸೂದೆಯೂ ಸ್ವೀಕೃತವಾಯಿತು. ಅನುಭವದಿಂದ ಕಂಡುಬಂದ ಕೆಲವು ಅಡ್ಡಿ ಆತಂಕಗಳನ್ನು ಬಗೆಹರಿಸಲು ಈ ತಿದ್ದುಪಡಿಗಳನ್ನು ಮಾಡಲಾಯಿತು.

ಜೋಗದ ವಿದ್ಯುಚ್ಛಕ್ತಿ

ಕಟ್ಟಡಗಳನ್ನು ವಶಪಡಿಸಿಕೊಳ್ಳುವ ಮತ್ತು ಮುಂಬಯಿ ಮನರಂಜನಕರ ಮಸೂದೆ ಸ್ವೀಕೃತವಾದವು. ಮನರಂಜನಕರದ ತಿದ್ದುಪಡಿ ಕಾಯಿದೆಯಲ್ಲಿ, ಪುಕ್ಕಟೆ ಪಾಸುಗಳನ್ನು ಇಂತಿಷ್ಟು ಪ್ರಮಾಣದಲ್ಲಿಯೆ ಕೊಡಬೇಕೆಂದು ನಿರ್ಬಂಧಿಸಲಾಗಿದೆ. ಸೆಕೆಂಡರಿ ಸ್ಕೂಲ ಸರ್ಟಿಫಿಕೇಟಪರೀಕ್ಷಾ ಮಂಡಳವನ್ನು ಮುಂಬಯಿ ಪ್ರಾಂತದಲ್ಲಿ ಸ್ಥಾಪಿಸಬೇಕೆನ್ನುವ ಮಸೂದೆಯನ್ನು ಪರಿಶೀಲಕ ಸಮಿತಿಗೆ ಒಪ್ಪಿಸಲಾಯಿತು.

ಕರ್ನಾಟಕಕ್ಕೆ ಜೋಗದ ವಿದ್ಯುಚ್ಛಕ್ತಿ ದೊರೆಯಬೇಕೆಂಬ ವಿಷಯದಲ್ಲಿ ಹುಬ್ಬಳ್ಳಿಯ ಕರ್ನಾಟಕ ವಣಿಕ್‌ಸಂಘವು ೧೯೪೭ ಎಪ್ರಿಲ ೨೩ಕ್ಕೆ ಪಾಸು ಮಾಡಿದ ಠರಾವಿನ ಪ್ರತಿ ಸರಕಾರಕ್ಕೆ ತಲುಪಿದೆ; ವಣಿಕ್‌ಸಂಘವು ವಾಡಿಕೆಯ ರೀತಿಯಲ್ಲಿ ಲಾಯಸೆನ್ಸಿಗಾಗಿ ಅರ್ಜಿ ಮಾಡಿಕೊಂಡರೆ ಅದರ ವಿಚಾರ ಮಾಡಲಾಗುವದು ಎಂದು ಅವರಿಗೆ ತಿಳಿಸಲಾಗಿದೆಯೆಂದು ಶ್ರೀ ಅಂದಾನೆಪ್ಪ ದೊಡ್ಡಮೇಟಿಯವರು ಕೇಳಿದ ಪ್ರಶ್ನೆಗೆ ಉತ್ತರ ಕೊಡುತ್ತ ಮಂತ್ರಿವರ್ಯ ಡಾ. ಗಿಲ್ಡರರು ಉತ್ತರಿಸಿದರು.

ಬರುವ ವರ್ಷದಿಂದ ಮಾಧ್ಯಮಿಕ ಶಾಲೆಗಳಲ್ಲಿ ಒಂದನೇ ಇಯತ್ತೆಯಲ್ಲಿ ಇಂಗ್ಲಿಶ ಕಲಿಸುವದನ್ನು ನಿಲ್ಲಿಸಲಾಗುವದು ಮುಂದೆರಡು ವರ್ಷಗಳಲ್ಲಿ ೨ ನೇ ೩ ನೇ ಇಯತ್ತೆಗಳಲ್ಲಿ ಇಂಗ್ಲಿಶ ಇಲ್ಲದಂತಾಗುವದು. ಹೀಗಾಗಿ ಮಾಧ್ಯಮಿಕ ಶಿಕ್ಷಣವು ನಾಲ್ಕು ವರ್ಷದ್ದಾಗುವದೆಂದು ಶಿಕ್ಷಣ ಮಂತ್ರಿ ಶ್ರೀ ಖೇರರು ಹೇಳಿದರು.

ದಡ್ಡಿ ಯೋಜನೆ

ದಡ್ಡಿ ಯೋಜನೆಯಿಂದ ೪೫೦೦೦ ಲಕ್ಷ ಘನ ಫೂಟು ನೀರು ನಿಲ್ಲುವದು ಘಟಪ್ರಭಾನದಿಯ ಎರಡೂ ದಂಡೆಗಳಲ್ಲಿ ಕಾಲುವೆ ತೆಗೆಯಬೇಕಾಗುತ್ತದೆ. ಇದರಿಂದ ಕೊಲ್ಹಾಪುರ ಸಂಸ್ಥಾನದ ಬಹಳ ಭೂಮಿ ನೀರಲ್ಲಿ ಮುಳುಗುತ್ತದೆ ಸಂಸ್ಥಾನ ಸರಕಾರದ ಕೂಡ ಈ ಬಗೆಗೆ ವಿಚಾರವಿನಿಮಯ ನಡೆದಿದೆ. ಬಲದಂಡೆಯ ಕಾಲುವೆಯ ಸರ್ವೆ ಈಗ ನಡೆದಿದ್ದು ಉಳಿದೆಲ್ಲ ಕಾರ್ಯ ಮುಗಿದಂತಾಗಿದೆ. ಈ ಯೋಜನೆಯ ಕಾರ್ಯ ಪ್ರಾರಂಭವಾದ ಎಂಟು ವರ್ಷಗಳಲ್ಲಿ ಮುಗಿಯಬಹುದು ಎಂದು ಮಂತ್ರಿವರ್ಯ ಗಿಲ್ಡರರು ಶ್ರೀ. ಅಂದಾನೆಪ್ಪನವರ ಪ್ರಶ್ನೆಗೆ ಉತ್ತರ ಕೊಡುತ್ತ ಹೇಳಿದರು. ಕನ್ನಡಿಗರು ಇದರ ಬಗ್ಗೆ ಆತುರರಾಗಿರುವರು ಸರಕಾರಕ್ಕೆ ಗೊತ್ತಿದೆ, ಕೆಲವರು ಅದನ್ನು ವಿರೋಧಿಸುವದುಂಟು ಆದರೆ ವಿಶಿಷ್ಟ [illegible] ಗೊತ್ತಿಲ್ಲ. [illegible] ಮುಗಿದ ಬಳಿಕ [illegible] ಹೊರಡಿಸಲಾಗುವ [illegible] ಹೇಳಿದರು.

ಕಾಮಶಿಕ್ಷಣ

(Sex Education)

ಈ ಕೆಳಗಿನ ವಿಳಾಸಕ್ಕೆ ರೂ. ೧—೪—೦ ನ್ನು ಮನಿಆರ್ಡರು ಮಾಡಿದರೆ ಪುಸ್ತಕವನ್ನು ರಜಿಸ್ಟರ ಮಾಡಿ ಕಳುಹಿಸಲಾಗುವದು. ವ್ಹಿ. ಪಿ ಖಂಡಿತ ಕಳುಹಿಸುವದಿಲ್ಲ.

ಸಾಧನ ಪ್ರಕಟನಾಲಯ

ದೊಡ್ಡಬಳ್ಳಾಪುರ — ಬೆಂಗಳೂರ ಜಿಲ್ಲೆ.


ಮೈಸೂರು ಘಟನಾ ಸಮಿತಿ ಪ್ರಾರಂಭ

ಶ್ರೀ. ತುಮಕೂರು ಸುಬ್ರಹ್ಮಣ್ಯಂ ಅವರ ಅಧ್ಯಕ್ಷತೆ

ಮೈಸೂರು ಘಟನಾ ಸಮಿತಿಯ ಪ್ರಾರಂಭ ಮಹೋತ್ಸವವು ೭ನೆಯ ತಾರೀಕಿನ ದಿವಸ ಬೆಂಗಳೂರಿನಲ್ಲಿ ನಡೆಯಿತು ಮುಖ್ಯ ಮಂತ್ರಿಗಳಾಗಿರುವ ಶ್ರೀ. ಕೆ. ಚಂಗಲರಾಯ ರೆಡ್ಡಿಯವರು ತಾತ್ಕಾಲಿಕ ಅಧ್ಯಕ್ಷರಾಗಿ ಕಾರ್ಯಕಲಾಪಗಳನ್ನು ಸಾಗಿಸಿದರು. ಜನಗಣಮನ ಹಾಗು ವಂದೇ ಮಾತರಂ ಗೀತಗಳಿಂದ ಕಾರ್ಯಪ್ರಾರಂಭವಾಯಿತು. ಮೈಸೂರು ಮಹಾರಾಜರಿಂದ ಬಂದ ಸಂದೇಶವನ್ನು ಶ್ರೀ. ರೆಡ್ಡಿಯವರು ಓದಿ [illegible].

ಮೈಸೂರಿನ ಘಟನಾತ್ಮಕ ಸ್ಥಾನಕ್ಕನುಗುಣವಾಗುವಂಥ ರಾಜ್ಯ ಘಟನೆಯನ್ನು ಈ ಘಟನಾ ಸಮಿತಿಯು ರಚಿಸುವದೆಂದು ನನಗೆ ವಿಶ್ವಾಸವಿದೆ. ಎಲ್ಲರಿಗೂ ಸಮಾನ ಸುಖ ಸೌಕರ್ಯಗಳನ್ನು ಈ ರಾಜ್ಯಘಟನೆಯು ದಯಪಾಲಿಸಲಿ. ನನ್ನ ಪ್ರಜೆಗಳೆಲ್ಲರ ಕಲ್ಯಾಣವೇ ಈ ರಾಜ್ಯಘಟನೆಯ ಮುಖ್ಯ ಧ್ಯೇಯವಾಗಿರಲಿ ಎಂದು ಮಹಾರಾಜರು ತಮ್ಮ ಸಂದೇಶದಲ್ಲಿ ಹೇಳಿರುವದಲ್ಲದೆ ಘಟನಾ ಸಮಿತಿಯ ಕಾರ್ಯಕಲಾಪಗಳಿಂದ ಮೈಸೂರಿಗೆ ಭಾರತದಲ್ಲಿ ಒಂದು ಗೌರವಸ್ಥಾನ ಸಿಗಲೆಂದು ಹಾರೈಸಿದ್ದಾರೆ.

ಭಾರತದ ಗವರ್ನರ ಜನರಲ್‌ರಾದ ಲಾರ್ಡ ಮೌಂಟಬ್ಯಾಟನ್, ಮುಖ್ಯ ಮಂತ್ರಿ ಪಂಡಿತ ಜವಾಹರಲಾಲ, ಸರದಾರ ಪಟೇಲ ಮತ್ತು ಇತರ ಮಂತ್ರಿಗಳಿಂದಲೂ ಭಾರತದ ವಿಶ್ವವಿದ್ಯಾಲಯಗಳ ಉಪ ಕುಲಪತಿಗಳಿಂದಲೂ ಶ್ರೀ. ದಿವಾಕರ ರಂಗರಾಯರಿಂದಲೂ ಘಟನಾ ಸಮಿತಿಗೆ ಯಶಸ್ಸನ್ನು ಕೋರುವ ಸಂದೇಶಗಳು ಬಂದಿವೆ.



ಕಾಂಗ್ರೆಸ ಪಕ್ಷದ ನಾಯಕರಾದ ಶ್ರೀ ಕೆ.ಸಿ. ರೆಡ್ಡಿ


ತಾತ್ಕಾಲಿಕ ಅಧ್ಯಕ್ಷರು ತಮ್ಮ ಭಾಷಣವನ್ನು ಸುರುಮಾಡುವ ಮೊದಲು ಗಾಂಧೀಜಿಯವರ ನಿಧನದ ಬಗ್ಗೆ ದುಃಖಸೂಚಕ ಗೊತ್ತುವಳಿ ಸ್ವೀಕೃತವಾಯಿತು. ಕೆ. ಹನುಮಂತಯ್ಯನವರು ಇದನ್ನು ಮಂಡಿಸಿದರು ಶ್ರೀ. ನಿಜಲಿಂಗಪ್ಪನವರು ಅದನ್ನು ಅನುಮೋದಿಸಿದರು ಶ್ರೀ. ಚೆನ್ನಿಗರಾಮಯ [illegible] ರಾಮಚಂದ್ರರಾಯರು ಈ ಗೊತ್ತುವಳಿಯನ್ನು ಅನುಮೋದಿಸಿ ಮಾತಾಡುತ್ತ ಗಾಂಧೀಜಿಯ ಗುಣಗಾನ ಮಾಡಿದರು. ತಾತ್ಕಾಲಿಕ ಅಧ್ಯಕ್ಷರಾದ ಶ್ರೀ. ರೆಡ್ಡಿಯವರು ಮೈಸೂರಿನ ರಾಜ್ಯಘಟನೆಯು ಭಾರತದ ರಾಜ್ಯಘಟನೆಯನ್ನು ಹೊಂದಿಕೊಂಡಿರಬೇಕು, ಘಟನಾತ್ಮಕ ಅರಸೊತ್ತಿಗೆಗೆ ಅದು ಅವಕಾಶ ಕೊಡಬೇಕು ವ್ಯಾಪಕವಾದ ರಾಜ್ಯಘಟನೆಯನ್ನು ತಯಾರಿಸುವದು ಅವಶ್ಯ[illegible] ಪರಿಸ್ಥಿತಿಗೆ ತಕ್ಕಂತೆ ಬದಲು [illegible] ಅದರಲ್ಲಿ ಅನುಕೂಲತೆ ಇರಬೇಕು [illegible]ಕರಣವೇ ರಾಜ್ಯಘಟನೆಗೆ ಆಧಾರವಾ[illegible] [illegible]ಗಳಿಗೇ ಕನಿಷ್ಠ ಅಧಿ[illegible]

[illegible]

ಸುಬ್ರಹ್ಮಣ್ಯಂ [illegible]

[illegible]

ಎದುರಿಸಬೇಕಾಗಿರುವ ಅನೇಕ ಮಹತ್ವದ ಸಮಸ್ಯೆಗಳಲ್ಲಿ ಕರ್ನಾಟಕ ಏಕೀಕರಣವೂ ಒಂದಾಗಿದೆ. ಮೈಸೂರು ಪ್ರಜೆಗಳ ಆಸೆ [illegible]



ಹೊಣೆಗಾರ ಸರಕಾರವನ್ನು ದಯಪಾಲಿಸಿದ ಮೈಸೂರಿನ ಮಹಾಪ್ರಭುಗಳು

ಪೂರೈಸುವಂತೆ ರಾಜ್ಯಘಟನೆಯನ್ನು ರಚಿಸಬೇಕು. ಮೈಸೂರ ಮಹಾರಾಜರು ಘಟನಾ ಸಮಿತಿ ಅಧಿಕಾರಿಗಳಿಗೆ ಉಳಿಯುವದೆ ಪ್ರಜೆಗಳ ಹಿತದ ದೃಷ್ಟಿಯಿಂದ ಇಷ್ಟವಾಗಿದೆ ಎಂದು ಮುಂತಾಗಿ ಅವರು ತಮ್ಮ ಭಾಷಣದಲ್ಲಿ ಹೇಳಿದರು.

ಅನಂತರ ಹೊಣೆಗಾರ ಸರಕಾರಕ್ಕಾಗಿ ಪ್ರಯತ್ನಿಸಿದವರನ್ನೆಲ್ಲ ಅಭಿನಂದಿಸುವ ಗೊತ್ತುವಳಿ ಸ್ವೀಕೃತವಾಯಿತು. ಘಟನಾ ಸಮಿತಿಯ ಕಾರ್ಯಪದ್ಧತಿಯನ್ನು ನಿರ್ಧರಿಸಲು ೮ ಜನರದೊಂದು ಸಮಿತಿಯನ್ನು ನೇಮಿಸಲಾಯಿತು. ನಂತರ ಅಧಿವೇಶನ ಎಪ್ರಿಲ ೧೫ ರವರೆಗೆ ಮುಂದರಿಯಿತು.

೬ ನೇ ತಾರೀಕಿನ ದಿನ ಕಾಂಗ್ರೆಸ ಪಕ್ಷದ [illegible] ಸಭೆ ಶ್ರೀ ಎಚ್. ಸಿದ್ಧಯ್ಯನವರ ಅಧ್ಯಕ್ಷತೆಯಲ್ಲಿ ಸೇರಿ ಶ್ರೀ ಕೆ. ಸಿ. ರೆಡ್ಡಿ [illegible] ಪಕ್ಷದ ಧುರೀಣರು, ಕೆ. ಹನುಮಂ[illegible] ಅವರು ಉಪಧುರೀಣರು ಎ. ಜಿ. ರಾಮ[illegible]ದಾಸ ಮತ್ತು ಎಚ್. ಕೆ. ವೀರಣ್ಣಗೌಡರು ಕಾರ್ಯದರ್ಶಿಗಳು ಮತ್ತು ಕೆ. ಆರ್. ಮೂರ್ತಿರಾವ ಹಾಗು ಎಂ. ವಿ. ಕೃಷ್ಣಪ್ಪನವರು ಪ್ರತೋದರು [illegible].

ಹಿಂದುಸ್ತಾನ ಸರಕಾರಕ್ಕೆ ನೊಗಲಾಯಿಯ ಉತ್ತರ

ಹೈದರಾಬಾದದಲ್ಲಿ ಹಿಂದುಸ್ತಾನ ಸರಕಾರದ ರಾಜಕೀಯ ಪ್ರತಿನಿಧಿಗಳಾದ ಶ್ರೀ. ಕನ್ಹಯ್ಯಾಲಾಲ ಮುನಸಿಯವರು ಯಥಾಸ್ಥಿತಿ ಒಪ್ಪಂದ ಭಂಗದ ಬಗ್ಗೆ ನಿಜಾಮ ಸರಕಾರದವರಿಗೆ ಬರೆದಿದ್ದರ ಸಂಬಂಧದಲ್ಲಿ ನಿಜಾಮ ಸರಕಾರದವರು ಕೆಳಗಿನಂತೆ ಉತ್ತರ ಕೊಟ್ಟಿರುವರೆಂದು ತಿಳಿಯುತ್ತದೆ. ೧) ಪಾಕಿಸ್ತಾನಕ್ಕೆ ವರ್ಗಾಯಿಸಲಾದ ಸರಕಾರೀ ಸಾಲ ಪತ್ರಗಳನ್ನು ಮುರಿಸಬಾರದೆಂದು ಪಾಕಿಸ್ತಾನಕ್ಕೆ ಬಿನ್ನವಿಸಿ, ಭಾರತದ ಬಗ್ಗೆ ತಮ್ಮ ಸದಿಚ್ಛೆಯನ್ನು ವ್ಯಕ್ತಮಾಡಿದೆ ೨) ಭಾರತ ಸರಕಾರದ ನಾಣ್ಯಬದಲಾವಣೆಯ ನಿರ್ಬಂಧಕ್ಕೆ ಸಂಬಂಧಿಸಿದ ಆಜ್ಞೆಯಲ್ಲಿ ತಿದ್ದುಪಡಿ ಮಾಡಿ ಹೊರಗಿನಿಂದ ಬರುವ ಪ್ರವಾಸಿಕರು ಹೈದರಾಬಾದ ಸಂಸ್ಥಾನದಲ್ಲಿ ಅವುಗಳನ್ನು ಉಪಯೋಗಿಸಬಹುದೆಂಬ ಸೌಕರ್ಯ ಒದಗಿಸಿದೆ. ೩) ಸಂಸ್ಥಾನದಿಂದ ನೆಲಗಡಲೆಯನ್ನು ಹೊರಗೆ ಕಳಿಸಬಾರದೆಂಬ ನಿರ್ಬಂಧವನ್ನು ಹಿಂತೆಗೆದುಕೊಳ್ಳಲಾಗಿದೆ.

[illegible] ವಿಧ್ವಂಸಕ ಚಟುವಟಿಕೆಗಳು [illegible] ಪ್ರಾವಿನ್ಸ್‌ಗೆ ಬಂದಿತು [illegible] ನಿಜಾಮ ಸರಕಾರಗಳಲ್ಲಿ ಮೈತ್ರಿಯ ನೆಲಸಿ [illegible] ಘಟನೆಗಳು ಕಮ್ಯುನಿಸ್ಟರ ಹಾವಳಿಯು [illegible]

[illegible] ತನ್ನ ಪಕ್ಕಕ್ಕೆ ಪಾಸೇ ಕರೆ[illegible] ದೆ ಆದಗಿ ಹೋಗುವದು.

[illegible]

[illegible] ಒಪ್ಪಿಸಲ್ಪಟ್ಟ [illegible] ಮಧ್ಯಸ್ಥಿಕೆಗೆ ಒಪ್ಪಿಸಬೇಕೆಂ[illegible] [illegible]ತ್ತದೆ.

ದಿಲ್ಲಿಯಲ್ಲಿ ಕರ್ನಾಟಕ ವ್ಯಾಪಾರಸ್ಥರ ಪರಿಷತ್ತು

ನೊಕದಿಲ್ಲಿಯಲ್ಲಿ ಇದೇ ೧ನೇ ತಾ. ನ ದಿನ ಮೈಸೂರ ಚೇಂಬರ್ ಸಂಘದ ಅಧ್ಯಕ್ಷರಾದ ಶ್ರೀ. ಜಿ. ಎ. ಆಚಾರ್ಯರ ಅಧ್ಯಕ್ಷತೆಯಲ್ಲಿ ಕರ್ನಾಟಕ ವ್ಯಾಪಾರಸ್ಥರ ಪ್ರಥಮ ಪರಿಷತ್ತು ನೆರೆಯಿತು. ಈ ಪರಿಷತ್ತಿನ ಉದ್ಘಾಟನವನ್ನು ಘಟನಾ ಸಮಿತಿಯ ಸದಸ್ಯರಾದ ಶ್ರೀ. ರಂಗರಾವ ದಿವಾಕರರು ನೆರವೇರಿಸಿದರು. ಆಗ ಅವರು, ವ್ಯಾಪಾರಸ್ಥರೆಲ್ಲ ಒಕ್ಕಟ್ಟಿಗೆ ಕಳೆದು ಏಕೀಕೃತ ಕರ್ನಾಟಕದ ಉನ್ನತಿಗೆ ದುಡಿಯುವದು ಅವಶ್ಯವೆಂದೂ ಈ ಪರಿಷತ್ತಿನಲ್ಲಿ ಅದರ ವಿಚಾರವಾಗುವ ಸಂಭವಿಗೆ ಸಂತೋಷವೂ ಹೇಳಿದರು.

ಪರಿಷತ್ತಿನ ಸ್ವಾಗತಾಧ್ಯಕ್ಷರಾದ ಶ್ರೀ. ಎಸ್. ಆರ್. ಎಸ್. ರಾಘವನ್ನರು ದಿಲ್ಲಿಯ ಕನ್ನಡಿಗರ ಪರವಾಗಿ ಪರಿಷತ್ತಿನ ಸದಸ್ಯರನ್ನೆಲ್ಲ ಸ್ವಾಗತಿಸಿದರು.

ಸ್ವಾಗತಾಧ್ಯಕ್ಷರ ಭಾಷಣ

ಪ್ರತಿ ವರ್ಷ ಹಿಂದುಸ್ತಾನ ಚೇಂಬರ್ ಸಂಘಗಳ ಮಹಾ ಮಂಡಲದ ಸಭೆಗೆ ಕರ್ನಾಟಕದ ಪ್ರತಿನಿಧಿಗಳು ಬರುತ್ತಿದ್ದರು. ಆದರೆ ಈ ರೀತಿ ಕರ್ನಾಟಕ ವ್ಯಾಪಾರಸ್ಥರ ಪರಿಷತ್ತು ರಾಜಧಾನಿಯಲ್ಲಿ ನಡೆದಿದ್ದು ಇದೇ ಮೊದಲನೇ ಸಲ. ಅವಸರದಿಂದ ಪರಿಷತ್ತು ಸೇರುತ್ತಿರುವ ಕಾರಣ ಅನೇಕ ನ್ಯೂನತೆಗಳಿರುವದು ಸಹಜ. ಅದಕ್ಕಾಗಿ ಮನ್ನಿಸ ಬೇಡುವೆ. ಮತ್ತು ಮುಂದಿನ ವರ್ಷದಿಂದ ಇದಕ್ಕಿಂತ ಹೆಚ್ಚು ಪ್ರತಿನಿಧಿಗಳು ಆಗಮಿಸುವರೆಂದು ಆಶಿಸುವೆ. ಕರ್ನಾಟಕದ ಏಕೀಕರಣವಿಲ್ಲದೆ ಔದ್ಯೋಗಿಕ ಅಥವಾ ವಾಣಿಜ್ಯ ವಿಷಯಕ ಉನ್ನತಿ ಸಾಧ್ಯವಿಲ್ಲವೆಂಬ ಮಾತು ಎಲ್ಲರಿಗೂ ಮನದಟ್ಟಾಗಿ ಹೋಗಿದೆ. ಈ ಏಕೀಕರಣಕ್ಕಾಗಿ ನಾವು ಪ್ರಯತ್ನಿಸಲೇಬೇಕು.

ದಿಲ್ಲಿ ಕರ್ನಾಟಕ ಸಂಘವು ಹೋದ ವರ್ಷ ನೇ ತಿಂಗಳಲ್ಲಿ ಸ್ಥಾಪಿತವಾಗಿದೆ. ದಿವಂಗತ ಮುಮ್ಮಡಿ ಕೃಷ್ಣರಾಜರ ಹೆಸರಿನಲ್ಲಿ ಒಂದು ವಾಚನಾಲಯ ಒಂದು ಪುಸ್ತಕಾಲಯ ತೆರೆವ ವಿಚಾರವಿದೆ. ಕನ್ನಡ ನಾಡಿನ ವರ್ತಕರು ಇದಕ್ಕೆ ತೊಡುಗೈಯಿಂದ ಧನ ಸಹಾಯ ಮಾಡಬೇಕೆಂದು ಬೇಡುತ್ತೇನೆ.

ಇಂದು ಪರಿಷತ್ತಿನ ಉದ್ಘಾಟನೆಗೆ ಶ್ರೀ ದಿವಾಕರರು ದೊರೆತುದು ನಮ್ಮ ಭಾಗ್ಯ. ಅವರು ೩೦ ವರ್ಷದಿಂದ ದೇಶಕ್ಕಾಗಿ ಹೋರಾಡಿದ್ದಾರೆ. ಅವರ ತ್ಯಾಗವೆಲ್ಲ ಅಪಾರವಾದುದು. ಅದರಂತೆ ಇಂದಿನ ಪರಿಷತ್ತಿನ ಅಧ್ಯಕ್ಷರಾಗಿರುವ ಶ್ರೀ ಜಿ. ಎ. ಆಚಾರ್ಯರು ಸ್ವಯಂ ಪ್ರತಿಭೆಯಿಂದಲೇ ಮುಂದೆ ಬಂದವರು ಅವರು ಗಾಂಧಿಯವರ ತತ್ವದಂತೆ ಜೀವನ ನಡೆಸಿದಂಥವರು. ಇವರು ವಿಪುಲ ಧನ ಅರ್ಜಿಸಿದ್ದರೂ ಸಂಚಿತ ಧನಕ್ಕೆ ವಿಶ್ವಸ್ತರಂತೆಯೇ ಇದ್ದುಕೊಂಡಿದ್ದಾರೆ. ಒಂದು ಕೈಯಿಂದ ಗಳಿಸಿದ್ದನ್ನು ಇನ್ನೊಂದರಿಂದ ದಾನಮಾಡುತ್ತಿದ್ದಾರೆ. ಇಂತಹ ತ್ಯಾಗಿಗಳು ಅಧ್ಯಕ್ಷರಾಗಿರುವದು ನಮ್ಮೆಲ್ಲರ ಭಾಗ್ಯವಲ್ಲದೆ ಮತ್ತೇನು?

ಅಧ್ಯಕ್ಷರ ಭಾಷಣ

ನಾನು ಈ ಪರಿಷತ್ತಿನ ಅಧ್ಯಕ್ಷ ಸ್ಥಾನಕ್ಕೆ ಅರ್ಹನಲ್ಲ. ಆದರೂ ಕರ್ನಾಟಕದಲ್ಲಿ ಹುಟ್ಟಿದೂ ಹಾಗೂ ಅನೇಕ ವರ್ಷಗಳಿಂದ ಕಾರ್ಯ ಮಾಡುತ್ತ ಬಂದುದೂ ಆದ ಮೈಸೂರು ಚೇಂಬರ್ ಸಂಘಕ್ಕೆ ಗೌರವ ಸಲ್ಲಿಸುವ ದೃಷ್ಟಿಯಿಂದ ನೀವು ನನಗೆ ಈ ಸ್ಥಾನ ಕೊಟ್ಟಿರುವಿರಾಗಿ ಭಾವಿಸುವೆ. ಇರಲಿ. ಕರ್ನಾಟಕದ ವಾಣಿಜ್ಯ ಸಮಸ್ಯೆಗಳು ಅನೇಕವಾಗಿವೆ. ಅವನ್ನು ಸುಲಭವಾಗಿ ಬಿಡಿಸಬೇಕಾದರೆ ಕರ್ನಾಟಕ ಏಕೀಕರಣ ಅವಶ್ಯ. ಜನರ ಜೀವನ ಮಟ್ಟ ಸುಧಾರಿಸಬೇಕಾದರೆ ಅರ್ಥಿಕ ಔದ್ಯೋಗಿಕ ಪ್ರಗತಿಯಾಗಲೇಬೇಕು ಮತ್ತು ಅನುಷಂಗಿಕವಾಗಿ ವಾಣಿಜ್ಯವೂ ಬೆಳೆಯಬೇಕು. ಈ ಮಾತಿಗೆ ಒಂದೆರಡು ಉದಾಹರಣೆ ಕೊಡುವದು ಉಚಿತವೆಂದು ತೋರುತ್ತದೆ.

ಮೈಸೂರು ಸಂಸ್ಥಾನದಲ್ಲಿ ಔದ್ಯೋಗಿಕ ಪ್ರಗತಿ ಸಾಧಿಸಿದ್ದರೂ ಉತ್ತರ ಕರ್ನಾಟಕವು ಈ ದೃಷ್ಟಿಯಿಂದ ಬಹಳ ಹಿಂದೆ ಉಳಿದಿದೆ. ಉತ್ತರ ಕರ್ನಾಟಕದ ನೈಸರ್ಗಿಕ ಸಂಪತ್ತಿಗೇನು ಕೊರತೆ ಇಲ್ಲ. ಆದರೂ ಇಲ್ಲಿ ಅರ್ಥಿಕ ಔದ್ಯೋಗಿಕ ಪ್ರಗತಿಗಳಾಗದಿರಲು ಈ ಭಾಗವು ಮುಂಬಯಿ, ಮದ್ರಾಸ, ಮತ್ತು ಚಿಕ್ಕಪುಟ್ಟ ಸಂಸ್ಥಾನಗಳಲ್ಲಿ ವಿಭಾಗಿಸಿ ಹೋದುದೇ ಕಾರಣವೆಂಬುದು ಸ್ವಯಂ ಸ್ಪಷ್ಟವಾಗಿದೆ. ಕರ್ನಾಟಕವು ಒಂದೇ ಆಡಳಿತಕ್ಕೆ ಒಳಪಟ್ಟಿದ್ದರೆ ತುಂಗಭದ್ರಾ ಅಣೆಕಟ್ಟು ಅದೆಂದೋ ಆಗಿ ಬಳ್ಳಾರಿ ಜಿಲ್ಲೆಯು ಫಲವತ್ತಾದ ನೀರಾವರಿ ಪ್ರದೇಶವಾಗುತ್ತಿತ್ತು. ವಿಜಾಪುರ ಜಿಲ್ಲೆಯು ನಿರಂತರ ಬರಗಾಲದ ಪೀಡೆಗಳೂ ಇದೇ ಕಾರಣವು. ಜೋಗ ವಿದ್ಯುತ್ ನಿರ್ಮಾಣ ಯೋಜನೆಯು ೨೦—೩೦ ವರ್ಷ ಮೊದಲೇ ಸಾಧಿಸಬಹುದಿತ್ತು. ಕರ್ನಾಟಕದಲ್ಲಿ ಖನಿಜ ಸಂಪತ್ತು, ಅರಣ್ಯ ಸಂಪತ್ತು, ವಿದ್ಯುತ್ ನಿರ್ಮಾಣಸೌಕರ್ಯ ಇವೆಲ್ಲ ಇದ್ದರೂ ನಮಗೆ ಬಡತನ ಬಿಡಲೊಲ್ಲದು. ಅದು ಏಕೆ? ಜವಳಿ ಗಿರಣಿ, ಉಕ್ಕಿನ ಗಿರಣಿ, ಪ್ಲಾಯವುಡ್ ಕಾರಖಾನೆ, ಕಾಗದ ಕಾರಖಾನೆ ಇವೇ ಮೊದಲಾದ ವಿವಿಧ ಕಾರಖಾನೆಗಳನ್ನು ಸ್ಥಾಪಿಸಲು ಕರ್ನಾಟಕಕ್ಕೆ ಸಾಧ್ಯವಿದೆ. ನಮ್ಮ ಕೊಡಗು ಹಿಂದುಸ್ಥಾನದ ಸ್ವಿತ್ಸರ್ಲಂಡ ಆಗಬಹುದಾಗಿದೆ. ಇದೊಂದೂ ಆಗದಿರುವ ಮುಖ್ಯ ಕಾರಣವೆಂದರೆ ವಿಚ್ಛಿನ್ನ ಕರ್ನಾಟಕವಲ್ಲದೆ ಇನ್ನೇನು? ಇದು ತಿಳಿದ ಮೇಲೆ ಏಕೀಕೃತ ಸ್ವತಂತ್ರ ಕರ್ನಾಟಕಕ್ಕಾಗಿ ನಾವು ಯತ್ನಿಸದಿರುವದೆ? ಅದು ಶೀಘ್ರ ಏಕೀಕೃತವಾಗುವ ಹಾಗೆ ಸರ್ವರೂ ಸರ್ವ ಪ್ರಯತ್ನ ಮಾಡುವಾ.

ಕರ್ನಾಟಕದ ಆರ್ಥಿಕ ಅಭಿವೃದ್ಧಿಗೆ ಒಂದು ತಜ್ಞ ಸಮಿತಿಯನ್ನು ರಚಿಸಬೇಕು. ಕರ್ನಾಟಕಕ್ಕೆ ಪಶ್ಚಿಮ ಕರಾವಳಿಯಲ್ಲಿ ಒಂದು ಬಂದರದ ಅವಶ್ಯಕತೆ ಬಹಳವಾಗಿದೆ. ಈ ಬಗ್ಗೆ ಹಿಂದುಸ್ತಾನ ಸರಕಾರವು ಒಂದು ಸಮಿತಿ ನೇಮಿಸಿದ್ದು ಸಂತೋಷದ ವಿಷಯ. ಭಟಕಳವೇ ಬಂದರವಾಗಬೇಕೆಂದು ಈ ಸಮಿತಿಯು ತೀರ್ಮಾನಿಸಿದರೆ ಅದು ಒಳ್ಳೆಯದು.

ಕಳೆದ ೩೦ ವರ್ಷಗಳಿಂದಲೂ ಚಾಮರಾಜನಗರ ಸತ್ಯಮಂಗಲಂ ರೇಲ್ವೆ ವಿಚಾರವನ್ನು ಮುಂದೂಡುತ್ತ ಸಾಗಿದ್ದು ಒಂದು ದೊಡ್ಡ ಆತಂಕವೇ. ಈ ರೇಲ್ವೆ ಬೇಗ ಅಸ್ತಿತ್ವಕ್ಕೆ ಬಂದರೆ ಕರ್ನಾಟಕದ ವ್ಯಾಪಾರವಿನ್ನೂ ಅಭಿವೃದ್ಧಿಯಾಗುವದು.

ಸ್ವೀಕೃತ ಗೊತ್ತುವಳಿಗಳು!

೧ ಹೊಸಘಟನೆಯೊಡನೆಯೇ ಅಖಂಡ ಕರ್ನಾಟಕ ಪ್ರಾಂತರಚನೆಯಾಗಬೇಕು.

೨ ಮುಂಬಯಿ ಸರಕಾರವು ಉತ್ತರ ಕನ್ನಡ ಜಿಲ್ಲೆಯ ಅರಣ್ಯ ಸಂಪತ್ತನ್ನು ಪರಿಶೀಲಿಸುವ ಸಮಿತಿಗೆ ಸ್ವಾಗತವಿದೆ. ಈ ಸಮಿತಿಯವರು ಕಾಗದ, ರೇಶಿಮೆ ಮೊದಲಾದ ಉದ್ಯೋಗಗಳ ಬಗ್ಗೆಯೂ ವಿಚಾರ ಮಾಡಬೇಕೆಂಬ ಸೂಚನೆ.

೩ ಪಶ್ಚಿಮ ಕರಾವಳಿಯಲ್ಲಿ ಕರ್ನಾಟಕ ಕ್ಕೊಂದು ಬಂದರ ಬೇಕು. ಭಟಕಳ ಬಗ್ಗೆ ಈ ಸಭೆ ಶಿಫಾರಸು ಮಾಡುತ್ತದೆ.

೪ ಹಿಂದುಸ್ತಾನ ಸರಕಾರದವರು ಕರ್ನಾಟಕದ ಆರ್ಥಿಕ ಪರಿಶೀಲನೆಗೆ ಒಂದು ಸಮಿತಿ ನೇಮಿಸಬೇಕೆಂಬ ಸೂಚನೆ.

೫ ಕರ್ನಾಟಕ, ಮಲಬಾರ ಮತ್ತು ದಕ್ಷಿಣ ಹಿಂದುಸ್ತಾನಗಳ ಸಾರಿಗೆ ಸೌಕರ್ಯಕ್ಕೆ ಅಗತ್ಯವಾದ ಚಾಮರಾಜನಗರ ಮತ್ತು ಸತ್ಯಮಂಗಲಂ ರೇಲ್ವೆ ಹಾಕುವ ಬಗ್ಗೆ ಕೂಡಲೆ ಕ್ರಮ ತೆಗೆದುಕೊಳ್ಳಲು ಹಿಂದುಸ್ತಾನಕ್ಕೆ ಬಿನ್ನಹ. ಇವೇ ಮೊದಲಾದ ಗೊತ್ತುವಳಿಗಳು ಸ್ವೀಕೃತವಾದವು.

ಕನ್ನಡ ರಂಗಭೂಮಿಯ ಶತಮಾನೋತ್ಸವ

ಗುಬ್ಬಿ ಶ್ರೀ ಚನ್ನಬಸವೇಶ್ವರ ಸ್ವಾಮಿ ನಾಟಕ ಸಂಸ್ಥೆಯ ವಜ್ರೋತ್ಸವ

ಕರ್ನಾಟಕದ ರತ್ನ ಸಿಂಹಾಸನಾಧೀಶರಾದ ಮೈಸೂರಿನ ರಾಜಾಶ್ರಯ ಹಾಗೂ ಕನ್ನಡ ಜನತೆಯ ಪ್ರೋತ್ಸಾಹನದಿಂದ ಕನ್ನಡ ರಂಗಭೂಮಿಯು ಶತಾಯುವಾಗಿ ಬಾಳಿ ನಿಂತಿದೆ. ಶ್ರೀ ಚನ್ನಬಸವೇಶ್ವರ ಸ್ವಾಮಿ ನಾಟಕ ಸಂಸ್ಥೆಯು ಅರವತ್ತು ವರ್ಷಗಳನ್ನು ದಾಟಿದೆ. ೧೯೪೯ ನೇ ಜುಲೈ ತಿಂಗಳಲ್ಲಿ ಈ ಹಬ್ಬಗಳನ್ನು ಮೈಸೂರು ದಸರಾ ವಸ್ತು ಪ್ರದರ್ಶನಾಲಯದಲ್ಲಿ ವೈಭವದಿಂದ ಆಚರಿಸಲು ಎಲ್ಲ ಸಿದ್ಧತೆಗಳು ಸಾಗುತ್ತಿವೆ

ಉತ್ಸವದ ವಿವಿಧ ಅಂಗಗಳು

೧. ಕನ್ನಡ ರಂಗ ಮಂಟಪೋತ್ಸವ. ೨. ಪ್ರಕಟನೆ—(i) ಸ್ಮಾರಕ ಗ್ರಂಥ. (ii) ರಂಗಭೂಮಿ. ಕನ್ನಡ ರಂಗಭೂಮಿಯ ಇತಿಹಾಸ, ವಿಕಾಸ, ಸ್ವರೂಪ, ಭವಿಷ್ಯ, ಸಾಧನೆ. ನಾಡಿನ ಕಲಾ ಸಂಸ್ಥೆಗಳ, ಕಲಾವಿದರ ಪರಿಚಯ. ವಿವಿಧ ದೇಶಗಳ ರಂಗಭೂಮಿಯ ಸಂಕ್ಷಿಪ್ತ ಚರಿತ್ರೆ. ನಾಟಕ ರಚನಾ ಸಂವಿಧಾನ, ರಸೋತ್ಪಾದನೆ, ಪಾತ್ರ ನಿರ್ಮಾಣ, ಯಕ್ಷಗಾನ, ಬಯಲಾಟ, ಬೊಂಬೆಯಾಟ- ಇತ್ಯಾದಿ ವಿಷಯಗಳನ್ನೊಳಗೊಂಡ ಗ್ರಂಥ. ೩. ಪ್ರದರ್ಶನ— (i) ನಾಟಕ ಪ್ರಯೋಗ. (ii) ರಂಗ ಮಂಟಪದ ಅಲಂಕಾರ, ವಾಸ್ತು, ಶಿಲ್ಪ, ವಾದ್ಯವಿಶೇಷಗಳು, ಪ್ರಾಂತಗಳ ವೇಷಭೂಷ ಮೊದಲಾದ ವಸ್ತು ಕಲಾ ಪ್ರದರ್ಶನ. (iii) ನಾಟ್ಯ. (iv) ಚಿತ್ರಕಲಾ ಪ್ರದರ್ಶನ. ೪. ಜಾನಪದ ಕಲಾಭಿಯೋಗ — ಯಕ್ಷಗಾನ, ತಾಳಮದ್ದಳೆ, ಬಯಲಾಟ, ಬೊಂಬೆಯಾಟ. ೫. ಸಂಗೀತ— ವಚನ ಗಾನ, ಕನ್ನಡ ಕೀರ್ತನೆ. ದೇವರ ನಾಮ, ಹಾಡುಗಳು.

೬. ಸನ್ಮಾನ ಸಮ್ಮೇಳನ- ಕನ್ನಡ ಕಲಾ ಸಂಸ್ಥೆಗಳಿಗೆ, ಕನ್ನಡ ಕಲಾವಿದರಿಗೆ, ಗುಬ್ಬಿ ನಾಟಕ ಸಂಸ್ಥೆಗೆ.

ಈ ಸಂದರ್ಭದಲ್ಲಿ ಕನ್ನಡ ನಾಡಿನ ವಿವಿಧ ನಾಟಕ ಮತ್ತು ಚಲಚ್ಚಿತ್ರ ಸಂಸ್ಥೆಗಳು, ಕಲಾವಿದರು, ನಟ ನಟಿಯರು, ನಾಟ್ಯ ಕಲಾ ಪರಿಣತರು, ಸಂಗೀತಗಾರರು —- ಸಹಕರಿಸಿ ತಮಗೆ ತಿಳಿದಿರುವರತಹ ಕಲಾವಿದರು ಮತ್ತು ನಾಟಕ ಸಂಸ್ಥೆಗಳ ಚರಿತ್ರೆಯನ್ನು ಸಂಗ್ರಹಿಸಿ ಉತ್ಸವ ಸಮಿತಿ ಕಚೇರಿಗೆ ಆದಷ್ಟು ಜಾಗ್ರತೆ ಕಳುಹಿಸಿಕೊಡಬೇಕಾಗಿ ವಿನಂತಿ. ಹೆಚ್ಚಿನ ವಿವರಗಳನ್ನು ಕಚೇರಿಯಿಂದ ತಿಳಿಯಬಹುದು.

ಎಂ. ಸಿ. ಮಹದೇವಸ್ವಾಮಿ
ಪ್ರಧಾನ ವ್ಯವಸ್ಥಾಪಕ ಕನ್ನಡ ರಂಗ
ಭೂಮಿಯ ಶತಮಾನೋತ್ಸವ
ಕೇಂದ್ರ ಕಚೇರಿ ತ್ಯಾಗರಾಜ ರಸ್ತೆ,
ಮೈಸೂರ ಸಿಟಿ.

ವ್ಯಾಪಾರ ಪ್ರಪಂಚ

ಮುಂಬಯಿ ಪೇಟೆ ಧಾರಣೆ

ಮುಂಬಯಿ ತಾ. ೮

ಬಂಗಾರ

ತಯಾರಿ	೧೧೪—೬—೦
ತಯಾರಿ	೧೧೪—೬—೦
ಸಾವರಿನ	೭೨—೧೨—೦

ಬೆಳ್ಳಿ

ತಯಾರಿ	೧೬೮—೪—೦
ಜೇಂಬರ	೧೬೯—೧೨—೦

ಎಣ್ಣೆ ಕಾಳುಗಳು

ಶೇಂಗಾ	೧೫೮—೮—೦
ಹೊಸ ಬೆಳೆ	೧೫೩—೨—೦
ಅಗಸೆ	೨೫—೧೨—೦
ಅಗಸೆ ಎಣ್ಣೆ	೧೮—೨—೦

ಟೆಕ್ಸಟಾಯಿಲ್ಸ

ಅಹಮ್ಮದಾಬಾದ ಅಡ್ವಾನ್ಸ	೫೬೫—೦—೦
ಮುಂಬಯಿ ಡಾಯಿಂಗ	೧೦೮೭—೮—೦
ಸೆಂಟ್ರಲ ಇಂಡಿಯಾ	೩೩೪—೦—೦
ಸೆಂಚುರಿ	೫೨೨—೮—೦
ಕುಲಾಬಾ ಲ್ಯಾಂಡ	೩೨೦—೦—೦
ಗೋಕಾಕ	೩೪೫—೦—೦
ಇಂಡಿಯನ್ ಬ್ಲೀಚಿಂಗ	೧೬೬—೦—೦
ಕೊಹಿನೂರು	೬೧೧—೦—೦
ಕೊಲ್ಹಾಪುರ	೫೯೫೦—೦—೦
ಸಿಂಪ್ಲೆಕ್ಸ	೨೩೪—೦—೦
ಸ್ವದೇಶಿ	೬೪೨—೦—೦
ವಿಷ್ಣು	೩೧೭—೮—೦
ಟಾಟಾ ಪವರ	೧೫೪೨—೮—೦
ಟಾಟಾ ಹೈಡ್ರೊ	೧೫೩—೦—೦
ಟಾಟಾ ಸ್ಟೀಲ ಡೆಫರ್ಡ್ಸ	೧೫೮೭—೮—೦
ಟಾಟಾ ಸ್ಟೀಲ ಆರ್ಡಿನರಿ	೩೨೮—೦—೦
ಪ್ರಿಮಿಯರ ಕನ್‌ಸ್ಟ್ರಕ್ಶನ	೧೯೫—೦—೦
ಇಂಡಿಯನ ಆಯರ್ನ	೩೦—೨—೦
ಬರ್ಮಾ [illegible]	೩—೦—೦
ಇಂಡಿಯನ್ ಕಾಪರ	೨—೧೨—೦

ಇನ್ಶ್ಯುರನ್ಸ

ನ್ಯೂ ಇಂಡಿಯಾ ಇನ್‌ಶುರನ್ಸ	೭೦—೮—೦

ಬ್ಯಾಂಕುಗಳು

ಸೆಂಟ್ರಲ	೮೬—೦—೦
ಇಂಪೀರಿಯಲ (ಅಂಶತಃ)	೪೯೫—೦—೦
ಇಂಪೀರಿಯಲ (ಪೂರ್ಣ)	೨೪೫—೮—೦
ಇಂಡಿಯಾ	೧೧೧—೦—೦

ಶಿವಮೊಗ್ಗ

ತಾ. ೭

ಶಿವಮೊಗ್ಗೆ ಅಡಿಕೆಪೇಟೆಯ ಧಾರಣೆ ಮಣ ೧ಕ್ಕೆ ಈ ರೀತಿ ಇದೆ—

ದೇಶಾವರ ನಂ. ೧ ಮಣ ೧ಕ್ಕೆ		೩೩—೩೭
,,	,, ೨	೩೦—೩೫
,,	,, ೩	೨೫—೩೦
ಬೆಟ್ಟೆ ವಂತಿ		೧೮—೨೦
ಬೆಟ್ಟೆ		೧೪—೧೬
ರಾಜಾ ಅಲವು		೩೨—೩೬

ಅಡಿಕೆ ಪೇಟೆಯ ಸ್ಥಿತಿಮಾನವನ್ನು ಹೇಳುವದು ಕಷ್ಟವಾಗಿದೆ. ಥೋಟಾದಲ್ಲಾಳಿಗಳಿಂದ ಅಡಿಕೆ ಪೇಟೆಯ ಸ್ಥಿತಿ ಬಹುಮಟ್ಟಿಗೆ ಹಾಳಾಗುತ್ತಿರುವದು ಕಂಡುಬರುತ್ತಿದೆ. ಅಡಿಕೆ ವರ್ತಕ ಸಂಘದವರು ಅಡಿಕೆ ಸಹಕಾರ ಸಂಘಗಳು ವ್ಯಾಪಾರ ಸ್ಥಿತಿಯ ಉತ್ತಮತೆಯ ಬಗ್ಗೆ ಒಟ್ಟುಗೂಡಿ ವಿಚಾರವಿನಿಮಯ ನಡೆಸಬೇಕು.

ಏರಿಕೆ ಬೆಲೆ

ಪ್ರ.ಭ.ತ್ವ ಭತ್ತ ವಸೂಲಿ ಆಜ್ಞೆಯನ್ನು ರದ್ದುಗೊಳಿಸಿದ ಫಲವಾಗಿ ಭತ್ತದ ಧಾರಣೆ ಏರುತ್ತಿದೆ ಇನ್ನೂ ಏರುವ ಸ್ಥಿತಿಯಲ್ಲಿವೆ ಭತ್ತದ ಬೆಲೆ ರೂ. ೨೦ ರವರೆಗೆ ಹೋಗಿದೆ ಜನಕೆಲವರು ಈ ಲಾಭ ಬಡತನ ಕಂಡು ಭೀ ಅನ್ನುತ್ತಿದೆ. ದೇಶದ ದೌರ್ಭಾಗ್ಯಕ್ಕಾಗಿ ನೊಂದಿದೆ

ಚಿನುಣಿ ಎಣ್ಣೆ ಡಬ್ಬಿ ಒಂದರ ೧೧ ರೂ. ಮಾರಾಟವಾಗುತ್ತಿತ್ತು.

ಹುಬ್ಬಳ್ಳಿ

ಹೊಸ ಜಯವಂತ ಹತ್ತಿ		೧	೪೯೫—೫೦೧
,,		೨	೪೮೫—೪೯೧
,,		೩	೪೭೫—೪೮೧
ಅಸಲಂಡ ಹತ್ತಿ		೧	೪೫೫—೪೬೫
,,		೨	೪೨೫—೪೪೦
ಜೀನ			೩೫೦ ೩೬೫
ಉ. ಹಬಲರೋಲ			೩೩೦ ೩೪೦
ಜ. ಹತ್ತಿ ಕಾಳು	ಪೌಂಡು		೧೧
ಅ. ಹತ್ತಿ ಕಾಳು			೯॥—೧೦

ದಿಲ್ಲಿಯಲ್ಲಿ ಕರ್ನಾಟಕ ವರ್ತಕರ ಪರಿಷತ್ತು



ತಾ. ೧ ಗುರುವಾರ ಇಲ್ಲಿ ಸೇರಿದ್ದ ಕರ್ನಾಟಕ ವರ್ತಕರ ಸಮ್ಮೇಲನದ ಪ್ರತಿನಿಧಿಗಳು.

ಎಡದಿಂದ ಬಲಕ್ಕೆ- ಶ್ರೀಗಳಾದ ಬಿ. ಎಸ್. ಹುನಸವಳ್ಳಿ, ಜಿ. ಎ. ಆಚಾರ್ಯ, (ಅಧ್ಯಕ್ಷ) ದಿವಾಕರ, ಮತ್ತು ಎಸ್. ವಿ. ಕೃಷ್ಣಮೂರ್ತಿ.

ಎರಡನೆಯ ಸಾಲು- ಶ್ರೀಗಳಾದ ಶಾಂತಪ್ಪ ಯಳಮಲಿ, ಆರ್. ವಿ. ಶಿರೂರ, ಕೆ. ಪಿ. ಗರ್ಗ, ಮತ್ತು ರಾಘವನ್.

ಧಾರವಾಡ

ಹುಬ್ಬಳ್ಳಿ ಮೆಡಿಕಲ್ ಅಸೋಸಿಯೇಶನದ ಪರವಾಗಿ ಇದೇ ಯುಗಾದಿ ಪ್ರತಿಪದೆಯಿಂದ ಕಣ್ಣಿನ ಧರ್ಮಾರ್ಥ ದವಾಖಾನೆಯೊಂದು ಸ್ಥಾಪಿತವಾಗಿದೆ. ಸದ್ಯಕ್ಕೆ ಅಸೋಸಿಯೇಶನದ ಸದಸ್ಯರೆ ಇದರ ವೆಚ್ಚವನ್ನು ಸಹಿಸುತ್ತಿರುವರು. ಇದು ಧರ್ಮಾರ್ಥ ದವಾಖಾನೆಯಾಗಿದ್ದರೂ ಹೆಸರಿಗೆ ತೀರ ಅಲ್ಪವಾದ ಕ್ರಯವನ್ನು ತೆಗೆದುಕೊಳ್ಳಲಾಗುವದು.

ಹುಬ್ಬಳ್ಳಿಯ ಮದ್ಯದಂಗಡಿಯ ಪ್ರಸಿದ್ಧ ಕಂತ್ರಾಟದಾರರಾದ ಹಬೀಬ ಬಂಧುಗಳ ಲಾಯಸೆನ್ಸನ್ನು ರದ್ದು ಪಡಿಸಿ ಲಿಲಾವಿನಲ್ಲಿ ಅವರು ಬೇಡಬಾರದೆಂದು ವಿಧಿಸಲಾಗಿದೆ. ಬೆಳಗಾವಿಗೆ ಹೋಗಬೇಕಾಗಿದ್ದ ಮದ್ಯವನ್ನು ಹುಬ್ಬಳ್ಳಿಗೆ ಕಳ್ಳತನದಿಂದ ತರಿಸಿಕೊಂಡು ಮಾರಿದರೆಂಬ ಆರೋಪಕ್ಕಾಗಿ ಅವರಮೇಲೆ ಬೆಳಗಾವಿ ಕಲೆಕ್ಟರರು ಖಟ್ಲೆ ಹಾಕಿರುವರೆಂದು ತಿಳಿದಿದೆ ಈ ಜಿಲ್ಲೆಯಲ್ಲಿಯೂ ಅವರ ಲಾಯಸೆನ್ಸು ರದ್ದು ಮಾಡಲಾಗಿದೆಯೆಂದೂ ಧಾರವಾಡ ಜಿಲ್ಲಾ ಕಲೆಕ್ಟರರು ಪತ್ರಿಕಾ ಪರಿಷತ್ತಿನಲ್ಲಿ ಹೇಳಿದರು.

ದಿಲ್ಲಿಗೆ ಹೋಗಿದ್ದ ಕರ್ನಾಟಕ ವಣಿಕ್ ಸಂಘದ ಮಹಾಮಂಡಳದ ಸದಸ್ಯರು ಅಲ್ಲಿ ಮಾನ್ಯ ಮಂತ್ರಿ ಶ್ರೀ ಶ್ಯಾಮಪ್ರಸಾದ ಮುಖರ್ಜಿಯವರನ್ನು ಕಂಡು ಕರ್ನಾಟಕದಲ್ಲಿ ಬಟ್ಟೆ ಮತ್ತು ಇತರ ಉದ್ಯಮಗಳ ಸ್ಥಾಪಿಸುವ ಬಗೆಗೆ ಚರ್ಚೆ ಮಾಡಿದರು. ಈಗಾಗಲೇ ನೂಲಿನ ಗಿರಣಿ ತೆರೆಯಲು ಅಪ್ಪಣೆ ದೊರೆತವರಿಗೆ ಕದರು ಮತ್ತು ಯಂತ್ರೋಪಕರಣಗಳನ್ನು ತರಿಸಲು ಅವಶ್ಯಕ ಸೌಕರ್ಯಗಳನ್ನು ಒದಗಿಸಲಾಗುವದೆಂದು ಮಂತ್ರಿಗಳು ಆಶ್ವಾಸಿಸಿದರು. ಉಳಿದ ಉದ್ಯಮಗಳಿಗಾಗಿ ಕನ್ನಡಿಗರಿಂದ ಅರ್ಜಿ ಬಂದರೆ ಯೋಗ್ಯ ವಿಚಾರ ಮಾಡಲಾಗುವದೆಂದೂ ಅವರು ಹೇಳಿದರು.

ಸಂಶಿಯ ಪ್ರಸಿದ್ಧ ಗೌಡರಾದ ಶ್ರೀ. ಶ್ರೀನಿವಾಸ ಪಾಟೀಲರು ಮಂಗಳವಾರ ೬ ನೆಯ ತಾರೀಕಿನ ದಿನ ಹೃದಯವಿಕಾರದಿಂದ ನಿಧನಹೊಂದಿದರು. ಇವರು ಅಲ್ಲಿನ ಮುನಸಿಪಾಲಟಿಯ ಅಧ್ಯಕ್ಷರಾಗಿದ್ದರಲ್ಲದೆ ಗ್ರಾಮಕಾರ್ಯಗಳಲ್ಲೆಲ್ಲ ಆಸ್ಥೆಯಿಂದ ಭಾಗವಹಿಸುತಿದ್ದರು.


ಗದುಗಿನ ಶ್ರೀ ವೀರನಾರಾಯಣ ದೇವರ ಮೂರ್ತಿಯನ್ನು ಮುಟ್ಟಿ ಹರಿಜನರು ಪೂಜೆ ಮಾಡಿದ್ದರ ಸಂಬಂಧದ ಪ್ರಶ್ನೆ ಕೋರ್ಟ್ಟಕಂಡಿದೆ. ದೇವರನ್ನು ಮುಟ್ಟಿ ಪೂಜೆಮಾಡುವ ವಿಶಿಷ್ಟ ಹಕ್ಕು ಅರ್ಚಕನೊಬ್ಬನದೆ ಅಗಿದ್ದರಿಂದ ಉಳಿದ ಸವರ್ಣ ಹಿಂದುಗಳು ಎಲ್ಲಿಯ ವರೆಗೆ ನಿಂತು ದರ್ಶನ ತಕ್ಕೊಳ್ಳುವರೊ ಅಲ್ಲಿಯ ವರೆಗೆ ನಿಂತು ಹರಿಜನರೂ ದರ್ಶನ ತೆಗೆದುಕೊಳ್ಳಬಹುದೆಂದು ಅರ್ಚಕರ ಅಭಿಪ್ರಾಯವಿದ್ದು ಆ ರೀತಿ ತಾಕೀದಿ ಅಗಬೇಕೆಂದು ಈ ದಾವೆಮಾಡಲಾಗಿದೆ.

ನರೇಗಲ್ಲಿನಲ್ಲಿ ೩ ನೇ ತಾರೀಕಿನ ರಾತ್ರಿ ಒಂದು ಗಂಟೆಯ ಸುಮಾರಿಗೆ ಹಿರೇಮಠದ ಹಿಂದಿನ ಬೈಲು ಹಿತ್ತಲಿನಲ್ಲಿರುವ ಬಣವಿಗೆ ಬೆಂಕಿಹತ್ತಿದ್ದರಿಂದ ಸುತ್ತು ಕಡೆಯ ನೂರಾರು ಬಣವಿಗಳು ತಿಪ್ಪಿಗಳು ಕಟ್ಟಿಗೆಯ ಗುಂಪೆಗಳೂ ಅಗ್ನಿಗಾಹುತಿಯಾದವು. ಸುಮಾರು ಇಪ್ಪತ್ತು ಸಾವಿರ ರೂಪಾಯಿಗಳ ನಷ್ಟವಾಗಿವೆ. ಬಡ ರೈತರಿಗಾದ ಈ ವಿಪರೀತ ಹಾನಿಗಾಗಿ ಪರಿಹಾರ ಕೊಡುವದು ಸರಕಾರದ ಕರ್ತವ್ಯವಾಗಿದೆಂದು ಕಾರ್ಯದರ್ಶಿ ಬಸೆಟ್ಟೆಪ್ಪ ಜಕ್ಕಲಿಯವರು ವಿನಂತಿಸುತ್ತಾರೆ.

ಮುಂಬಯಿ ಸರಕಾರದ ಹಿಂದುಳಿದ ವರ್ಗದ ಮಂತ್ರಿಗಳಾದ ಶ್ರೀ ಜಿ. ಡಿ. ತಪಾಸೆಯವರುಬೆಳಗಾವಿಹುಬ್ಬಳ್ಳಿ ಧಾರವಾಡ ಗದಗಗಳಲ್ಲಿ ಸಂಚರಿಸಿದರು. ಹುಬ್ಬಳ್ಳಿಯಲ್ಲಿಮಾತಾಡುತ್ತ ದೊರೆತಸ್ವಾತಂತ್ರ್ಯವನ್ನು ರಕ್ಷಿಸಲು ಸರ್ವರೂ ದುಡಿಯಬೇಕು ಮಾನವ ಮಾನವರಲ್ಲಿ ಭೇದವಿಲ್ಲ, ಇರಬಾರದು ಎಂದು ಮುಂತಾಗಿ ಹೇಳಿದರು.

ಕರ್ನಾಟಕದ ಪ್ರಸಿದ್ಧ ವಿದ್ವಾಂಸರಾದ ಪಂಡಿತ ಮುಳಿಯ ತಿಮ್ಮಪ್ಪಯ್ಯನವರು ಕರ್ನಾಟಕ ಸಂಶೋಧನ ಶಾಖೆಯ ಉಪನ್ಯಾಸ ಮಾಲೆಯಲ್ಲಿ ಮಾರ್ಚ ೨೯, ೩೦, ೩೧ ಈ ಮೂರು ದಿನ ಧಾರವಾಡ ವಿದ್ಯಾವರ್ಧಕ ಸಂಘದಲ್ಲಿ ಕರ್ನಾಟಕದ ವ್ಯಾಪ್ತಿ, ಕರ್ನಾಟಕದ ದೇಸಿ ಮತ್ತು ಬಾಜನೆಗಬ್ಬ ಮತ್ತು ಯಕ್ಷಗಾನ ಈ ಮೂರು ವಿಷಯಗಳ ಬಗ್ಗೆ ಮಹತ್ವಪೂರ್ಣ ಉಪನ್ಯಾಸ ಮಾಡಿದರು.

ಸಾಂಗಲಿಯ ದಿವಾಣರಾಗಿದ್ದ ಶ್ರೀ ಎಸ್. ಆರ್. ಬೈತಮಂಗಳಕರ ಇವರಿದೀಗ ನಿವೃತ್ತರಾಗಿದ್ದಾರೆ. ಸಾಂಗಲಿಯ ಹಿಂದಿನ ಅರಸರು ಈಗ ಅವರನ್ನು ತಮ್ಮ ಖಾಸಗಿ ಹಾಗು ಗಣಪತಿ ಸಂಸ್ಥಾನದ ದಿವಾಣರನ್ನಾಗಿ ನೇಮಿಸಿಕೊಂಡಿದ್ದಾರೆ.



ಬೆಳಗಾವಿ

ಕಮ್ಯುನಿಸ್ಟ ಮುಖಪತ್ರವಾದ ಪೀಪಲ್ಸ ಏಜ ಪತ್ರಿಕೆಯ ಬೆಳಗಾವಿಯ ಸುದ್ದಿಗಾರರಾದ ಶ್ರೀ. ಗೋಳೀಕೇರಿಯವರು ಮತ್ತು ಬಿ. ಕೆ. ಮಾಡೆಲ್ ಹಾಯಸ್ಕೂಲಿನ ಶಿಕ್ಷಕರಾದ ಶ್ರೀ. ಸೋಮಶುಂದರ ಶರ್ಮರು ಇವರನ್ನು ಸಾರ್ವಜನಿಕ ಸುರಕ್ಷಿತತೆ ಕಾಯದೆಯನ್ವಯ ಸೆರೆಹಿಡಿಯಲಾಯಿತು.

ಗೋಕಾವಿ ಸಕ್ಕರೆ ಪ್ರಕರಣವನ್ನು ವಿಚಾರಿಸಿ ವರದಿ ಮಾಡಲು ಧುಳೆಯ ಕಲೆಕ್ಟರರಾದ ಶ್ರೀ. ವಿ. ಕುಮಾರರನ್ನು ಸ್ಪೆಶಲ್ ಅಧಿಕಾರಿಯನ್ನಾಗಿ ನೇಮಿಸಲಾಗಿದೆ. ಈ ಪ್ರಕರಣದಲ್ಲಿ ಇಬ್ಬರು ಮಾಮಲೇದಾರರು ಮತ್ತು ಆರು ಜನ ಕಾರಕೂನರು ಬಹುದಿನಗಳಿಂದ ಸಸ್ಪೆಂಡ ಮಾಡಲ್ಪಟ್ಟಿದ್ದಾರೆ.

ಬೆಳಗಾವಿಯ ಪ್ರಮುಖ ವರ್ತಕರಾದ ಶ್ರೀ. ಕಾಶೀನಾಥರಾವ ದೇಶಪಾಂಡೆ ಇವರಿಗೆ ಬಟ್ಟೆ ನಿಯಂತ್ರಣ ಕಾಯದೆ ಮುರಿದರೆಂದು ಒಂದು ದಿನದ ಶಿಕ್ಷೆ ಮತ್ತು ೯೦೦ ರೂ. ದಂಡ ವಿಧಿಸಲಾಯಿತು ಇವರ ಮನೆಯಲ್ಲಿ ಕಟ್ಟಳೆ ಮೀರಿದಂಥ ೧೯೦೦ ಗಜ ಬಟ್ಟೆ ಸಿಕ್ಕಿತಂತೆ.

ಉ. ಕನ್ನಡ ಜಿಲ್ಲೆಯಿಂದ ಗಡಿಪಾರ ಮಾಡಲ್ಪಟ್ಟ ಖಾನಾಪುರ ತಾಲೂಕಿನಲ್ಲಿ ಕೆಲಸ ಮಾಡುತ್ತಿದ್ದ ನಾಯಕ ಮತ್ತು ಮಾಳಶೇಕರ ಎಂಬ ಇಬ್ಬರು ಕಮ್ಯುನಿಸ್ಟ ಕಾರ್ಯಕರ್ತರನ್ನು ಬಂಧಿಸಲಾಗಿದೆ.

ಚಿಕ್ಕೋಡಿ ತಾಲೂಕಿನ ಕುರಬಿ ಗ್ರುಪ ಕಾಂಗ್ರೆಸ ಕಮಿಟಿಯ ಅಧಿಕಾರಿಗಳಾದ ಶ್ರೀ. ಆಯ್. ಎ. ಪಾಟೀಲರು ಕೊಳ್ಳೆ ಮತ್ತು ಲೂಟಿಗಳ ಸಂಬಂಧದಲ್ಲಿ ಬಂಧಿಸಲ್ಪಟ್ಟಿದ್ದಾರೆ. ಇನ್ನು ಹಲವು ಕಾಂಗ್ರೆಸ ಕಾರ್ಯಕರ್ತರು ಇದೇ ಸಂಬಂಧದಲ್ಲಿ ಬಂಧಿಸಲ್ಪಡುವರೆಂದು ಸುದ್ದಿ.

ಕರ್ನಾಟಕ ವಿಭಾಗದ ಪ್ರೌಢ ಶಿಕ್ಷಣ ಸಮಿತಿಯ ಎರಡನೇ ಸಭೆ ಶ್ರೀ ಅಂಗಡಿ ಷಣ್ಮುಖಪ್ಪನವರ ಅಧ್ಯಕ್ಷತೆಯಲ್ಲಿ ೪ ಕ್ಕೆ ಕೂಡಿತ್ತು. ಅಧ್ಯಕ್ಷರು ಪ್ರಾಸ್ತಾವಿಕವಾಗಿಮಾತಾಡುತ್ತ ರೈತರನ್ನು ಕೇವಲ ಅಕ್ಷರಸ್ಥರನ್ನಾಗಿಸುವದನ್ನಷ್ಟೇ ನಮ್ಮ ಗುರಿಯಾಗಿಟ್ಟುಕೊಳ್ಳದೆ ರೈತರ ದೈನಂದಿನ ಅಡಚಣಿಗಳಲ್ಲಿ ನೆರವಾಗುವಂತೆಯೂ ಹೆಣಗತಕ್ಕದ್ದೆಂದು ಹೇಳಿದರು. ಹೀಗೆಯೆ ಸದಸ್ಯರು ತಮ್ಮ ತಮ್ಮ ಅಭಿಪ್ರಾಯಗಳನ್ನು ಹೇಳಿದ ನಂತರ ನಿರ್ದಿಷ್ಟ ಯೋಜನೆಯ ಪ್ರಕಾರ ಈ ಶಿಕ್ಷಣ ಸಾಗತಕ್ಕದ್ದೆಂದೂ ಅಂಥಯೋಜನೆಮುಂದಿನ ಸಭೆಯಲ್ಲಿ ಮಂಡಿಸತಕ್ಕದ್ದೆಂದೂ ಗೊತ್ತಾಯಿತು.

ಮಿರಜಿ ನಗರ ಪ್ರಜಾಪರಿಷತ್ತಿನ ಪ್ರಮುಖ ಕಾರ್ಯಕರ್ತರಾದ ಶ್ರೀ ಶಂಕರಗೌಡ ಮತ್ತು ಓಂಕಾರ ವಿರುಪಾಕ್ಷಪ್ಪ ಇವರನ್ನು ೪ ನೇ ತಾ. ದಿನ ಸಾರ್ವಜನಿಕ ಕಾನೂನಿನನ್ವಯ ಸೆರೆ ಹಿಡಿಯಲಾಗಿದೆ ಮತ್ತೆ ಮೂವರನ್ನು ಸೆರೆ ಹಿಡಿಯಲಾಗಿದೆ.

ದಕ್ಷಿಣ ಭಾಗದ ಕಮೀಶನರರಾದ ಶ್ರೀ ಎಚ್. ಕೆ. ಜೈನಾನಿಯವರು ಸಾಂಗಲಿಗೆ ಬಂದು ಸಂಸ್ಥಾನಗಳ ಮುಖ್ಯ ಅಡಳಿತಗಾರರಾದ ಶ್ರೀ. ಈಶ್ವರನ್‌ರೊಡನೆ ಲೀನಹೊಂದಿದ ಸಂಸ್ಥಾನ ಭಾಗಗಳ ಜಿಲ್ಲೆಗಳನ್ನು ರಚಿಸುವ ಸಂಬಂಧದಲ್ಲಿ ವಿಚಾರ ವಿನಿಮಯಮಾಡಿದರು. ಮುನಿಸಿಪಾಲಿಟಿಯ ಅಧ್ಯಕ್ಷರಾದ ಶ್ರೀ. ದಪ್ತರದಾರರು ಪ್ರಾರಂಭಿಕ ಭಾಷಣದಲ್ಲಿ ನಗರ ಸಭೆಯ ಪೂರ್ವೇತಿಹಾಸ ಮತ್ತು ಬೇಡಿಕೆಗಳನ್ನು ವಿವರಿಸಿದರು.

ಬೆಂಗಳೂರು – ಮೈಸೂರು

ಮೈಸೂರಿನ ಎಸ್. ಆರ್. ಶ್ರೀನಿವಾಸ, ಎಂ ಎನ್. ರಾಜಶೇಖರಯ್ಯ, ಎಚ್. ಸಿ. ಶರಕರ ನಾರಾಯಣದಾಸ, ಮತ್ತು ಕೆ. ಹುಸೇನ ಎಂಬ ನಾಲ್ವರು ಕಮ್ಯುನಿಸ್ಟರನ್ನು ಮೈಸೂರ ಸರಕಾರದವರು ಸಂರಕ್ಷಣೆ ಕಾಯ್ದೆಯನ್ವಯ ಬಂಧಿಸಿ ೧೫ ದಿನಗಳ ವರೆಗೆ ಸ್ಥಾನಬದ್ಧತೆಯಲ್ಲಿ ಇರಲಾಗಿದೆ.

ಮೈಸೂರು ಮಹಾರಾಜಾ ಕಾಲೇಜಿನ ರಾಜನೀತಿ ಸಂಸ್ಥೆಯಲ್ಲಿ ಭಾಷಣ ಮಾಡುತ್ತ ಕ. ಪ್ರಾ. ಕಾಂ. ಅಧ್ಯಕ್ಷರಾದ ಶ್ರೀ. ನಿಜಲಿಂಗಪ್ಪರವರು ಏಕೀಕೃತ ಕರ್ನಾಟಕ ತನ್ನ ಔದ್ಯೋಗಿಕ ಪ್ರಗತಿಯಿಂದ ಹಿಂದುಸ್ತಾನದ ಹೃದಯವಾಗಬಲ್ಲದು. ಮಹಾರಾಜರನ್ನು ಏಕೀಕೃತ ಕರ್ನಾಟಕದ ಗವರ್ನರರನ್ನಾಗಿ ತಕ್ಕೊಂಡರೆ ಕರ್ನಾಟಕದಲ್ಲಿ ಪಕ್ಷ ಪಂಗಡಗಳ ತೊಡಕೇ ಉಳಿಯಲಾರದು ಎಂದು ಮುಂತಾಗಿ ಹೇಳಿದರು.

ವಿಜಾಪುರ

ಹುಣಸೀಹಾಳದಲ್ಲಿಯ ಕೆಲ ಮುಸಲ್ಮಾನರು ಅಲ್ಲೂರಲ್ಲಿ ಸುದ್ದಿಯನ್ನು ಮೊಗಲಾಯಿಯಲ್ಲಿ ಹಬ್ಬಿಸಿ ಹುಣಸೀಹಾಳದ ಜನರಿಗೆ ಇಲ್ಲದ ಸಲ್ಲದ ಮಾತುಗಳನ್ನಾಡಿ ಬಹಳ ತೊಂದರೆ ಕೊಡಹತ್ತಿದ್ದಾರೆಂದು ಮುಂತಾಗಿ ಗ್ರಾಮ ಪಂಚಾಯತ ಕಮೀಟಿಯವರು ತಿಳಿಸುತ್ತಾರೆ.

ಸಿಂದಗಿ ತಾಲೂಕಿನ ಗಡಿ ಹಳ್ಳಿಯಾದ ಬ್ಯಾಡಗೀಹಾಳದ ಮೇಲೆ ೩ ನೇ ತಾರೀಕು ಮುಂಜಾನೆ ನಿಜಾಮ ಪೋಲೀಸರು ಸುಮಾರು ೨೦—೨೫ ಜನರು ಏರಿ ಬಂದರು. ಊರಲ್ಲಿಯ ಜನರು ಕವಣಿ ಕುಡಗೋಲಿನಿಂದ ಅವರನ್ನು ಎದುರಿಸಿದರು. ನಿಜಾಮ ಪೋಲೀಸರು ಒಂದೇ ಸವನೆ ಗುಂಡು ಹಾರಿಸಹತ್ತಿದರು. ಸ್ವಲ್ಪ ಹೊತ್ತಿನಲ್ಲಿ ಮಾದನಹಳ್ಳಿ ಪೋಲೀಸ ಠಾಣೆಯಿಂದ ಪೋಲೀಸಪಡೆ ಬಂದಿತು. ಇಬ್ಬಣಗಳಲ್ಲಿಯೂ ಗೋಳೀಬಾರು ಆದವು. ದೇವಣಗಾವಿಯಿಂದಲೂ ಅಷ್ಟರಲ್ಲಿ ಪೋಲೀಸ ಪಡೆ ಬಂದಿತು. ಇದರಿಂದ ನಿಜಾಮ ಪೋಲೀಸರು ಪಲಾಯನ ಹೇಳಿದರು. ಹೋಗುವಾಗ ಸಾಮಾನ ಸಹಿತನಾದ ಒಂದು ಗಾಡಿ ಹಾಗು ಎತ್ತುಗಳನ್ನು ಒಯ್ದಿರುವರು.

ಇದೇ ತಿಂಗಳು ೧೮ ಕ್ಕೆ ವಿಜಾಪುರ ಜಿಲ್ಲಾ ದಕ್ಷಿಣ ಭಾಗದ ಇನಾಂ ಗ್ರಾಮಗಳ ರೈತರ ಪರಿಷತ್ತು ಅಮರಾವತಿಯಲ್ಲಿ ಕೂಡುವದು. ಮಾನ್ಯ ಮಂತ್ರಿ ಶ್ರೀ ಮುರಾರಜಿ ದೇಸಾಯರು ಅದನ್ನು ಪ್ರಾರಂಭಿಸುವರು. ಶ್ರೀ ಚನಬಸಪ್ಪ ಅಂಬಲಿಯವರು ಅಧ್ಯಕ್ಷತೆ ವಹಿಸುವರು. ಆಯಾ ಇನಾಮ ಗ್ರಾಮಗಳ ರೈತರು ತಮ್ಮ ಕೊರತೆ ಅಡಚಣಿಗಳನ್ನು ತಿಳಿಸಬೇಕಾಗಿ ಕಾರ್ಯದರ್ಶಿಗಳು ಬಿನ್ನವಿಸುತ್ತಾರೆ.

ಬೆಳ್ಳಿ ಬಂಗಾರವನ್ನು ಮೇಲಿಂದ ಮೇಲೆ ಕೊಳ್ಳುವವರು ಹಳ್ಳಿಗರೇ ಹೆಚ್ಚಿಗೆ ಇರುವದರಿಂದ ಅವುಗಳ ಮೇಲೆ ಮಾರಾಟ ಕರ ಹೇರುವದರಿಂದ ಅವರಿಗೆ ಬಹಳ ಹಾನಿಯಾಗುವದೆಂದು ಮುಂತಾಗಿ ಬಾಗಲಕೋಟೆಯ ಸರಾಫರು ಅಭಿಪ್ರಾಯಪಟ್ಟು ಆ ಕರವನ್ನು ವಿರೋಧಿಸಿ ಹರತಾಳವನ್ನಾಚರಿಸಿದರು.

ವಿಜಾಪುರದಿಂದ ಹನ್ನೆರಡು ಮೈಲುಗಳ ಮೇಲೆ ಇರುವ ತಿಡಗುಂದಿ ಎಂಬ ಹಳ್ಳಿಯಲ್ಲಿ ಅಮಾನುಷ ರೀತಿಯಿಂದ ಎರಡು ಕೊಲೆ ಮಾಡಲಾಗಿದೆ ಈ ಹೆಣಗಳನ್ನು ವಿಜಾಪುರಕ್ಕೆ ಒಯ್ಯುತ್ತಿದ್ದ ಪೋಲೀಸ ಪಾಟೀಲರು ಮತ್ತು ಅವರ ಮೂವರು ಸಹಕಾರಿಗಳನ್ನು ಪೋಲೀಸರು ಸೆರೆ ಹಿಡಿದಿದ್ದಾರೆ. ಇನ್ನಿಬ್ಬರು ಆರೋಪಿಗಳು ಫರಾರಿಯಾಗಿರುವರು.

ಕನ್ನಡ ಸಂಸ್ಥಾನ

ಕೊಲ್ಹಾಪುರ ಮಹಾರಾಜರ ಘಟನಾ ಸಲಹೆಗಾರರಾದ ಶ್ರೀ. ಎ ಬಿ. ಲಠ್ಠೆಯವರು ಮಾಳವಾ ಒಕ್ಕೂಟದ ಘಟನೆಯ ಕರಡು ಬರೆಯಲು ಗ್ವಾಲೇರಕ್ಕೆ ಹೋಗಿರುವರು. ಕೊಲ್ಹಾಪುರ ಮಹಾರಾಜರು ಈ ಮೊದಲೆ ಅಲ್ಲಿಗೆ ಹೋಗಿದ್ದಾರೆ.

ಮೈಸೂರ ಸರಕಾರದ ಹರಿಜನ ಮಂತ್ರಿಗಳಾದ ಶ್ರೀ ಆರ್. ಚೆನ್ನಿಗರಾಮಯ್ಯನವರು ೪ ನೇ ತಾರೀಕು ದಾವಣಗೆರೆಗೆ ಬಂದು ವಿನೋದ ಚಿತ್ರ ಮಂದಿರದಲ್ಲಿ ದಾವಣಗೆರೆ ಸಬ್ ಡಿವಿಜನಲ್ ಹರಿಜನ ಸಮ್ಮೇಳನದ ಅಧ್ಯಕ್ಷತೆ ವಹಿಸಿ ಹರಿಜನೋದ್ಧಾರದ ಬಗ್ಗೆ ಭಾಷಣಮಾಡಿದರು. ನಗರ ಸಭೆಯವರು ಅವರಿಗೆ ಬಿನ್ನವತ್ತಳೆಯನ್ನು ಅರ್ಪಿಸಿದರು. ಸರಕಾರಿ ಪ್ರೌಢಶಾಲೆಯಲ್ಲಿ ಗಾಂಧೀಜಿಯ ಭಾವಚಿತ್ರದ ಅನಾವರಣ ಮಾಡಿದರು.

ಸಾತಾರೆ ಜಿಲ್ಲೆಯಲ್ಲಿ ೧೯೪೨ ರ ಚಳವಳಿಯಲ್ಲಿ ಒಳ್ಳೆ ಪ್ರಸಿದ್ಧಿಗೆ ಬಂದ ಶ್ರೀ. ನಾನಾ ಪಾಟೀಲರು ಕೊಲ್ಹಾಪುರ ಸಂಸ್ಥಾನವನ್ನು ಪ್ರವೇಶಿಸಬಾರದೆಂದು ಕೊಲ್ಹಾಪುರ ಸರಕಾರದವರು ನಿರ್ಬಂಧಿಸಿದ್ದಾರೆ.

ಮೈಸೂರು ಸರಕಾರವು ಆಹಾರಧಾನ್ಯ ನಿಯಂತ್ರಣಾಜ್ಞೆ (೧೯೪೨) ಯನ್ನು ರದ್ದುಗೊಳಿಸಿದೆ ಲಾಯಸೆನ್ಸ ಇಲ್ಲದೆ ವ್ಯಾಪಾರಸ್ಥರು ಇನ್ನು ಮೇಲೆ ಅಹಾರ ಧಾನ್ಯಗಳ ಸಾಗಾಟ ಮಾಡಬಹುದು.

ಕೋಲಾರ ಚಿನ್ನದ ಗಣಿಯ ೨ ಸಾವಿರ ಕೆಲಸಗಾರರು ತಮ್ಮ ಮುಖಂಡರನ್ನು ಬಂಧಿಸಿದ್ದಕ್ಕಾಗಿ ೫ ನೇ ತಾರೀಕಿನಿಂದ ಸಂಪು ಪ್ರಾರಂಭಿಸಿದ್ದಾರೆ. ಈ ಮುಖಂಡರು ಕಮ್ಯುನಿಸ್ಟ ಚಳವಳಿಯಲ್ಲಿ ನಿರತರಾಗಿದ್ದರು. ಈಗ ಈ ಸಂಸ್ಥಾನದಲ್ಲಿ ೨೫ ಕಮ್ಯುನಿಸ್ಟರ ಮೇಲೆ ವಾರಂಟು ಹೊರಟಿದ್ದು ಅವರಲ್ಲಿ ೨೦ ಜನರನ್ನು ಈಗಾಗಲೆ ಬಂಧಿಸಲಾಗಿದೆ ಉಳಿದ ಐದು ಮಾತ್ರ ಸಿಕ್ಕಿಲ್ಲ

ಶಿವಮುಗ್ಗಿಯಲ್ಲಿ ಕಳೆದವಾರ ಶ್ರೀ ಧೋಪಾಳಂ ರಾಮಸ್ವಾಮಿಯವರ ಮನೆಯಲ್ಲಿ ಸ್ಫೋಟ ವಾಗಿತ್ತು ಮೊನ್ನೆ ೨ ನೇ ತಾರೀಕು ರಾತ್ರಿ ಅವರ ಮನೆಯಲ್ಲಿ ಕಳವಾಯಿತು. ಬೆಲೆ ಬಾಳುವ ಬಟ್ಟೆ ಬರೆ ಮೊದಲಾದವು ದೇವರು ಸಹ ಕಳವಾಗಿ ಹೋಗಿವೆ. ಇದೇ ಮನೆ ಪಕ್ಕದ ಶ್ರೀ ಡಾಕಪ್ಪನವರ ಕಾರು ಕೆಡಿಸಲ್ಪಟ್ಟದ್ದು ಕಳವು ಅಗಿದೆ.

ಕೊಲ್ಹಾಪುರ ಸಂಸ್ಥಾನ ಸರಕಾರದವರು ಸಂಸ್ಥಾನದಲ್ಲಿಯ ನಿರಾಶ್ರಿತರಿಗಾಗಿ ೧೦ ಲಕ್ಷ ರೂಪಾಯಿಗಳನ್ನು ತೆಗೆದಿಟ್ಟಿದ್ದಾರೆ. ಮುಂಬಯಿ ಸರಕಾರದ ಯೋಜನೆಯಂತೆಯೇ ಈ ನಿರಾಶ್ರಿತರ ಪರಿಹಾರ ಯೋಜನೆಯನ್ನು ಸಿದ್ಧಗೊಳಿಸಲಾಗುವದು.

ದಾವಣಗೆರೆ ನಗರ ಸಭೆಗೆ ಶ್ರೀ ಕಂದಗಲ್ಲ ವೀರಭದ್ರಪ್ಪನವರು ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದಾರೆ.

ಎತ್ತಿನಹಟ್ಟಿ ಗ್ರಾಮದಲ್ಲಿ ಸೊಂಡೂರು ಸಂಸ್ಥಾನ ಪ್ರಜಾ ಪರಿಷತ್ತು ೩ ನೇ ತಾರೀಖು ಶ್ರೀ ತಲ್ಲೂರ ರಾಯನಗೌಡರ ಅಧ್ಯಕ್ಷತೆಯಲ್ಲಿ ಕೂಡಿದ್ದಿತು. ಶ್ರೀ ರತ್ನಪ್ಪ ಕುಂಬಾರರು ಪರಿಷತ್ತನ್ನು ಪ್ರಾರಂಭಿಸಿದರು. ಸೊಂಡೂರ ಸಂಸ್ಥಾನವನ್ನು ರಾಜೇಸಾಹೇಬರು ಬೇಗ ವಿಲೀನಗೊಳಿಸಿ ಕೀರ್ತಿಸಂಪನ್ನರಾಗಬೇಕೆಂದು ಶ್ರೀ ರತ್ನಪ್ಪ ಕುಂಬಾರರು ಹೇಳಿದರು. ಇದೇ ಆಶಯದ ಗೊತ್ತುವಳಿಗಳು ಸ್ವೀಕೃತವಾದವು.

ಸೊರಿಡೂರು ಸಂಸ್ಥಾನವು ಕೂಡಲೆ ವಿಲೀನವಾಗಬೇಕೆಂದು ಸೊಂಡೂರ ಸಂಸ್ಥಾನ ಪ್ರಜಾ ಪರಿಷತ್ತಿನಮೊದಲನೆಯ ಅಧಿವೇಶನದಲ್ಲಿಗೊತ್ತುವಳಿ ಸ್ವೀಕೃತವಾಗಿದೆ. ಈ ಸಂಸ್ಥಾನ ಬಳ್ಳಾರಿ ಜಿಲ್ಲೆಯಲ್ಲಿ ವಿಲೀನವಾಗದೆ ಗತ್ಯಂತರವಿಲ್ಲ. ರಾಜರು ಪ್ರತಿಗಾಮಿ ಧೋರಣೆಯನ್ನು ತಳೆಯುವಂತೆ ಕೆಲ ಜನರು ಪ್ರೇರೇಪಿಸುತ್ತಿರುವದು ತೀರ ಅನುಚಿತವೆಂದು ಮುಂತಾಗಿ ಪ್ರಜಾ ಪರಿಷತ್ತಿನ ಕಾರ್ಯದರ್ಶಿಗಳು ಪ್ರಕಟಿಸುತ್ತಾರೆ.

ಹಿಂದುಸ್ಥಾನ

ಮುಂಬಯಿ

ಮುಂಬಯಿ ವಿಶ್ವವಿದ್ಯಾಲಯದ ಸೆನೇಟಿನ ವಿಶೇಷ ಅಧಿವೇಶನ ಸೇರಿ ಅನಂತರದಲ್ಲಿ ವಿಶ್ವಕರ್ನಾಟಕ ವಿದ್ಯಾಲಯವು ಹುಬ್ಬಳ್ಳಿಯಲ್ಲಿ ಇಂಜಿನಿಯರಿಂಗ ಕಾಲೇಜು ಮತ್ತು ಬೆಳಗಾವಿಯಲ್ಲಿ ಕರ್ನಾಟಕ ಲಾ ಸೊಸಾಯಿಟಿಯವರ ಆರ್ಟ್ಸ ಕಾಲೇಜು ಇವುಗಳನ್ನು ಸ್ಥಾಪಿಸಲು ಮನ್ನಣೆ ಕೊಡಲಾಯಿತು.

ಮುಂಬಯಿ ಕಾರ್ಪೋರೇಶನದ ಮೇಯರ ಪದಕ್ಕೆ ಕಾಂಗ್ರೆಸ ಪಕ್ಷದ ಹುರಿಯಾಳಾದ ಡಾ. ಮೂಸ್ಕರ್ಹೇಣಕರು ೮೬ ಮತಗಳನ್ನು ಪಡೆದು ಆರಿಸಿ ಬಂದರು. ಇವರ ಎದುರಾಳಿಯಾಗಿದ್ದ ಸಾಮ್ಯವಾದೀ ಪಕ್ಷದ ಹುರಿಯಾಳಾದ ಶ್ರೀ. ಅಲ್ವೆಸ ಅಲ್ವಾರೀಸರಿಗೆ ಕೇವಲ ೨೩ ಮತಗಳು ಬಿದ್ದವು. ಈ ಮತದಾನದ ಕಾಲಕ್ಕೆ ಮುಸ್ಲಿಂ ಲೀಗಿನ ಸದಸ್ಯರೂ ಸ್ವತಂತ್ರರೂ ಕಾಂಗ್ರೆಸಿಗೇ ಮತ ಕೊಟ್ಟರು.

ಮುಂಬಯಿ ಭೂ ಸುಧಾರಣೆಯ ಮಸೂದೆ ಮತ್ತು ಮುಂಬಯಿ ಸರಕಾರಿ ಸಂಘಗಳ ತಿದ್ದುಪಡಿ ಮಸೂದೆಗಳಿಗೆ ಗವರ್ನರ ಜನರಲ್ಲರ ಅನುಮತಿ ದೊರೆತಿದ್ದು ಅವು ಕಾಯಿದೆಗಳಾಗಿವೆ.

ಮುಂಬಯಿ ಸರಕಾರದ ಸುದ್ದಿ ಶಾಖೆಯ ಅಧಿಕಾರಿಗಳು ಗೋಧ್ರಾದ ಗಲಭೆಯ ಬಗ್ಗೆ ಕೆಳಗಿನ ಅಭಿಪ್ರಾಯದ ಪ್ರಕಟನೆ ಹೊರಡಿಸಿದ್ದಾರೆ:— ಗೋಧ್ರಾದ ಗಲಭೆಯ ಬಗ್ಗೆ ಹಿಂದುಸ್ತಾನ ಪಾಕಿಸ್ತಾನಗಳಲ್ಲಿ ವಿಸಂಗತ ಸುದ್ದಿಗಳನ್ನು ಹಬ್ಬಿಸಿ ರಾಜಕೀಯ ದುರುದ್ದೇಶ ಸಾಧನೆ ಮಾಡಿಕೊಳ್ಳುತ್ತಿರುವರು ಕಂಡು ಬಂದಿದೆ. ಅಲ್ಲಿ ೧೩ ಜನರು ಮರಣಹೊಂದಿದ್ದು ೩೫ ಜನರಿಗೆ ಗಾಯಗಳಾಗಿವೆ. ಸುಮಾರು ೬೦೦ ರಿಂದ ೧೦೦೦ ಮನೆಗಳು ಅಗ್ನಿಗೆ ಆಹುತಿಯಾಗಿವೆ ಎಂದು ಮುಂಬಯಿ ಗೃಹ ಮಂತ್ರಿಗಳು ತಾ. ೨೯ಕ್ಕೆ ಶಾಸನ ಸಭೆಯಲ್ಲಿ ತಿಳಿಸಿದ್ದಾರೆ. ಅನಂತರ ಯಾವ ದುರ್ಘಟನೆಗಳು ಸಂಭವಿಸಿಲ್ಲ.

ಮುಂಬಯಿಯ ಮಾಲು ಜವಳಿ ಗಿರಣಿಗಳಲ್ಲಿಯ ಒಟ್ಟು ೧೦ ಸಾವಿರ ಕೂಲಿಕಾರರು ಕಮ್ಯುನಿಸ್ಟ ಮುಖಂಡರ ಬಂಧನದ ನಿಷೇಧಾರ್ಥವಾಗಿ ತಾ. ೨ ರಿಂದ ಸಂಪು ಹೂಡಿದ್ದಾರೆ. ಇನ್ನುಳಿದ ೬೭ ಗಿರಣಿಗಳು ಎಂದಿನಂತೆ ಕೆಲಸ ಸಾಗಿಸಿವೆ.

ಔದ್ಯೋಗಿಕ ನ್ಯಾಯಾಲಯದ ತೀರ್ಪುಗಳು ಸಾರವಾಗಿ ಕೊಟ್ಟ ಸವಲತ್ತುಗಳನ್ನು ಕೂಲಿಕಾರರು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆಯೆಂದೂ ಕೂಲಿಕಾರರು ಮೇಲಿಂದ ಮೇಲೆ ತಮ್ಮ ವಿಸಂಗತ ಬೇಡಿಕೆಯನ್ನು ಮುಂದೆ ಚಾಚಿ ಸಂಪು ಹೂಡುವ ಬೆದರಿಕೆ ಹಾಕಿದರೆ ಔದ್ಯೋಗಿಕ ಶಾಂತಿಯುಂಟಾಗಲಾರದೆಂದೂ ಮುಂಬಯಿ ಗಿರಣಿ ಒಡೆಯರ ಸಂಘದಲ್ಲಿ ಭಾಷಣಮಾಡುತ್ತ ಶ್ರೀ ಭಗವಾನದಾಸ ಮೆಹತಾರು (ಶಾಸನ ಸಭಾ ಸದಸ್ಯರು) ಹೇಳಿದರು.

ಮುಂಬಯಿ ಸ್ಟೀಮ ನೆವಿಗೇಶನ ಕಂಪನಿಯವರ 'ಪ್ರಭಾವತಿ' ಎಂಬ ಹಡಗದಲ್ಲಿ ತಾ. ೨ ರಂದು ಉರಿ ಹತ್ತಿ ತುಸು ಹಾನಿಯಾಗಿದೆ. ಒಂದು ತಾಸಿನಲ್ಲಿ ಬೆಂಕಿಯನ್ನು ಹಿಡಿತದಲ್ಲಿ ತರಲಾಯಿತು.

ಮುಂಬಯಿ ಪ್ರಾಂತದಲ್ಲಿ ಇನ್ನು ೫ ವರ್ಷಗಳ ನಂತರ ಕುದುರೆಯ ಜೂಜಾಟ ಕಂಡು ಬರಲಾರದೆಂದೂ ಜೂಜಾಟ ನಿರ್ಮೂಲಗೊಳಿಸಲು ಸರಕಾರ ನಿರ್ಧರಿಸಿರುವದೆಂದೂ ಮುಂಬಯಿ ಶಾಸನ ಸಭೆಯಲ್ಲಿ ಗೃಹ ಮಂತ್ರಿಗಳಾದ ಶ್ರೀ ಮುರಾರಜಿ ದೇಸಾಯಿಯವರು ತಿಳಿಸಿದರು.

ಹಿಂದೂ ಮಹಾ ಸಭೆಯ ಹಿಂದಿನ ಅಧ್ಯಕ್ಷರಾದ ಶ್ರೀ ಸಾವರಕರರ ೧೯೧೦ ರಲ್ಲಿ ಜಪ್ತಾದ ಆಸ್ತಿಯನ್ನು ಮುಂಬಯಿ ಸರಕಾರವು ಹಿಂತಿರುಗಿ ಕೊಡುವದಿಲ್ಲವೆಂದು ಗೃಹಮಂತ್ರಿಗಳಾದ ಶ್ರೀ ಮುರಾರಜಿಯವರು ಶಾಸನ ಸಭೆಯಲ್ಲಿ ಕೇಳಿದ ಒಂದು ಪ್ರಶ್ನೆಗೆ ಉತ್ತರಕೊಡುತ್ತ ಹೇಳಿದರು.

ಮುಂಬಯಿಯ ಗೃಹ ಮಂತ್ರಿಗಳು ಪತ್ರಿಕಾಕರ್ತರ ಸಭೆಯೊಂದರಲ್ಲಿ ಮಾತನಾಡುತ್ತ, ಪತ್ರಿಕೆಗಳಲ್ಲಿ ಸರಕಾರದ ವಿರುದ್ಧ ಮಾಡಲಾದ ವಿಧಾಯಕ ಟೀಕೆಗಳಿಗೆ ಮಹತ್ವ ಕೊಡಲಾಗುವದೆಂದು ಆದರೆ ಹಿಂಸೆ, ಜಾತೀಯಭಾವ, ವರ್ಗಕಲಹ ಮತ್ತು ಸರಕಾರದ ಬಗ್ಗೆ ಅಸಂತೋಷ ಹುಟ್ಟಿಸುವ ಪತ್ರಿಕೆಗಳನ್ನು ಸರಕಾರವು ಹತ್ತಿಕ್ಕಲೇಬೇಕಾಗುವದು ಎಂದು ಮೊದಲಾಗಿ ಹೇಳಿದರು. ಈ ಸಭೆಗೆ ಇಂಡಿಯನ್ ಪಾರ್ಲಿಮೆಂಟಿನ ಸಂಪಾದಕರಾದ ಶ್ರೀ ಕೆ. ಶ್ರೀನಿವಾಸನ್ನರು ಅಧ್ಯಕ್ಷತೆ ವಹಿಸಿದ್ದರು.

ಹಿಂದುಸ್ತಾನದ ಮತ್ತು ಗೋವೆಯ ಪೋಲೀಸರು ಕೂಡಿ ಗೋವಾ ಪ್ರದೇಶದ ಒಂದು ಹಳ್ಳಿಯಲ್ಲಿ ಹಿಂದುಸ್ತಾನ ರಿಝರ್ವ ಬ್ಯಾಂಕಿನ ೧೦೦ ರೂಪಾಯಿ ಖೊಟ್ಟಿ ನೋಟುಗಳನ್ನು ತಯಾರಿಸುವವರನ್ನು ಮುತ್ತಿ ಇಬ್ಬರನ್ನು ಬಂಧಿಸಿದರಂತೆ ಒಬ್ಬನು ವಿಷ ಕುಡಿದು ಆತ್ಮಹತ್ಯೆ ಮಾಡಿಕೊಂಡನು. ಇವರ ಉಪಕರಣಗಳನ್ನೆಲ್ಲ ಪೋಲೀಸರು ವಶಪಡಿಸಿಕೊಂಡರು.

ಪುಣೆಯ ಬಳಿಗಿರುವ ಖಡಕವಾಸಲಾ ಎಂಬಲ್ಲಿ ಹಿಂದುಸ್ತಾನ ಸರಕಾರವು ರಾಷ್ಟ್ರೀಯ ಸೈನ್ಯ ಶಿಕ್ಷಣಾಲಯವನ್ನು ಸ್ಥಾಪಿಸಲು ನಿರ್ಧರಿಸಿರುವದಾಗಿ ಸಂರಕ್ಷಣ ಶಾಖೆಯ ಪ್ರಕಟನೆ ಹೊರಟಿದೆ. ಉಮೇದವಾರರು ೧೫ ರಿಂದ ೧೭ ವರ್ಷದವರಿರಬೇಕು. ಯೋಗ್ಯತೆಗನುಸರಿಸಿ ಆಯ್ಕೆಯಾಗುವದು. ಮೊದಲಿನ ಮೂರುವರ್ಷ ನೌಕಾದಳದವರು ವಾಯುದಳದವರು ವಿಶೇಷ ಶಿಕ್ಷಣ ಪಡೆಯುವರು. ಉಮೇದವಾರರು ಮ್ಯಾಟ್ರಿಕ್ ಇಲ್ಲವೆ ತತ್ಸಮ ಶಿಕ್ಷಣ ಪಡೆದವರಿರಬೇಕು.

ಅ. ಭಾ. ಟ್ರೇಡಯೂನಿಯನ್ನಿನ ಅಧ್ಯಕ್ಷರೂ ಮುಂಬಯಿ ಶಾಸನ ಸಭೆಯ ಸದಸ್ಯರೂ ಆದ ಶ್ರೀ. ಎಸ್. ಎ. ಡಾಂಗೆಯವರನ್ನು ಮತ್ತು ಬೇರೆ ನಾಲ್ವರನ್ನೂ ತಾ. ೨ ರಂದು ಬಂಧಿಸಲಾಗಿದೆ. ಮುಂಬೈ ಟ್ರೇಡ ಯೂನಿಯನ್ನಿನ ಅಧ್ಯಕ್ಷರಾದ ಶ್ರೀ. ಎಸ್. ಎಸ್. ಮಿರಜಕರ ಮತ್ತು ಬಿ. ಬಿ. ಸಿ. ಆಯ. ರೇಲ್ವೆ ಕೆಲಸಗಾರರ ಸಂಘದ ಕಾರ್ಯದರ್ಶಿ ಶ್ರೀ ವೈಜನಾಥರನ್ನೂ ಬಂಧಿಸಲಾಗಿದೆ.

ಮದ್ರಾಸ

ಮದ್ರಾಸ ಸರಕಾರದ ಗೃಹಮಂತ್ರಿಗಳಾದ ಡಾ. ಪಿ. ಸುಬ್ಬರಾಯನ್ನರ ರಾಜೀನಾಮೆಯನ್ನು ಸ್ವೀಕರಿಸಲಾಗಿದೆಯೆಂದು ಮುಖ್ಯ ಮಂತ್ರಿ ಶ್ರೀ ಓ. ಪಿ. ರಾಮಸ್ವಾಮಿ ರೆಡ್ಡಿಯವರು ಒಂದು ಸಂದರ್ಶನದಲ್ಲಿ ಹೇಳಿದರು. ಹೊಸ ಮಂತ್ರಿಗಳನ್ನು ಮತ್ತು ಶಾಸನ ಸಭೆಯ ಹೊಸ ಧುರೀಣರನ್ನು ನೇಮಿಸಲಾಗುವದೋ ಎಂದು ಕೇಳಿದ ಪ್ರಶ್ನೆಗೆ ಹೊಸ ನೇಮಕವಾದೊಡನೇ ಅದನ್ನು ಪ್ರಕಟಿಸಲಾಗುವದೆಂದು ಮುಖ್ಯ ಮಂತ್ರಿಗಳು ಉತ್ತರಕೊಟ್ಟರು.

ತನಗೆ ಒಪ್ಪಿಸಲ್ಪಟ್ಟ ಖಾತೆಗಳ ನಿತ್ಯದ ಆಡಳಿತದಲ್ಲಿ ಮುಖ್ಯ ಮಂತ್ರಿಗಳು ಆಗಾಗ ಕೈಹಾಕುತ್ತಿದ್ದುದೇ ತಮ್ಮ ರಾಜೀನಾಮೆಯ ಕಾರಣವೆಂದು ಮದ್ರಾಸದ ಹಿಂದಿನ ಗೃಹ ಮಂತ್ರಿಗಳಾದ ಡಾ ಸುಬ್ಬರಾಯನ್ನರು ಹೇಳಿದರು.

ಶಿವಕಾಶಿಯಿಂದ ಪಾಕಿಸ್ತಾನಕ್ಕೆ ನಿರ್ಯಾತವಾಗುತ್ತಿದ್ದ ಕಡ್ಡಿಪೆಟ್ಟಿಗೆಗಳ ಮೇಲೆ ಕೇಂದ್ರ ಸರಕಾರವು ನಿರ್ಬಂಧ ಹಾಕಿದ್ದರಿಂದ ಮತ್ತು ಸಾರಿಗೆ ನಿಯಂತ್ರಿಸಿದ್ದರಿಂದ ಕಡ್ಡಿಪೆಟ್ಟಿಗೆಯ ಸಂಗ್ರಹವು ಮಾರಾಟವಾಗದೇ ದಿನ ದಿನಕ್ಕೆ ಹೆಚ್ಚುತ್ತಿದೆಯೆಂದು ತಿಳಿದುಬಂದಿದೆ. ಶಿವಕಾಶಿಯ ಈ ಕೈಗಾರಿಕೆಯಲ್ಲಿ ೨೦ ಸಾವಿರ ಜನರು ತೊಡಗಿದ್ದು ದಿನಾಲು ೧೫ ಸಾವಿರ ಗ್ರೋಸ ಕಡ್ಡಿಪೆಟ್ಟಿಗೆಗಳು ಸಿದ್ಧವಾಗುತ್ತವೆ. ಜನವರಿ ಮತ್ತು ಫೆಬ್ರುವರಿಯಲ್ಲಿ ಪಾಕಿಸ್ತಾನಕ್ಕೆ ಶಿವಕಾಶಿಯಿಂದ ೭॥ ಲಕ್ಷ ಗ್ರೋಸ ಕಡ್ಡಿಪೆಟ್ಟಿಗೆ ಕಳಿಸಲಾಗಿತ್ತು.

ಅ. ಭಾ. ಸಾಮ್ಯವಾದಿ ಪಕ್ಷದ ಕಾರ್ಯದರ್ಶಿಗಳಾದ ಶ್ರೀ. ಜಯಪ್ರಕಾಶ ನಾರಾಯಣರು ದಕ್ಷಿಣ ಹಿಂದುಸ್ತಾನದ ತಮ್ಮ ಪ್ರವಾಸದಲ್ಲಿ ನಗರಕೋಯಿಲ ಎಂಬಲ್ಲಿ ಭಾಷಣಮಾಡುತ್ತ ಭೌಗೋಲಿಕ ಆರ್ಥಿಕ ಹಾಗೂ ಇತರ ಕಾರಣಗಳನ್ನು ಅಲಕ್ಷಿಸಿ ಕೇವಲ ಭಾಷೆಯ ತಳಹದಿಯ ಮೇಲೆ ಪ್ರಾಂತಗಳನ್ನು ರಚಿಸುವದು ತಪ್ಪೆಂದು ಹೇಳಿದರು. ಸಾಮ್ಯವಾದಿ ಪಕ್ಷಕ್ಕೆ ಬೆಂಬಲಕೊಡಬೇಕೆಂದು ಕೊನೆಗೆ ಕೇಳಿಕೊಂಡರು.

ಮದ್ರಾಸ ನಗರದಲ್ಲಿ ಇದೂ ವರೆಗೆ ಜಾರಿಯಲ್ಲಿದ್ದ ಉರುವಲದ ಸೀದಾ ಮತ್ತು ಬೆಲೆಯ ನಿಯಂತ್ರಣ ತಾ. ೪ ರಿಂದ ರದ್ದಾಗಿದೆ.

ಮದ್ರಾಸದ ಮುಖ್ಯ ಮಂತ್ರಿಗಳು ಒಂದು ಪ್ರಕಟನೆ ಹೊರಡಿಸಿ ಡಾ. ಸುಬ್ಬರಾಯನ್ನರ ಖಾತೆಯಲ್ಲಿ ತಾವೆಂದೂ ಕೈಹಾಕಿಲ್ಲವೆಂದೂ ಅವರ ಆರೋಪದಲ್ಲಿ ಹುರುಳಿಲ್ಲವೆಂದೂ ಸಾರಿದರು.

ಎಂ. ಎಸ್. ಎಂ. ರೇಲ್ವೆಯ ಸದ್ಯದ ಜನರಲ್ ಮ್ಯಾನೇಜರರು ರಜೆಯ ಮೇಲೆ ಹೋಗುವದರಿಂದ ಆ ಅವಧಿಯಲ್ಲಿ ಕೆಲಸ ಮಾಡಲು ರೇಲ್ವೆ ಮಂಡಲದ ವಿಶೇಷ ಅಧಿಕಾರಿಗಳಾದ ಶ್ರೀ ಬಿ. ಬಿ. ವರ್ಮಾ ಅವರನ್ನು ಜನರಲ್ ಮ್ಯಾನೇಜರರನ್ನಾಗಿ ನೇಮಿಸಿದ್ದು ಅವರು ತಾ ೬ ರಂದು ಅಧಿಕಾರ ವಹಿಸಿದರು.

ಈ ವರೆಗೆ ಗೃಹಮಂತ್ರಿಗಳಾಗಿದ್ದ ಡಾ. ಸುಬ್ಬರಾಯನ್ನರ ರಾಜೀನಾಮೆಯಿಂದ ಮದ್ರಾಸದ ರಾಜಕೀಯ ರಂಗದಲ್ಲಿ ಮತ್ತೆ ಅಲ್ಲೋಲ ಕಲ್ಲೋಲ ಉಂಟಾಗಿರುವದಾಗಿ ತಿಳಿಯುತ್ತದೆ. ಈಗ ಲೋಕೋಪಯೋಗಿ ಶಾಖೆಯ ಮಂತ್ರಿಗಳಾಗಿರುವ ಶ್ರೀ ಎಂ ಭಕ್ತವತ್ಸಲಂ ಅವರು ಡಾ ಸುಬ್ಬರಾಯನರ ಸ್ಥಳದಲ್ಲಿ ಶಾಸನ ಸಭೆಯ ಧುರೀಣರಾಗಿ ನೇಮಿಸಲ್ಪಡುವರೆಂದೂ ಅವರಿಗೇ ಗೃಹ ಮತ್ತು ಕಾಯದೆ ಶಾಖೆ ಕೊಡಲ್ಪಡುವವೆಂದೂ ಕೇಳಬರುತ್ತದೆ ಹಿಂದುಸ್ತಾನ ಸರಕಾರದ ವಿದೇಶ ಶಾಖೆಯನ್ನು ಪ್ರವೇಶಿಸಲು ಡಾ. ಸುಬ್ಬರಾಯನರು ಸದ್ಯಕ್ಕೆ ರಾಜಕಾರಣದಿಂದ ನಿವೃತ್ತರಾಗುವರೆಂದು ಇನ್ನೊಂದು ಸುದ್ದಿ.

ಹೊಸದಿಲ್ಲಿ

ಹಿಂದುಸ್ತಾನ ಪಾಕಿಸ್ತಾನಗಳ ಸಂರಕ್ಷಣ ಶಾಖೆಯ ಕಾರ್ಯದರ್ಶಿಗಳ ಸಮಿತಿಯ ಪ್ರಥಮ ಸಭೆಯು ಕರಾಚಿಯಲ್ಲಿ ಸೇರುವದು. ಹಿಂದುಸ್ತಾನ ಸಂರಕ್ಷಣ ಶಾಖೆಯ ಕಾರ್ಯದರ್ಶಿಗಳಾದ ಶ್ರೀ. ಪಟೇಲರು, ಮುಖ್ಯ ಸೇನಾಪತಿ ಜನರಲ ಬುಚರ ಮತ್ತು ಸೈನ್ಯಶಾಖೆಯ ಆರ್ಥಿಕ ಸಲಹೆಗಾರರಾದ ಶ್ರೀ. ಎ. ಕೆ. ಚಂದಾರು ಸಭೆಯಲ್ಲಿ ಭಾಗವಹಿಸಲಿರುವರೆಂದೂ ಮದ್ದುಗುಂಡುಗಳ ಉಗ್ರಾಣಗಳ ಹಂಚುವಿಕೆಯ ಬಗ್ಗೆ ಚರ್ಚೆಯಾಗಬಹುದೆಂದೂ ತಿಳಿಯುತ್ತದೆ.

ಇಂಡಿಯಾ ಮತ್ತು ಪರ್ಶಿಯನ ಗಲ್ಫ ಬ್ಯಾಂಕು ಇದೇ ಜನೇ ತಾ. ೩ರಿಂದ ಹೊಸ ಠೇವುಗಳನ್ನು ಸ್ವೀಕರಿಸತಕ್ಕದ್ದಲ್ಲವೆಂದು ಹಿಂದುಸ್ತಾನ ಸರಕಾರವು ಆಜ್ಞೆ ಹೊರಡಿಸಿದೆ. ಮೇಲ್ಕಾಣಿಸಿದ ಬ್ಯಾಂಕು ಠೇವುದಾರರ ಹಿತದ ವಿರುದ್ಧ ವರ್ತಿಸುತ್ತಿದ್ದುದೇ ಈ ಆಜ್ಞೆಯ ಕಾರಣವೆಂದು ತಿಳಿಯುತ್ತದೆ.

ಪಾಕಿಸ್ತಾನದಿಂದ ಬಂದಿರುವ ನಿರಾಶ್ರಿತರ ನೀತಿಯನ್ನು ಕಾಯ್ದುಕೊಳ್ಳಲು ಮತ್ತು ಅವರ ಮನರಂಜನೆಗಾಗಿ ಅ. ಭಾ. ಆಕಾಶವಾಣಿಯವರು ಇದೇ ತಿಂಗಳ ಮಧ್ಯದಿಂದ ಹಾಡುಗಳು ನಾಟಕಗಳು ಮುಂತಾದ ಕಾರ್ಯಕ್ರಮಗಳನ್ನು ಬಿತ್ತರಿಸಬೇಕೆಂದು ನಿರ್ಧರಿಸಿದ್ದಾರೆ. ಇವರ ಆರ್ಥಿಕ ಪುನರುದ್ಧಾರವು ಎಂತಾದೀತೆಂಬ ಬಗೆಗೆ ಆಕಾಶವಾಣಿಯ ಮೂಲಕ ಸೂಚನೆಗಳನ್ನು ಕೊಡುವ ಕಾರ್ಯಕ್ರಮಗಳನ್ನು ಇಟ್ಟುಕೊಳ್ಳಲಾಗುವದು.

ಮಾರ್ಚ ೧೩ ರಿಂದ ೨೦ ರ ವರೆಗೆ ಪೂರ್ವ ಪಂಜಾಬದಲ್ಲಿ ಪೋಲೀಸರು ೨೨೫ ಮುಸ್ಲಿಮ ಅಪಹೃತ ಸ್ತ್ರೀಯರನ್ನೂ ಚಿಕ್ಕ ಮಕ್ಕಳನ್ನೂ ಶೋಧಿಸಿದ್ದಾರೆಂದು ಅಧಿಕೃತವಾಗಿ ತಿಳಿದು ಬರುತ್ತದೆ.

ಮದ್ರಾಸ ಅಥವಾ ಹಿಂದುಸ್ತಾನದ ಯಾವದೇ ಭಾಗದಲ್ಲಿ ದುರ್ಭಿಕ್ಷೆಯ ಭೀತಿಯಿಲ್ಲವೆಂದು ಹಿಂದುಸ್ತಾನ ಸರಕಾರದ ಆಹಾರ ಮಂತ್ರಿ ಶ್ರೀ ದೌಲತರಾಮರು ಒಂದು ಪತ್ರಕಾರರ ಪರಿಷತ್ತಿನಲ್ಲಿ ಹೇಳಿದರು.

ಹಿಂದುಸ್ತಾನ ಸರಕಾರದ ಸಂರಕ್ಷಣ ಮಂತ್ರಿಗಳಾದ ಸರದಾರ ಬಲದೇವಸಿಂಗರು ತಾ. ೩ಕ್ಕೆ ನಾಗಪುರಕ್ಕೆ ೬ ತಾಸುಗಳ ಭೆಟ್ಟಿಕೊಟ್ಟು ದಿಲ್ಲಿಗೆ ಹಿಂತಿರುಗಿದರು. ಅವರು ನಾಗಪುರದ ಗವ್ಹರ್ನರರಾದ ಶ್ರೀ. ಮಂಗಳದಾಸ ಪಕ್ವಾಸಾ, ಮುಖ್ಯ ಮಂತ್ರಿಗಳಾದ ಪಂ. ರವಿಶಂಕರ ಶುಕ್ಲ ಮತ್ತು ಅನೇಕ ಸೈನ್ಯಾಧಿಕಾರಿಗಳನ್ನು ಭೆಟ್ಟಿಯಾದರು. ಆಗ ಹೈದರಾಬಾದ ವರ್ಹಾಡಗಳ ಗಡಿ ಪ್ರದೇಶದಲ್ಲಿಯ ಘಟನೆಗಳ ಬಗ್ಗೆಯೇ ಹೆಚ್ಚು ಚರ್ಚೆಯಾಯಿತೆಂದು ತಿಳಿದು ಬರುತ್ತದೆ.

ಹಿಂದುಸ್ತಾನದ ವಾಣಿಜ್ಯ ಮಂತ್ರಿ ಶ್ರೀ ಸಿ. ಎಚ್. ಭಾಭಾರು ಫ್ರಾಂಟಿಯರ ಮೇಲಿನಿಂದ ತಾ ೫ ರ ಮುಂಜಾನೆ ಮುಂಬಯಿಗೆ ತೆರಳಿದರು. ಸರದಾರ ಬಲದೇವಸಿಂಗ, ಡಾ. ಶಾಮಪ್ರಸಾದ ಮುಖರ್ಜಿ ಮತ್ತು ಗೃಹ, ಸಾರಿಗೆ ಹಾಗೂ ವಾಣಿಜ್ಯ ಶಾಖೆಗಳ ಕಾರ್ಯದರ್ಶಿಗಳೂ ಇವರನ್ನು ಬೀಳ್ಕೊಡಲು ಬಂದಿದ್ದರು. ಶ್ರೀ ಭಾಭಾರು ತಾ ೬ ರಿಂದ ಮಂತ್ರಿಪದದಿಂದ ಬಿಡುಗಡೆ ಹೊಂದಿದರು.

ಹಿಂದುಸ್ತಾನ ಮತ್ತು ಪಾಕಿಸ್ತಾನಗಳ ಎಲ್ಲ ಪ್ರಾಂತ ಹಾಗೂ ಸಂಸ್ಥಾನಗಳಲ್ಲಿ ಅಲ್ಪಸಂಖ್ಯಾಕರ ರಕ್ಷಣಾಮಂಡಳವನ್ನು ನೇಮಿಸಬೇಕೆಂದು ಬಂಗಾಲದ ಹಿಂದಿನ ಮುಖ್ಯ ಮಂತ್ರಿಗಳಾಗಿದ್ದ ಶ್ರೀ. ಸುಹ್ರವರ್ದಿಯವರು ಒಂದು ಪ್ರಕಟನೆ ಹೊರಡಿಸಿದ್ದಾರೆ.

ಕಲಕತ್ತಾ

ತಾ. ೨ ಕ್ಕೆ ಪ್ರಾರಂಭವಾದ ಕೇಂದ್ರ ಸರಕಾರೀ ನೌಕರರ ಸಂಪು ಹಾಗೇ ಸಾಗಿದ್ದು ಕೆಲ ಕಚೇರಿಗಳೆದುರು ಪಿಕೆಟಿಂಗ ನಡೆಸಿದ್ದ ಕೆಲವರನ್ನು ಪೋಲೀಸರು ಬಂಧಿಸಿರುವರು. ೩ ತಾ. ದಿನ ಒಟ್ಟು ೨೫ ಜನರನ್ನು ಬಂಧಿಸಲಾಗಿದೆ. ೨೦ ಕಚೇರಿಗಳಲ್ಲಿ ೧೫ ಸಾವಿರ ನೌಕರರು ಸಂಪಿನಲ್ಲಿ ಸೇರಿದ್ದಾರೆ. ಶ್ರೀಮತಿ ಅರುಣಾ ಅಸಫ ಅಲ್ಲಿಯವರು ಹಿಂದುಸ್ತಾನ ಸರಕಾರದ ಮುಖ್ಯ ಲೇಬರ ಕಮಿಶನರರಾದ ಶ್ರೀ. ಎಸ್. ಜಿ. ಜೋಶಿಯವರಿಗೆ ಒಂದು ತಂತಿ ಕಳಿಸಿ ಸಂಬಳ ಸಮಿತಿಯ ಸೂಚನೆಗಳನ್ನು ಪುನರ್ವಿಮರ್ಶೆಮಾಡಿ ಪರಿಸ್ಥಿತಿ ವಿಕೋಪಕ್ಕೆ ಹೋಗದಂತೆ ಮಾಡಬೇಕೆಂದೂ ಸಂಪುಗಾರರ ಮೇಲೆ ಕ್ರಮ ತೆಗೆದುಕೊಳ್ಳಕೂಡದೆಂದೂ ವಿನಂತಿಮಾಡಿಕೊಂಡಿದ್ದಾರೆ.

ಕಲಕತ್ತಾ ಜಿಲ್ಲೆಯ ಆ್ಯಂಗ್ಲೋ ಇಂಡಿಯನ್ ಸಂಸ್ಥೆಯಲ್ಲಿ ಭಾಷಣಮಾಡುತ್ತ ಪಶ್ಚಿಮ ಬಂಗಾಲದ ಗವ್ಹರ್ನರರಾದ ಶ್ರೀ. ಸಿ. ರಾಜಗೋಪಾಲಾಚಾರ್ಯರು, ದಯಾಂತಃಕರಣವುಳ್ಳ ಹಿಂದೀಯರನ್ನು ಆ್ಯಂಗ್ಲೋ ಇಂಡಿಯನ್ನರು ನಂಬಬೇಕೆಂದೂ ಸದ್ಯಕ್ಕೆ ಅಧಿಕಾರದಲ್ಲಿದ್ದವರು ಕುಶಲರೂ ತಾಳ್ಮೆವಂತರೂ ದೂರದೃಷ್ಟಿಯವರೂ ಇದ್ದು ಅಲ್ಪಸಂಖ್ಯಾಕರ ಬಗ್ಗೆ ಜಾಗರೂಕರಾಗಿರುವರೆಂದೂ ಹೇಳಿದರು

ಕೇಂದ್ರ ಸರಕಾರದ ನೌಕರರ ಸಂಪಿನಲ್ಲಿ ಸೇರುವದಿಲ್ಲವಾಗಿ ಲೇಖಿ ಆಶ್ವಾಸನ ಕೊಡಲು ನಿರಾಕರಿಸಿದವರನ್ನು ಕೆಲಸದಿಂದ ತೆಗೆದೊಗೆಯಲಾಗಿದೆ. ಇದುವರೆಗೆ ೧೩೭ ಜನವರನ್ನು ಬಂಧಿಲಾಗಿದೆ, ಸಂಪಿನಲ್ಲಿ ಸೇರುವದಿಲ್ಲವೆಂದು ಬರೆದುಕೊಟ್ಟವರು ಕೆಲಸಕ್ಕೆ ತಿರುಗಿ ಬಂದಿದ್ದಾರೆ. ಪಶ್ಚಿಮ ಬಂಗಾಲ ಸರಕಾರವು ಈ ಬಗ್ಗೆ ಒಂದು ಪ್ರಕಟನೆ ಹೊರಡಿಸಿ ಈ ಸಂಪು ೬ ಕಚೇರಿಗಳಿಗೆ ಮಾತ್ರ ಪರಿಣಾಮ ಮಾಡಿದೆಯೆಂದೂ ಕಚೇರಿಯ ಆವಾರದ ಹೊರಗೆ ಹೋಗಲು ನಿರಾಕರಿಸಿದ ಸಂಪುಗಾರರನ್ನು ಮಾತ್ರ ಬಂಧಿಸಲಾಗಿದೆಯೆಂದೂ ತಿಳಿಸಿದ್ದಾರೆ.

ಪಾಕಿಸ್ತಾನ

ಹಿಂದುಸ್ತಾನ ಮತ್ತು ಪಾಕಿಸ್ತಾನ ಸರಕಾರಗಳು ಆಹಾರ ಒಪ್ಪಂದವನ್ನು ಚಾಚೂ ತಪ್ಪದೆ ಅನುಸರಿಸಿವೆ. ಪಾಕಿಸ್ತಾನದಲ್ಲಿ ೧೯೪೮ ಮೇ ತಿಂಗಳ ವರೆಗೆ ಆಹಾರ ಮತ್ತು ಸಕ್ಕರೆಯ ಕೊರತೆಯಾಗಲಾರದೆಂದು ಆಹಾರ ಮಂತ್ರಿ ಅಬ್ದುಲ್ ಸತ್ತಾರರು ಪತ್ರಿಕಾ ಪ್ರತಿನಿಧಿಗಳ ಸಭೆಯಲ್ಲಿ ಹೇಳಿದರು. ಪಾಕಿಸ್ತಾನವು ಹಿಂದುಸ್ತಾನದಿಂದ ೧೫ ಸಾವಿರ ಟನ್ ಮತ್ತು ಕ್ಯೂಬಾ ಮೊದಲಾದಲ್ಲಿಂದ ೧೯ ಸಾವಿರ ಟನ್ ಸಕ್ಕರೆ ತರಿಸಿದೆ.

ಪೂರ್ವ ಬಂಗಾಲದ ಸರಕಾರೀ ಭಾಷೆಯು ಬಂಗಾಲಿಯೇ ಆಗಿರಬೇಕೆಂಬ ಗೊತ್ತುವಳಿಯು ತಾ. ೧ ರಂದು ಪೂರ್ವ ಬಂಗಾಲ ಮುಸ್ಲಿಂ ಲೀಗ ಪಾರ್ಲಿಮೆಂಟರಿ ಪಕ್ಷದ ಸಭೆಯಲ್ಲಿ ಒಮ್ಮತದಿಂದ ಪಾಸಾಯಿತು.

ಪಾಕಿಸ್ತಾನ ಗವ್ಹರ್ನರ ಜನರಲ್ಲರಾದ ಕಾಯದೆ ಆಜಮ್ ಜಿನ್ನಾರು ವಾಯವ್ಯ ಸರಹದ್ದು ಪ್ರಾಂತಕ್ಕೆ ಹತ್ತು ದಿನಗಳ ಮಟ್ಟಿಗೆ ಹೋಗಲಿರುವರೆಂದೂ ಅವರು ಎಪ್ರಿಲ ೧೧ಕ್ಕೆ ಕರಾಚಿಯಿಂದ ಹೊರಡುವರೆಂದೂ ತಿಳಿದುಬರುತ್ತದೆ.

ಪಾಕಿಸ್ತಾನ ರೇಲ್ವೆ ಶಾಖೆಯಲ್ಲಿಯ ಲಂಚಗುಳಿತನವನ್ನು ನಾಮಶೇಷಮಾಡಲು ಪಾಕಿಸ್ತಾನ ಸರಕಾರದವರು, ಪ್ರಾಂತಿಕ ಮತ್ತು ಕೇಂದ್ರ ಪೋಲೀಸರಲ್ಲದೆ ವಿಶೇಷ ಸಿಬ್ಬಂದಿಯ ಸಹಾಯ ಪಡೆಯುವರೆಂದು ತಿಳಿದುಬಂದಿದೆ. ಪಾಕಿಸ್ತಾನದ ರೇಲ್ವೆ ಶಾಖೆಯಲ್ಲಿ ವಿಪರೀತ ಲಂಚಗುಳಿತನ ನಡೆದಿದ್ದರಿಂದೇ ಈ ಕ್ರಮ ಕೈಕೊಳ್ಳಲಾಗಿರುವದು. ಇಷ್ಟರಿಂದ ಪರಿಸ್ಥಿತಿ ಸುಧಾರಿಸದಿದ್ದರೆ ಡಿ. ಟಿ. ಎಸ್. ಟಿ. ಮೊದಲಾದ ಅಧಿಕಾರಿಗಳ ಮೇಲೆಯೂ ಕ್ರಮತೆಗೆದುಕೊಳ್ಳಲಾಗುವದು.

ಪಾಕಿಸ್ತಾನ ಕೆಲಸಗಾರರ ಮಹಾಮಂಡಲದ ಕಾರ್ಯಸಮಿತಿಯು ಪಾಕಿಸ್ತಾನ ಸರಕಾರಿ ನೌಕರರ ಬೇಡಿಕೆಗಳಿಗೆ ಬೆಂಬಲ ಕೊಡುವ ಗೊತ್ತುವಳಿ ಸ್ವೀಕರಿಸಿದೆ. ಮಹಾಮಂಡಲದ ಅಧ್ಯಕ್ಷರಾದ ಮಿರ್ಜಾ ಮಹಮ್ಮದ ಇಬ್ರಾಹಿಮರ ಬಂಧನವನ್ನು ಸಭೆ ಖಂಡಿಸಿ ಅವರನ್ನು ಕೂಡಲೆ ಬಿಡಬೇಕೆಂದು ಕೇಳಿಕೊಂಡಿತು.

ಹಿಂದುಸ್ತಾನದಲ್ಲಿ ಆಸ್ತಿ ಬಿಟ್ಟುಬಂದ ಪಾಕಿಸ್ತಾನದ ಕೇಂದ್ರ ಅಥವಾ ಪ್ರಾಂತಿಕ ಮಂತ್ರಿಗಳು, ಶಾಸನ ಸಭೆಗಳ ಸದಸ್ಯರು ಅಥವಾ ಸರಕಾರಿ ನೌಕರರು ಪಾಕಿಸ್ತಾನದ ಹಿಂದು ನಿವಾಸಿಗಳ ಆಸ್ತಿಯೊಡನೆ ಸರಕಾರದ ಅಪ್ಪಣೆಯಿಲ್ಲದೆ ವಿನಿಮಯ ಮಾಡಕೂಡದೆಂದು ಪಾಕಿಸ್ತಾನ ಸರಕಾರವು ನಿರ್ಣಯಿಸಿದೆ.

ಹರಟೆ

× ಪಶುಪಕ್ಷಿಗಳ ಹೋರಾಟದ ಪದ್ಧತಿ!

ಲೇ. ಶ್ರೀ ಮಾಧವ ಕೌಜಲಗಿ ಬಿ. ಕಾಂ.

ಇತ್ತೀತ್ತಲಾಗಿ ರಾಜಕೀಯ ಜಾಗ್ರತಿಯು ಸರ್ವರಲ್ಲಿಯೂ ಅದಂತೆ ಕಂಡು ಬರಹತ್ತಿದೆ. ಪಶುಪಕ್ಷಿಗಳಲ್ಲಿಯೂ ಸಹ ಮೊನ್ನೆ ಅದನ್ನು ಕಂಡು ಹಿಡಿಯಲಾಯಿತು. ಅವು ಮೇಲಿಂದ ಮೇಲೆ ನದಿಯ ದಂಡೆ ಇಲ್ಲವೆ ಹುಲ್ಲು, ಗದ್ದೆ ಮುಂತಾದ ಸ್ಥಳಗಳಲ್ಲಿ ತಮ್ಮ ಕಮೀಟಿ, ಕಾನಫರನ್ಸಗಳನ್ನು ಕರೆದು ರಾಜಕಾರಣ ಹಾಗೂ ಇತರ ಅನೇಕ ಕಾರಣಗಳನ್ನು ಚರ್ಚಿಸಿ 'ಅನೇಕ ಗೊತ್ತುವಳಿಗಳನ್ನು' ಪಾಸು ಮಾಡಿಕೊಳ್ಳುತ್ತಿದ್ದವು. ಅವುಗಳ ಭಾಷೆಗೆ ಲಿಪಿ ಇಲ್ಲದಿದ್ದರೂ 'ಕರ್ಣೋಪಕರ್ಣ' ಯಂತ್ರದಿಂದಲೇ ಅವುಗಳ ಸುದ್ದಿಗಾರರು ಜಗತ್ತಿನಲ್ಲಿ ನಡೆಯುತ್ತಿರುವ ವಿವಿಧ ಘಟನೆಗಳನ್ನು ತಿಳಿದುಕೊಳ್ಳುತ್ತಿದ್ದವು. ಅವುಗಳ ಸಭೆಗಳ ಕಾರ್ಯಕಲಾಪಗಳು ಮನುಷ್ಯರ ವಿಚಾರವನ್ನು ಸಹ ಕಲಕಿಸುವಂತಹ ವಿರುವದರಿಂದ, ಮನುಷ್ಯರಿಗಾಗಿಯೇ ಮೀಸಲಾಗಿದ್ದ ಈ ವೃತ್ತಪತ್ರಗಳಲ್ಲಿ ಅವುಗಳಿಗೂ ಎಡೆ ಕೊಡಬೇಕಾಗುತ್ತದೆ. ಮೊನ್ನೆ ಪಶುಪಕ್ಷಿಗಳದೊಂದು ಸಭೆ ಸೇರಿತ್ತು. ಆ ಬಗ್ಗೆ ಓರ್ವ ಮಾನವ ಗುಪ್ತಚಾರನಿಂದ ಈ ಕೆಳಗಿನಂತೆ ವರದಿ ಬಂದಿದೆ. ಇದನ್ನು ನೋಡಿ ಮಾನವರು ಜಾಗರೂಕರಾಗಿರಬೇಕು.

ವರದಿ

ಸ್ಥಳ- ಯಮುನೂರಿನ ನದೀ ದಂಡೆ.

ವೇಳೆ- ಮಧ್ಯಾಹ್ನದ ಮೂರು ಗಂಟೆ.

ಸಭೆಗೆ ಬಂದವರು—

೧) ಸೌ. ಸುಂದರಾಬಾಯಿ ಮಹಿಷಿ. ಹುಲ್ಲು ಮೆಲಕಾಡಿಸುತ್ತ ಪ್ರಥಮ ಸ್ಥಾನವನ್ನಲಂಕರಿಸಿದ್ದರು

೨) ಶ್ರೀ ಕೃಷ್ಣದಾಸ ಯಮರಾಜಪೀಠ

ಸೌ. ಮಹಿಷಿಯವರ ಹತ್ತರವೇ ಇದ್ದ ಸ್ಥಾನವನ್ನಲಂಕರಿಸಿದ್ದರು ಬಾಯಿಂದ ಬುರುಗು ಸುರಿಸುತ್ತ ಆಕಾಶದ ಕಡೆಗೆ ಮುಖ ತಿರುವಿದ್ದರು.

೩) ದತ್ತಾತ್ರಯ ನಾಯಕರು.

ಒಣಗಿದ ಒಂದು ಎಲಬನ್ನು ಕಟಿಯುತ್ತ ಯಮರಾಜ-ಪೀಠದ ನೆರಳಿನ ಲಾಭ ತಕ್ಕೊಂಡು ಕುಳಿತಿದ್ದರು

೪) ಸೌ ಗಾಯತ್ರಿದೇವಿ ಬಜಾಜರು.

ಸಭೆಯಲ್ಲಿಯೇ ತನ್ನ ಕರುವಿಗೆ ಮೊಲೆಯುಣಿಸುತ್ತ ಬದಿಗೆ ನಿಂತಿದ್ದ ಶ್ರೀ ಬಲಭೀಮ ನಂದಿಯವರ ಕಡೆಗೆ ಒಮ್ಮೊಮ್ಮೆ ಕಳ್ಳನೋಟ ಬೀರುತ್ತಿದ್ದರು

೫) ಬಲಭೀಮ ನಂದಿಯವರು.

ಅತ್ಯಂತ ನಿರ್ವಿಕಾರ ಹಾಗೂ ಗಂಭೀರ ಭಾವದಿಂದ ಎಲ್ಲಿಯೋ ನೋಡುತ್ತಿದ್ದರು.

೬) ಎಂ. ವರಾಹಮೂರ್ತಿ.

ನೆಲವನ್ನು ಮೂಸಿ ನೋಡುತ್ತ ಅತ್ತಿತ್ತ ಅಡ್ಡಾಡುತ್ತಿದ್ದರು.

೭) ಶ್ರೀ ಉಚ್ಚೈಶ್ರವಾನಿಯವರು.

ಮೇಲಿಂದ ಮೇಲೆ ಹೇಂಕರಿಸುತ್ತ ಏಕಚಿತ್ತರಾಗಿ ಹುಲ್ಲು ಮೆಲಕಾಡಿಸುತ್ತಿದ್ದರು.

೮) ಶಾಂತಿಲಾಲ ಗಾರ್ದಭರು.

ಈ ದಿನದ ಅಧ್ಯಕ್ಷ ಪದವು ತಮಗೇ ಸಿಗಬೇಕೆಂದು ಪರಮಾತ್ಮನಲ್ಲಿ ಪ್ರಾರ್ಥನೆ ನಡೆಸಿದ್ದರು.

೯) ನರಿಯಣ್ಣ ಗವಿಮಠ.

ಶಾಂತಿಲಾಲರಿಗೆ ಸಿಗತಕ್ಕ 'ಹೋಟು' ಗಳನ್ನು ಒಡೆಸುವದರಲ್ಲಿ ಮಗ್ನರಾಗಿದ್ದರು

೧೦) ಸೌ. ಸೀತಾಬಾಯಿ ಬಕರಿ.

ಜಾಲೀ ಗಿಡದ ಬುಡದಲ್ಲಿ ಜಾಲಿಕಾಯಿಗಳನ್ನು ಸವಿಯುತ್ತ ನಿಂತಿದ್ದರು.

೧೧) ಹಣಮಂತಾಚಾರ್ಯ ಅದ್ಕರು.

ಕಂಡ ಕಡೆಗೆ ಕುರಿಸಿಕೊಳ್ಳುತ್ತ ಚಂಚಲ ಚಿತ್ತದಿಂದ ಕುಳಿತಿದ್ದರು.

೧೨] ಶುಕ್ರಾಚಾರ್ಯ ಕಾಕರು.

ವರದಿಕಾರರು ಹಾಗೂ ಕಾರ್ಯದರ್ಶಿಗಳಾಗಿ ಕೆಲಸ ನಡೆಸಿದ್ದರು

ಅಧ್ಯಕ್ಷರ ಆಯ್ಕೆ

ಕಾರ್ಯದರ್ಶಿ ಕಾಕರು — ಮಿ. ನರಿಯಣ್ಣ ಹಾಗೂ ಗಾರ್ದಭರಾಯರೇ ತಮ್ಮನ್ನೇ ಅಧ್ಯಕ್ಷಪದಕ್ಕಾಗಿ ಏಕೆ ಇಷ್ಟು ಶ್ರಮ ಪಡುವಿರಿ. ಇಂದಿನ ಯಾವ ಫಂಡು ಕೂಡಿಸುವ ವಿಚಾರವಿಲ್ಲ. ಇಂದಿನ ಸಭೆಯು ಅನೌಪಚಾರಿಕವಿದ್ದದ್ದರಿಂದ ಅಧ್ಯಕ್ಷರು ಕೇವಲ ಒಂದು ಗೌರವದ ಗೊಂಬೆ ಎಂದು ತಿಳಿಯಿರಿ.

ಸೌ. ಸುಂದರಾಬಾಯಿ ಮಹಿಷಿ — ಇಶ್ !! ತಾಯಿ ಬರೀ ಅಧ್ಯಕ್ಷರಾಗುವ ಜಗಳಾಟದಲ್ಲಿ ವ್ಯಾಳ್ಯಾ ಕಳದರ ಬಾಕೀ ಕೆಲಸ ಯಾವಾಗ ಅಗಬೇಕು. ಲಗೂ ಲಗೂ ಅಷ್ಟು ಸಭಾ ತೀರಿಸಿ ಹಿಂದುಕೊಳ್ಳು ಹೋತ್ತು ಆಗುವದರೊಳಗ ಮನೆ ಕಾಣೂನ. ಅಲ್ಲೇನ್ರಿ ಗಾಯತ್ರಿ ಬಾಯಿ ?

ಶ್ರೀ ಗಾಯತ್ರಿ ಬಜಾಜರು-ಗೋಣು ಅಲ್ಲಾಡಿಸಿ ಸಮ್ಮತಿ ಸೂಚಿಸಿದರು.

ಶ್ರೀ ಬಲಭೀಮ ನಂದಿಯವರು — ಹೀಗೆ ಜಗಳಾಡುವವರಿಗೆ ಎಷ್ಟೂ ಮಹತ್ವ ಕೊಡಬೇಡಿರಿ. ಅವರನ್ನು ಬದಿಗೆ ಸರಿಸಿ ಈವೊತ್ತಿನ ಸಭೆಗೆ ನಮ್ಮ ಹಣಮಂತಾಚಾರ್ಯ ಅದ್ಕರನ್ನೇ ಅಧ್ಯಕ್ಷರನ್ನಾಗಿ ಮಾಡೋಣ ಎಂದು ಹೇಳಿ ಒಂದು ದೊಡ್ಡ ಡುರಕಿ ಹೊಡೆದರು.

ಅವರ ವರ್ಚಸ್ಸು ಸಭಾಸದರ ಮೇಲೆ ಹೆಚ್ಚಾಗಿದ್ದದ್ದರಿಂದ ಅವರ ಸೂಚನೆಯೇ ಒಮ್ಮೆಲೆ ಸ್ವೀಕೃತವಾಗಿ ಶ್ರೀ ಹಣಮಂತಾಚಾರ್ಯ ಅದ್ಕರ ಅಧ್ಯಕ್ಷತೆಯಲ್ಲಿ ಸಭೆಯು ಮುಂದೋರಾಯಿತು. ಕಾಕರು ತಮ್ಮ ನಗರ ಸಂಚಾರದ ವರದಿಯನ್ನು ಓದಿ ಗೊತ್ತುವಳಿ ಮಂಡಿಸುವರು.

ಕಾಕರು— ಈ ದಿನ ನಾನು ಜಲ ಮಾಳಿಗೆ ಕಂಬಿ, ೩೫ ಅಂಗಳ ಹಾಗೂ ೩೧೦ ಗಿಡಗಳ ಟೊಂಗೆಗಳ ಮೇಲಿಂದ ಕಂಡುಹಿಡಿದದ್ದೇನಂದರೆ ನಮ್ಮ ದೇಶವಿಂದು ಸ್ವತಂತ್ರವಾಗಿದ್ದು, ಎಲ್ಲರೂ 'ಸ್ವತಂತ್ರ' 'ಸ್ವತಂತ್ರ' ಎಂದು ಹೇಳಿಕೊಳ್ಳುತ್ತಿದ್ದಾರೆ. ಹಿಂದುಸ್ತಾನದ ಹಿರಿಯರು ಕಿರಿಯರು, ಹೆಂಗಸರು ಗಂಡಸರು ಶ್ರೀಮಂತರು ಬಡವರು ಎಲ್ಲರೂ ಈಗ ಸ್ವತಂತ್ರರಾಗಿದ್ದಾರೆ. ಆದಕ್ಕಾಗಿ ಅದೇ ದೇಶದಲ್ಲಿ ವಾಸಿಸುತ್ತಿರುವ ನಾವಾದರೂ ಸಹ ಸ್ವತಂತ್ರರಾಗಲೇಬೇಕು. ಅದಕ್ಕಾಗಿ 'ಮಾಡುವ ಇಲ್ಲವೇ ಮಡಿಯುವ' ಈ ಗೊತ್ತುವಳಿಯನ್ನು ಇಲ್ಲಿ ಇಟ್ಟಿದ್ದೇನೆ. ಅದು ಇಂತಿದೆ.

"ಸ್ವರ್ಣಭೂಮಿ ಹಿಂದುಸ್ತಾನದಲ್ಲಿ ವಾಸಿಸುತ್ತಿರುವ, ಸರ್ವ ಜಾತಿ, ಪ್ರಕಾರ, ಆಕಾರ ವಿಕಾರದ ಪಶುಪಕ್ಷಿಗಳೆಲ್ಲವೂ ಇಂದಿನಿಂದ ತಮ್ಮ ಜನ್ಮಸಿದ್ಧ ಹಕ್ಕಾದ ಸ್ವಾತಂತ್ರ್ಯವನ್ನು ಸಾಧಿಸಲು ನಿರ್ಧಾರ ಮಾಡುತ್ತವೆ. ಮತ್ತು ಅದನ್ನು ತೀವ್ರವೇ ಸಂಪಾದಿಸಲು ಒಟ್ಟು ಬಹುಮತದಿಂದ ಆರಿಸಲ್ಪಟ್ಟ ಒಬ್ಬ ಯೋಗ್ಯ ಧುರೀಣನ ಮಾರ್ಗದರ್ಶನದಲ್ಲಿ ಮನುಷ್ಯರ ಕೂಡ ಸಂಪೂರ್ಣ ಅಹಿಂಸೆ ಹಾಗೂ ಅಸಹಕಾರ ಹೋರಾಟ ಹೂಡಿ ಮೇಲೆ ವರ್ಣಿಸಿದ ಪ್ರತಿಯೊಂದು ಪ್ರಾಣಿಯೂ 'ಮಾಡು ಇಲ್ಲವೇ ಮಡಿ' ಪ್ರತಿಜ್ಞೆಯನ್ನು ಇಂದು ಕೈಕೊಳ್ಳುತ್ತದೆ."

ಈ ಗೊತ್ತುವಳಿಯ ಮಹತ್ವವನ್ನರಿತು ಎಲ್ಲರೂ ಇದನ್ನು ಸ್ವೀಕರಿಸುವರೆಂದು ನಂಬಿದ್ದೇನೆ.

ದತ್ತಾತ್ರೇಯ ನಾಯಕರು— Let us go clause by clause ಹಾಗೆ ಗಡಿಬಿಡಿ ಮಾಡುವದು ಬೇಡ ಮೊದಲು 'ಸ್ವತಂತ್ರ' ಅಂದರೇನು ಅದು ಹೇಗಿರುತ್ತದೆ ಇದನ್ನು ಹೇಳಿರಿ ಕಾಕರೆ.

ಎಂ ವರಾಹಮೂರ್ತಿ— (ನಡುವೆ ಬಾಯಿ ಹಾಕಿ) ಸ್ವತಂತ್ರ ಅಂದರೆ ಗೊತ್ತಿಲ್ಲೇನ? ಈ ಹೊತ್ತು ಆ ಮುನಸಿಪಾಲಟಿಯಿಂದ ನಂಬರ ಹಚ್ಚಿಗೊಂಡು ನಿಂತ ಜನಾ ಸುದ್ಧಾ ಅದ ಮಾತಾಡುತಿತ್ತು, ಮಂತ್ರಿ ಆಗೋದು ಗವರ್ನರ ಆಗೋದು ಎಲ್ಲಾ ಅದ ಅಂತ ಅದರೊಳಗ.

ಶಾಂತಿಲಾಲ ಗಾರ್ದಭರು— 'ಸ್ವತಂತ್ರರು' ಅಂದರ ಇನ್ನು ಮುಂದ ಒದ್ದರಕಲ್ಲ, ಬೀಸೂಕಲ್ಲ ಹೊರುಹಾಂಗಿಲ್ಲವೇನು? ಅಗಸರ ಮುಟ್ಟಿನೂ ಇಲ್ಲೇನು? ಹಾಂಗಾರ ಇರಲಿಪಾ ಈ ಸ್ವತಂತ್ರ, ಬೆಸ್ ಅದ, ಬೇಶ್ ಅದ.

ಕಾಕರು- ಹೌದು, ಹಿಂದುಸ್ತಾನದ ಮನುಷ್ಯರು ತಾವು ಗುಲಾಮರಿದ್ದೀವಿ ತಮಗೆ ಸ್ವಾತಂತ್ರ್ಯ ಬೇಕು ಅಂತಾ ಒದರಾಡಿ ಚೀರಾಡಿ ಸ್ವಾತಂತ್ರ್ಯ ಗಳಿಸಿಕೊಂಡರು. ಆದರ ಅವರು ಕೇವಲ ೧೫೦ ವರ್ಷಗಳ ವರೆಗೆ ಮಾತ್ರ ಗುಲಾಮರಾಗಿದ್ದರು ನಮ್ಮನ್ನು ನೋಡಿರಿ ಸಾವಿರಾರು ವರ್ಷಗಳಿಂದ ಈ ಮನುಷ್ಯರ ಗುಲಾಮರಾಗಿದ್ದೀವಿ. ನಮಗಾಗುವ ಅನ್ಯಾಯ ಅತ್ಯಾಚಾರಗಳನ್ನು ಜಗತ್ತಿನಲ್ಲಿ ಬೇರೆ ಯಾವ ಪ್ರಾಣಿಗಳೂ ಸಹಿಸುವದಿಲ್ಲ ನಾವು ಇಷ್ಟು ಕೆಲಸಮಾಡಿದರೂ ನಮಗೆ ಮಾನ ಮುಚ್ಚಿಕೊಳ್ಳಲು ಸಹ ಒಂದು ಗೇಣು ಬಟ್ಟೆಯಿಲ್ಲ ಸೌ ಮಹಿಷಿಯಂಥ ಹೆಂಗಸನ್ನು ಒತ್ತಿಹಿಡಿದು ಕಿವಿ ಹರಿದರು. ಗಾಯತ್ರಿ ದೇವಿಯವರನ್ನು ಅವರ ಪತಿಯಿಂದ ಹಾಗು ಪತಿಯ ಪುತ್ರರಿಂದ ಬೇರ್ಪಡಿಸಿದರು ಉಚ್ಚೈಶ್ರವಾನಿಯವರಿಗೆ ಆಜನ್ಮ ಬ್ರಹ್ಮಚಾರಿಯಾಗಿರಬೇಕಾಯ್ತು. ನಂದಿಯವರಿಗಂತೂ ನೇಗಿಲಿಗೆ ಹೂಡುವ ಮೊದಲು ಅತಿ ಕ್ರೂರ ಚಿತ್ರಹಿಂಸೆ ಮಾಡಲಾಯಿತು ಯಮರಾಜಪೀಠರ ಕೊಗಲು ಸ್ವಲ್ಪ ಬಲಿತಕೂಡಲೇ ಅವರಿಗೆ ಕಟುಕರ ಮನೆ ದಾರಿ ತೋರಿಸುತ್ತಾರೆ. ಒಂದಾ ಎರಡಾ ಎಷ್ಟು ಅತ್ಯಾಚಾರಗಳು! ನಾವೇಕೆ ಇದಕ್ಕೆ ಬಗ್ಗಬೇಕು? ನಾವೂ 'ಸ್ವತಂತ್ರ' ರಾಗೋಣ. ಅದಕ್ಕಾಗಿ ಈ ಗೊತ್ತುವಳಿಯು ಪಾಸಾಗಲಿ ಗೆಳೆಯರೇ.

ಸೌ ಮಹಿಷಿ (ಹರಳ ಕಿವಿ ಅಳಗಾಡಿಸುತ್ತ)— ಬರಿ ಗೊತ್ತುವಳಿ ಪಾಸ ಮಾಡಿದರ ಏನಾದ್ಹಾಂಗಾತು? Action ಬೇಕು Action; ಕೃತಿ ಅಥವಾ ಕೆಲಸಬೇಕು. ಅದನ್ನು ಏರಾಯಿಸು ಮೊದಲು.

ಕಾಕರು— ಒಂದಂದ್ಹ ಮುಗಸೋಣ ಸುಂದರಾಬಾಯ್ರಿ Let us be logical and constitutional ಮೊದಲು ಈ ಗೊತ್ತುವಳಿ ಪಾಸಾಗಲಿ. ನಂತರ ಯಾವರೀತಿ ಕೆಲಸ ನಡೆಸಬೇಕೆಂಬುದಕ್ಕೆ ಒಂದು 'Action' ಕಮಿಟಿ ನೇಮಿಸೋಣ.

ಹಣಮಂತಾಚಾರ್ಯ ಅದ್ಕರು— ಕಾಕರನ್ನುವದು ಸರಿ Let us put it to vote ಗೊತ್ತುವಳಿಯನ್ನು ಮತಕ್ಕೆ ಹಾಕೋಣ. ಒಪ್ಪಿಗೆಯಿದ್ದವರು ಹೇಳರಿಸಿರಿ. (ಸ್ವಲ್ಪ ತಡೆದು) ಹೂಂ ಸ್ವೀಕೃತವಾಯಿತು. yes, next item Mr Kak

ಕಾಕರು— yes sir ಇನ್ನು ಮುಂದೆ ಈ ಗೊತ್ತುವಳಿಯ ಪ್ರಕಾರ ನಮ್ಮ ಹೋರಾಟವನ್ನು ಸಾಗಿಸಿಗೊಂಡು ಹೋಗಲಿಕ್ಕೆ ಧುರೀಣನನ್ನು ಆರಿಸುವದು. ಈ ಚಾಣಾಕ್ಷರಾದ ಮನುಷ್ಯರ ಕೂಡ ಹೋರಾಟ ಸಾಗಿಸಬೇಕಾದರೆ ನಮಗೂ ಗಾಂಧಿಯವರಷ್ಟೇ ಯೋಗ್ಯತೆಯುಳ್ಳ ಪಶುಪಕ್ಷಿಗಳಲ್ಲೊಬ್ಬರು ಬೇಕಾಗುತ್ತಾರೆ

ಉಚ್ಚೈಶ್ರವಾನಿಯವರು — ಗಾಂಧಿಯವರಷ್ಟೇ ಯೋಗ್ಯತೆ ಉಳ್ಳವರೆಂದರೆ, ಸ್ವತಃ ಗಾಂಧಿಯವರಿಗೆ ಹಾಲುಣಿಸಿ ಅವರಿಗೆ ಮಾತೃಸಮಾನರಾದ ಸೌ॥ ಸೀತಾಬಾಯಿ ಬಕರಿಯವರು ಇದಕ್ಕೆ ಯೋಗ್ಯವಾಗಬಹುದೇನು ?

ನಾಯಕರು— ಛೀ ಛೀ, ಗಾಂಧೀಜಿಯವರ ಅಹಿಂಸೆಯ ಮಾರ್ಗದಿಂದ ನಾವು ಹೋಗುವದಾದರೆ, ಅಹಿಂಸೆಯ ಮೂರ್ತಿಮಂತರಾದ ಶ್ರೀ. ಶಾಂತಿಲಾಲ ಗಾರ್ದಭರೇ ಅದಕ್ಕೆ ಯೋಗ್ಯರಾದಾರು.

ಸೌ॥ ಗಾಯತ್ರಿದೇವಿ — ನನ್ನ ದೃಷ್ಟಿಯಲಿ ನೋಡಿದರೆ ಈ ಕೆಲಸ ಒಬ್ಬ ಗಟ್ಟಿಳ್ಳವರ ಕಡಿಂದೇ ಆಗಬಹುದೆಂದೆನಿಸುತ್ತದೆ. ಮೆತ್ತಗಿನ ಪ್ರಾಣಿಗಳಿಂದ ಈ ಕೆಲಸ ಆಗುವದಾಗಿಲ್ಲ. ಆದಕ್ಕೆ ನಮ್ಮ ಬಲಭೀಮ ನಂದಿಯವರೇ ಇದಕ್ಕೆ ಯೋಗ್ಯರು ಎಂದು ನಾನು ಹೇಳಬಲ್ಲೆ.

ನರಿಯಣ್ಣ ಗವಿಮಠ— ಒಮ್ಮೆಲೆ ರೊಚ್ಚಿಗೆದ್ದು ನಾನೆಂದೂ ಅದಕ್ಕೆ ಒಪ್ಪಲಿಕ್ಕಿಲ್ಲ. ಪಶುಕೋಟಿಯಲ್ಲಿ ಮೊದಲು ಗುಲಾಮಗಿರಿಯ ಮುಹೂರ್ತ ಮಾಡಿದವರು ಬಲಭೀಮರು. ಅವರಲ್ಲಿ ಶಕ್ತಿಯಿದ್ದರೂ ಯುಕ್ತಿ ಇಲ್ಲ. ನಮಗಿಂದು ಶಕ್ತಿಗಿಂತ ಯುಕ್ತಿಯವರು ಬೇಕು. ಗಾಂಧಿಯವರಂತೆ ಹಿಂಸಾ, ಅಹಿಂಸಾ, ಅಂತಾ ನಡದರ ನಮ್ಮೊಳಗೂ ಹಿಂದುಸ್ತಾನ ಪಾಕಿಸ್ತಾನವಾಗಬಹುದು.

ಕೃಷ್ಣದಾಸ ಯಮರಾಜಪೀಠ— ಹಾಗಾದರೆ ಅದಕ್ಕೆ ನೀವೇ ಯೋಗ್ಯರಾಗಬಹುದು. ನಿಮ್ಮ ಯುಕ್ತಿಗಾಗಿ ನೀವು ತ್ರಿಲೋಕದಲ್ಲಿಯೂ ಕೀರ್ತಿಗಳಿಸಿದ್ದೀರಿ.

ನಾಯಕರು— ಅವರಲ್ಲಿ ಯುಕ್ತಿ ಇದ್ದರೂ ವಿಶ್ವಾಸ ನಂಬಿಗೆ ಇಲ್ಲ. ನಡುನೀರಿನಲ್ಲಿ ನಮ್ಮ ಕೈ ಬಿಡಬಹುದು. ಮತ್ತು ಮನುಷ್ಯರ ಕೂಡ ಹೋರಾಡಬೇಕಾದರೆ ಅದಷ್ಟು ಹೆಚ್ಚು ಅವರಲ್ಲಿ ಬೆರೆತವರಿರಬೇಕು. ಅಂದರೆ ಹೋರಾಟ ಸಾಗಿಸಲು ಅನುಕೂಲವಾಗುವದು. ಈ ಎರಡು ದೃಷ್ಟಿಯಿಂದ ವಿಚಾರಿಸಿದರೆ ನಾನು ನಿಮಗೆ ಹೆಚ್ಚು ಉಪಯೋಗ ಬೀಳಬಹುದು ನಿಮ್ಮ ಅನುಮತಿ ಹಾಗೂ ಸಹಕಾರವಿದ್ದರೆ ನಾನೇ ಆ ಹೊಣೆಯನ್ನು ಹೊರಬಹುದು.

ಕಾಕರು— ಮನುಷ್ಯ ಸಂಪರ್ಕ ಈ ದೃಷ್ಟಿಯಿಂದ ನೀವು ವಿಚಾರ ಮಾಡುತ್ತಿದ್ದರೆ ನಾಯಕರಿಗಿಂತಲೂ ನಾನು ನಿಮಗೆ ಹೆಚ್ಚು ಉಪಯೋಗ ಬೀಳಬಹುದು ನಾನು ಒಂದು ದಿನದಲ್ಲಿ ಆಡ್ಡಾಡಿ ಮನುಷ್ಯರನ್ನು ಸಂದರ್ಶಿಸಿದಷ್ಟು ನಾಯಕರು ತಮ್ಮ ಇಡೀ ಆಯುಷ್ಯದಲ್ಲಿ ಮಾಡಲಿಕ್ಕಿಲ್ಲ. ಮೇಲಾಗಿ ನಮ್ಮ ಬಳಗ ಬಹಳ. ನಮ್ಮಂಥ ಸುದ್ದಿಗಾರರಿಂದಲೇ ನೀವಿಂದು ಇಷ್ಟು ಜಾಗ್ರತರಾಗಿರುವಿರಿ.

ಶಾಂತಿಲಾಲ ಗಾರ್ದಭ— ಹೌದು ಹೌದು, ಎಲ್ಲಾ ದೃಷ್ಟಿಯಿಂದ ವಿಚಾರಮಾಡಿದರೆ ಕಾಕರೇ ಯೋಗ್ಯರಾಗಬಹುದು. ಅವರ ಬಳಗದಲ್ಲಿ ಸಹಕಾರ ಬಹಳ. ಒಂದು ವೇಳೆ ಸತ್ಯಾಗ್ರಹ ಹೂಡುವ ಪ್ರಸಂಗ ಬಂದರೆ ಅವರು ಕೋಟಿಗಟ್ಟಲೆ ಕಾಕರನ್ನು ಕೂಡಿಸಬಹುದು. ಗಾಂಧಿಯವರ ಚಳವಳಿಗಿಂತಲೂ ಅದು ಹೆಚ್ಚು ಉಗ್ರವಾಗಬಹುದು. ಮತ್ತು ಮನುಷ್ಯರಾದರೂ ಕಾಕರನ್ನು ಮುಟ್ಟಲು ಹೆದರುವರು. ಅವರು ಮನುಷ್ಯರ ಕೂಡ ಅಸಹಕಾರ ಹೂಡಿ ಬಿಟ್ಟರೆ ಮನುಷ್ಯರ ಪಿಂಡಾ ಮುಟ್ಟದ ಕಾರಣ ಸ್ವರ್ಗದ ಬಾಗಿಲು ಮುಚ್ಚಿ ಅವರು ಇಲ್ಲದಾಗಿ ಕೂಡಲೇ ಸ್ವರ್ಗ, ನರಕ, ಹಾಗೂ ಮರ್ತ್ಯಲೋಕದಲ್ಲಿ ಹಾಹಾಕಾರ ಉಂಟಾಗುವದು. ಮನುಷ್ಯರು ಒಮ್ಮೆಲೆ ಒಪ್ಪಂದಕ್ಕೆ ಬರಬೇಕಾಗ ಬಹುದು

ಬಲಭೀಮ ನಂದಿಯವರು— (ಗುಟುರು ಹೊಡೆದು) ಏನಿದು ಅವಿಚಾರಿತನ! ಮನುಷ್ಯರ ಜೊತೆಗೆ ಇರುವದು ಈ ಕಾಕರಿಂದಾಗಬಹುದೇ? ಮನುಷ್ಯರ ಎಂಜಲ ತಿಂದು ಬದುಕುವವರು ಮನುಷ್ಯರ ಕೂಡ ಅಸಹಕಾರ ಹೂಡುವರೆ? ಮೇಲಾಗಿ ಇವರ ಸಂಬಂಧ ಸತ್ತ ಮನುಷ್ಯರ ಕೂಡ. ನನ್ನದು ಜೀವಂತ ಮನುಷ್ಯರ ಕೂಡ. ನಾನು ಅಸಹಕಾರ ಹೂಡಿದರೆ ಅವರಿಗೆ ಧಾನ್ಯ ಬೆಳೆಯುವದೇ ಅಸಾಧ್ಯವಾಗಿ ಅವರು ಉಪವಾಸ ಸಾಯಬೇಕಾಗುವದು. ನಾವು ಈಗ ಅಸಹಕಾರದ ನೋಟೀಸ ಕೊಟ್ಟರೆ ಸ... ಮಾನವ ಕೋಟಿಯೆಲ್ಲ ಬಂದು ನಿಮ್ಮ ಚರಣ ಕಮಲದಲ್ಲಿ ಬೀಳಬಹುದು. ಕಾಕರೇನು ಪಶು ವರ್ಗದವರೇನು? ಅವರಿಗೆ ಪಶುಜಾತಿಯ ಕಷ್ಟ ನಷ್ಟಗಳೇನು ಗೊತ್ತಾದಾವು?

ಕಾಕರು— ಹಾ! ಬಲಭೀಮ ನಂದಿಯವರೇ ಜಾತೀಯ ಪ್ರಶ್ನೆ ಎತ್ತಬ್ಯಾಡಿರಿ ಹಾಗಿದ್ದರೆ ಗರುಡ ಗುಬ್ಬಿ, ಗಿಳಿ, ಕೊಗಲಬಾವಲಿ, ಕಾಗಿ, ಹದ್ದು ಇತ್ಯಾದಿ ವಿಹಂಗಮಗಳು ಕೂಡಿ ತಮ್ಮದೊಂದು 'ಖಗಸ್ಥಾನ'ವನ್ನೆ ಸ್ಥಾಪಿಸಿಕೊಳ್ಳುವವು. ನಮ್ಮ ಸಹಕಾರ ಕಳೆದುಕೊಂಡುಬಿಟ್ಟರೆ ನಿಮಗೆ ಸುದ್ದಿ ತಿಳಿಸುವವರು ಯಾರು ಇಲ್ಲದಾಗಿ, ಅಜ್ಞಾನದ ಅಂಧಕಾರದಲ್ಲಿಯೇ ನೀವು ಕೊಳೆಯಬೇಕಾದೀತು!

ಶಾಂತಿಲಾಲ ಗಾರ್ದಭರು:— ಶಾಂತರಾಗಿರಿ ಶಾಂತರಾಗಿರಿ; ನಾವೂ ಮನುಷ್ಯರಂತೆ ಜಾತೀಯತೆ ಅಂತ ಜಗಳಾಡುತ್ತ ಕೂಡುವದು ಸರಿಯಲ್ಲ ಪರಸ್ಪರ ಪ್ರೀತಿ ಸಹಕಾರ ಹಾಗೂ ವಿಶ್ವಾಸದಿಂದ ಇರೋಣ ನಮ್ಮೊಳಗೆ ಪಶುಗಳಂತೆ ಭೂಚರರು ಹಾಗೂ ಪಕ್ಷಿಗಳಂತೆ ಗಿಡದಿಂದ ಗಿಡಕ್ಕೆ ಹಾರಬಲ್ಲವರೂ ಆದ ಶ್ರೀ ಹಣಮಂತಾಚಾರ್ಯ ಅದ್ಕರನ್ನೇ 'ಸರ್ವಾಧಿಕಾರಿ' ಎಂದು ಆರಿಸಿಬಿಟ್ಟರೆ ಈ ಹೊಡೆದಾಟವೇ ತಪ್ಪುವದು. ಅವರು ಪಶುಪಕ್ಷಿ ಈ ಎರಡೂ ವರ್ಗಗಳ ಕಷ್ಟನಷ್ಟಗಳನ್ನು ಬಲ್ಲವರಾದ್ದರಿಂದ ಮತ್ತು ಅವರಲ್ಲಿ ಬ್ರಿಟಿಶ ಅಮೇರಿಕನ್ನರ ಮುತ್ಸದ್ದಿತನವೂ ಕಾರ್ಯಕುಶಲತೆಯೂ ಇರುವದರಿಂದ, ಈ ಹೊಣೆಯನ್ನು ಚನ್ನಾಗಿ ಸಾಗಿಸಿಕೊಂಡು ಹೋಗಬಲ್ಲರು. 'ಹಣಮಂತಾಚಾರ್ಯ ಅದ್ಕ ಕೀ ಜೈ' ಎಂದು ವಿಶಿಷ್ಟ ಸ್ವರದಿಂದ ಜೈಜೈಕಾರ ಮಾಡಿಬಿಟ್ಟರು.

ಅದರಿಂದ ಸಭೆಯಲ್ಲಿ ಎಲ್ಲರ ಚಿತ್ತ ಚಂಚಲವಾಯಿತು. ಕಾಕರಾದರು ಅತ್ಯಂತ ನಿರಾಶರಾಗಿ ಅತ್ತಿತ್ತ ನೋಡಹತ್ತಿದರು. ಅಷ್ಟರಲ್ಲಿ ಅವರಿಗೆ ಆ ನದಿಯ ದಂಡೆಯ ಮೇಲೆ ಒಂದು ಬುತ್ತಿಗಂಟು ಕಾಣಿಸಿಕೊಂಡಿತು. ಅದರ ದರ್ಶನ ಮಾತ್ರದಿಂದಲೇ ಕಾಕರು ಸಂತೋಷ ಭರಿತರಾಗಿ ಕಾ, ಕಾ, ಎಂದು ಗಾರ್ದಭರೊಂದಿಗೆ ಕೂಗಿಕೊಂಡರು. ಇದರಿಂದ ಪಶು ಪಕ್ಷಿ ನ್ಯಾಯ ಬಗೆಹರಿಯಿತೆಂದು ಉಪಸ್ಥಿತರೆಲ್ಲರೂ ಪಶುಪಕ್ಷಿ ಲೋಕಕೀ ಜೈ ಎಂದು ಕೂಗಿಕೊಂಡರು ಆದರೆ, ಹಣಮಂತಾಚಾರ್ಯರಿಗೆ ಮಾತ್ರ ಕಾಕರ ಈ ಅನಪೇಕ್ಷಿತ ಜೈ ಜೈ ಕಾರದ ಸಂಶಯ ಬಂದಿತು. ಕಾಕರ ಮೇಲೆ ಒಂದು ದುರ್ದಿನ ದೃಷ್ಟಿಯನ್ನು ಬೀರಿದರು ಕೂಡಲೇ ಅವರಿಗೆ ಕಾಕರ ಲಕ್ಷ್ಯವು ಬುತ್ತಿಗಂಟಿನ ಮೇಲೆ ಬಿದ್ದದ್ದು ಗೊತ್ತು ಅದಕ್ಕಾಗಿ ಅವರು ಜಿಗಿದು ಹೋಗುವ ತಯಾರಿಯಲ್ಲಿದ್ದದ್ದು ಕಂಡು ಬಂದಿತು. ಕೂಡಲೇ ಒಂದು ಕ್ಷಣ ಸಹ ವ್ಯಯಮಾಡದೆ ಟಣ್ಣನೇ ಹಾರಿ ಕಣ್ಣು ಮುಚ್ಚಿ ಕಣ್ಣು ತೆರೆಯುವದರಲ್ಲಿ ಆ ಬುತ್ತಿಗಂಟಿನೊಂದಿಗೆ ಕಾಣೇ ಮಾಯವಾಗಿಬಿಟ್ಟರು ಇಲ್ಲಿ ಕಾಕರಿಗೆ ಯಾವದೋ ಹಿಂದಿನ ಶರಿ ಬಂದದ್ದರಿಂದ ಅವರೂ ಗುಪ್ತವಾಗಿಬಿಟ್ಟರೂ ಉಳಿದ ಸಭಿಕರಿಗೆ ಇದರ ಗಂಧವು ಕೂಡ ಹತ್ತಲಿಲ್ಲ. ಅವರು ದಿಗಿಲುಗೊಂಡು ನಿರುಪಾಯರಾಗಿ ಚದುರಿಬಿಟ್ಟರು.

ಅಂತೂ ಬುತ್ತಿಗಂಟಿಗಾಗಿ ಸಭೆಯು ಈ ರೀತಿ ಅನಿರೀಕ್ಷಿತವಾಗಿ ಕೊನೆಗಂಡಿತು ಗೊತ್ತುವಳಿಯ ಪೂರ್ವ ಭಾಗದ ಪ್ರಕಾರ ಅವರು ಸ್ವತಂತ್ರರಾಗಲು ನಿರ್ಧರಿಸಿದಂತಾಯ್ತು. ಈ ಬುತ್ತಿಗಂಟು ಕಾಣಿಸಿಕೊಳ್ಳದಿದ್ದರೆ ಸರ್ವಾಧಿಕಾರಿಯನ್ನು ಆರಿಸಿ ಮುಂದಿನ ಕಾರ್ಯದ ಯೋಜನೆಯನ್ನು ಸಹ ಗೊತ್ತುಪಡಿಸಬಹುದಾಗಿತ್ತು. ಆದರೆ ಅವು ಹೀಗೆ ಒಂದಾಗಿ ಬಿಟ್ಟರೆ ಮನುಷ್ಯರ ಹಾಗೂ ದೇವಲೋಕದಲ್ಲಿಯೂ ಸಹ ಗಂಡಾಂತರ ಬಂದೀತೆಂಬ ಭಯದಿಂದ ಪರಮಾತ್ಮನೇ ನದಿಯ ದಂಡೆಯ ಮೇಲೆ ಆ ಬುತ್ತಿ ಗಂಟನ್ನು ಒಗೆದಿರಬೇಕೆಂದು ನಮ್ಮ ತರ್ಕ.

× ಹಿಂದಿನ ಅಂಕ್ಕದಲ್ಲಿ [illegible]



ಜ್ಯೋತಿಷಿ— ಕೃಷ್ಣಶಾಸ್ತ್ರಿ ಭಿಡೆ ಭವಿಷ್ಯ ಕಥನ ಅಫೀಸ ಖಡೇಬಜಾರ ಬೆಳಗಾವಿ.

ಏಪ್ರಿಲ ೧೨ರಿಂದ ೧೮ ರ ವರೆಗೆ

ಮೇಷ

ಆರೋಗ್ಯ ದಿನದಿಂದಿನಕ್ಕೆ ಸುಧಾರವಾಗುತ್ತ ನಡೆವುದು. ಪ್ರಾಪಂಚಿಕ ಸುಖ ಬಹಳ ಉತ್ತಮ. ಆದರೆ ಅತ್ತರೊಬ್ಬರಿಂದ ಬಹಳ ತೊಂದರೆ. ಮತ್ತು ಬಹಳ ಒತ್ತಾಯಪಡಿಸಿ ಬೆದರಿಸುವ ಪ್ರಯತ್ನ. ಉದ್ಯೋಗದಲ್ಲಿ ಉತ್ತಮ. ಪ್ರಗತಿ ಪ್ರತಿಷ್ಠೆ ಸಾಮಾನ್ಯ. ಆದರೆ ಲಾಭ ತುಂಬ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ವೆಚ್ಚ ಮತ್ತು ತೊಂದರೆ ಬಹಳ. ಆದರೆ ಕೊನೆಗೆ ಒಳ್ಳೇ ಅನುಕೂಲತೆ. ಮಿತ್ರತ್ವದಲ್ಲಿ ಸ್ವಲ್ಪ ವಿರೋಧ. ನಿರರ್ಥಕ ವೆಚ್ಚ ಬಹಳ ವಿಷಯಗಳಲ್ಲಿ. ಪ್ರವಾಸ ಮತ್ತು ಭೆಟ್ಟಿ ಪತ್ರವ್ಯವಹಾರಕ್ಕಿಂತ ಹೆಚ್ಚು ಅನುಕೂಲ. ಅಶ್ವಿನಿಯ ಕೊನೆಯ ೩ ಮತ್ತು ಭರಣಿಯ ೧ನೇ ಚರಣಕ್ಕೆ ತೊಂದರೆ ಕಡಮೆ. ತಾ. ೧೨, ೧೩, ೧೪, ೧೫ ಅನುಕೂಲ.

ವೃಷಭ

ನಿಮ್ಮ ಮತ್ತು ಮಕ್ಕಳು ಮರಿಗಳ ಪ್ರಕೃತಿ ಉತ್ತಮ. ಆದರೆ ಹೆಂಡತಿಯದು ಸ್ವಲ್ಪ ಕೆಡುವದು. ಮತ್ತು ಅವಳ ಪ್ರಕೃತಿಯೊಂದು ಮಾತಿನಲ್ಲಿ ನಿರರ್ಥಕವಾಗಿ ತೊಂದರೆ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಅನುಕೂಲ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಮನಸ್ಸಿನಂತೆ. ಆದರೆ ನಿರರ್ಥಕ ವೆಚ್ಚ ಬಹಳ ಆಗುವದರಿಂದ ಮನಸ್ಸು ಬೇಸರಗೊಳ್ಳುವದು. ಬಂಧುವರ್ಗದವರಿಂದ ಬಹಳ ತೊಂದರೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉತ್ತಮ ಯಶಸ್ಸು. ಸ್ವಜಾತೀಯವರೊಡನೆ ಕೆಲವೊಂದು ಗ್ರಾಮ ಕಾರ್ಯದಲ್ಲಿ ಮತಭೇದವಾಗುವದರಿಂದ ಬಹಳ ಸ್ಪರ್ಧೆ. ಸಾಧು ಇಲ್ಲವೆ ಪಾರಮಾರ್ಥಿಕ ವ್ಯಕ್ತಿಯ ದರ್ಶನ ಇಲ್ಲವೆ ಸ್ವಲ್ಪಮಟ್ಟಿಗೆ ಸಹವಾಸ. ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಅನುಕೂಲ. ರೋಹಿಣಿಯ ಕೊನೆಯ ೩ ಮತ್ತು ಮೃಗಾದ ೧ನೇ ಚರಣಕ್ಕೆ ತೊಂದರೆ ಕಡಮೆ. ತಾ. ೧೨, ೧೩, ೧೪, ೧೫, ಅನುಕೂಲ.

ಮಿಥುನ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಉತ್ತಮ ಆದರೆ ಮಕ್ಕಳಲ್ಲಿ ಕೆಲವರಿಗೆ ಕ್ಲೇಶ. ಬಹುತರ ವಿಷಯಗಳಲ್ಲಿ ಪ್ರಾಪಂಚಿಕ ಸುಖದ ತಕರಾರು ಇದ್ದೀತು. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಬೇಕಾಗಿ ದೊರೆತ ಆ ನೀರಿನಂತೆ ಹಣದ ಸೋರಿಯಾಗುವದರಿಂದ ರೂಪಾಯಿ ಎರಡು ರೂಪಾಯಿಗಳಿಗೂ ಕೊರತೆಯಾಗುವ ಸರತಿ. ನಿಮ್ಮ ಪ್ರಿಯ ಅಕ್ಕರ ಗಣದ ಕೆಲ ಅಪ್ರಿಯ ಅತಿಥಿಗಳು ಬರುವದರಿಂದ ಮನಸ್ಸು ಬೇಜಾರಗೊಳ್ಳುವದು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಪ್ರತ್ಯಕ್ಷ ಲಾಭಕ್ಕಿಂತ ಕಾಲ್ಪನಿಕ ಯಶವೆ ಹೆಚ್ಚು. ಮಿತ್ರರು ಉಪಕಾರದ ಹೆಸರಿನಲ್ಲಿ ಬೇಕಂತಲೇ ಇಲ್ಲವೆ ತಿಳಿಯದಲೆ ಅಪಕಾರಮಾಡುವ ಅಂಜಿಕೆ. ಪ್ರತಿಷ್ಠೆ ಅನುಕೂಲ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರವೂ ಅನುಕೂಲ. ಆರಿದ್ರದ ಕೊನೆಯ ೩ ಮತ್ತು ಪುನರ್ವಸುವಿನ ಮೊದಲನೆ ೩ ಚರಣಕ್ಕೆ ತೊಂದರೆ ಕಡಮೆ. ತಾ. ೧೫, ೧೬, ೧೭ ಅನುಕೂಲ.

ಕರ್ಕ

ಪ್ರಕೃತಿಗೆ ಸ್ವಲ್ಪ ಕ್ಲೇಶ. ಹೆಂಡತಿ ಗೂಡ ಮೇಲಿಂದಮೇಲೆ ತಕರಾರಿನ ಪ್ರಸಂಗ. ನೆರೆಯವರೊಡನೆ ವಿರೋಧ. ಇತರ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಸಾಧಾರಣ ಅನುಕೂಲ. ಸ್ಥಾವರದಲ್ಲಿ ಸ್ವಲ್ಪ ಹೆಚ್ಚು. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಕಡಮೆಯೆ. ಆದರೆ ಲಾಭ ಉತ್ತಮ. ಮಿತ್ರ ಸುಖ ಉತ್ತಮ ಪ್ರಸಿದ್ಧ ಕಲಾಕುಶಲರ ಸಹವಾಸವಾಗುವ ಯೋಗ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಅನುಕೂಲ. ಪುಷ್ಯದ ಕೊನೆಯ ೩ ಮತ್ತು ಆಶ್ಲೇಷಾದ ೧ನೇ ಚರಣಕ್ಕೆ ತೊಂದರೆ ಕಡಮೆ. ತಾ. ೧೨, ೧೩, ೧೭ ಅನುಕೂಲ.

ಸಿಂಹ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿಗೆ ಆಗಾಗ ತೊಂದರೆ. ಅಲ್ಲದೆ ಮನೆಯಲ್ಲಿಯ ಕಲಹ ಇಲ್ಲವೆ ಅಡಚಣಿಯಿಂದ ಉಭಯತರ ಮನಸ್ಸು ಉದಾಸೀನ. ಆದರೆ ಮಕ್ಕಳಲ್ಲಿ ಒಬ್ಬರು ಪ್ರಶಂಸನೀಯ ಉತ್ಕರ್ಷಹೊಂದುವರು. ಮಿತ್ರರು ಕುಚೇಷ್ಟೆಯಿಂದ ವರ್ತಿಸುವರು. ಉದ್ಯೋಗದಲ್ಲಿ ಪ್ರಗತಿ ಕಡಿಮೆ. ಲಾಭ ಸಾಧಾರಣವೆ. ಆದರೆ ಪ್ರತಿಷ್ಠೆ ಉತ್ತಮ ವೆಚ್ಚ ಬಹಳಾದರೆ ಅದರಲ್ಲಿಯ ಹೇತು ಬಹಳ ಸಾಧ್ಯ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಟ್ಟುವದು. ಪ್ರವಾಸ ಮತ್ತು ಪತ್ರವ್ಯವಹಾರ ಅತಿ ತೊಂದರೆಯದು. ಆದರೆ ಭೆಟ್ಟಿಯ ಕೆಲಸ ಯಶಸ್ವಿ. ಮಘಾದ ಕೊನೆಯ ೩ ಮತ್ತು ಪೂರ್ವಾದ ೧ ನೇ ಚರಣಕ್ಕೆ ತೊಂದರೆ ಕಡಿಮೆ. ತಾ. ೧೨-೧೩-೧೪-೧೫ ಅನುಕೂಲ.

ಕನ್ಯಾ

ನಿಮ್ಮ ಪ್ರಕೃತಿ ಅನುಕೂಲ. ಆದರೆ ಹೆಂಡತಿಯದು ಸ್ವಲ್ಪ ಮತ್ತು ಮಕ್ಕಳದು ಬಹಳ ಕೆಡುವ ಸಂಭವ. ಕೌಟುಂಬಿಕ ಉತ್ಕರ್ಷದ ಬಹಳ ಘಟನೆಗಳು ನಡೆದರೂ ಪ್ರತ್ಯಕ್ಷ ಪ್ರಾಪಂಚಿಕ ಸುಖ ಕಡಿಮೆಯೆ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭವೂ ಉತ್ತಮ. ಮಿತ್ರತ್ವದಲ್ಲಿ ಸ್ವಲ್ಪ ವಿರೋಧ. ಸ್ತ್ರೀಯರಲ್ಲಿ ವಿಶೇಷ ಆದರ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಪ್ರವಾಸಾದಿ ಕೆಲಸ ಹಿತದ್ದು. ಹಸ್ತಾದ ಕೊನೆಯ ೩ ಮತ್ತು ಚಿತ್ರಾದ ೧ ನೇ ಚರಣಕ್ಕೆ ತೊಂದರೆ ಕಡಿಮೆ. ತಾ. ೧೩-೧೪-೧೫-೧೬ ಅನುಕೂಲ.

ತುಲಾ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿಗೆ ಒಂದೇ ಸಮನೆ ಕ್ಲೇಶ. ಪ್ರಾಪಂಚಿಕ ಸುಖದಲ್ಲಿ ಬಹಳ ವಿರಸ. ಮಕ್ಕಳು ಅಪ್ರಿಯರಾಗಿ ವರ್ತಿಸುವರು. ಮಿತ್ರರು ವರಿಷ್ಠರು ಇಲ್ಲವೆ ಆಶ್ರಯದಾತರು ಬೇಸರಗೊಳ್ಳುವರು. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಬಹಳ ಕಡಿಮೆ. ಹಾಗು ಪ್ರತಿಷ್ಠೆ ಕುಂದುತ್ತ ಹೋಗುವದು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಟ್ಟುವದು. ಆದರೆ ಶತ್ರುಗಳು ಪರಭಾರೆ ಬಹಳ ಹಾನಿಗೊಳ್ಳುವರು. ಸ್ವಲ್ಪ ಅವಚಿತ ಲಾಭ. ಪ್ರವಾಸಾದಿ ಕೆಲಸ ಬಹಳ ತೊಂದರೆಯದು. ಆದರೆ ಸ್ವಾತಿಯ ಕೊನೆಯ ೩ ಮತ್ತು ವಿಶಾಖಾದ ೧ ನೇ ಚರಣಕ್ಕೆ ತೊಂದರೆ ಕಡಿಮೆ. ತಾ. ೧೩—೧೫—೧೬ ಅನುಕೂಲ.

ವೃಶ್ಚಿಕ

ಪ್ರಕೃತಿ ಸಾಧಾರಣವೆ. ಆದರೆ ಹೆಂಡತಿ ಮತ್ತು ಪ್ರಾಪಂಚಿಕ ಸುಖ ಉತ್ತಮ. ಬಂಧು ವರ್ಗದವರಲ್ಲಿಒಬ್ಬರಿಂದ ಅತಿ ಆದರದಆದರೆಇನ್ನೊಬ್ಬರಿಂದ ಅಷ್ಟೇಅನಾದರದ ವರ್ತನ. ಉದ್ಯೋಗದಲ್ಲಿಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಐಷಆರಾಮದ ವಸ್ತು ತೆಗೆದುಕೊಳ್ಳುವದರಲ್ಲಿ ಬಹಳ ವೆಚ್ಚ. ಮಿತ್ರರಿಂದ ನಿಂದೆ ಇಲ್ಲವೆ ಅಪಪ್ರಚಾರ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ಯಶಸ್ಸು. ಮನೆತನದಲ್ಲಿ ನಿಮ್ಮ ಪ್ರಭುತ್ವವನ್ನು ಹೆಚ್ಚಿಸುವಂತಹ ಒಂದು ಸಂಗತಿ. ಒಮ್ಮಿಲೆ ಸಂಭವಿಸುವ ಯೋಗ. ಸ್ವಲ್ಪ ಅವಚಿತಲಾಭ, ಭೆಟ್ಟಿ ಮತ್ತು ಪ್ರವಾಸಕ್ಕಿಂತ ಪತ್ರವ್ಯವಹಾರ ಉತ್ತಮ. ಅನುರಾಧದ ಕೊನೆಯ ೩ ಮತ್ತು ಜೇಷ್ಠದ ೧ ನೇ ಚರಣಕ್ಕೆ ಹೆಚ್ಚು ಅನುಕೂಲ. ತಾ. ೧೨, ೧೩, ೧೪, ೧೮ ಅನುಕೂಲ.

ಧನು

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಅನುಕೂಲ. ಆದರೆ ಮಕ್ಕಳಲ್ಲಿ ಕೆಲ ಜನರಿಗೆ ಕ್ಲೇಶ. ಪ್ರಾಪಂಚಿಕ ತೊಂದರೆ ವಿಪರೀತ. ಮಿತ್ರತ್ವದಲ್ಲಿ ವಿರೋಧ ಮತ್ತು ಮಿತ್ರರಲ್ಲಿ ಒಬ್ಬರಿಂದ ನಿಮ್ಮ ಮೇಲೆ ಅನೈತಿಕ ಇಲ್ಲವೆ ಅಸಭ್ಯತ್ವದ ಆರೋಪ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ. ಕೆಲವರಿಗೆ ಅನುಕೂಲ ಆದರೆ ಲಾಭ ಬಹಳ ಕಡಮೆ. ಸ್ತ್ರೀಯರಲ್ಲಿ ನಿಮ್ಮ ವಿಷಯಕ್ಕೆ ಬಹಳ ತಿಂತು ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅವರದು ಹೆಚ್ಚು ಜೋರು. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರ ವ್ಯವಹಾರ ಅನುಕೂಲ. ಮೂಲಾದ ಕೊನೆಯ ೩ ಮತ್ತು ಪೂರ್ವಾಷಾಢಾದ ೧ನೇ ಚರಣಕ್ಕೆ ತೊಂದರೆ ಕಡಮೆ. ತಾ. ೧೪, ೧೫, ೧೬ ಅನುಕೂಲ.

ಮಕರ

ನಿಮ್ಮ ಪ್ರಕೃತಿ ಸಾಧಾರಣವೆ. ಆದರೆ ಹೆಂಡತಿಯದು ಉತ್ತಮ. ಮಕ್ಕಳಲ್ಲಿ ಕೆಲ ಜನರವಿಶೇಷ ಉನ್ನತಿ. ಪ್ರಾಪಂಚಿಕ ಸುಖ ಸಾಮಾನ್ಯವೆ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಸಾಮಾನ್ಯ. ಆದರೆ ವೆಚ್ಚ ಹೆಚ್ಚು ಮತ್ತು ಪ್ರತಿಯೊಂದು ಕೆಲಸದಲ್ಲಿ ಅತಿಶಯ ತೊಂದರೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ. ಮಿತ್ರಸುಖ ಅನುಕೂಲ. ಆದರೆ ಅದರಲ್ಲಿ ಒಬ್ಬರ ಸ್ಥಳಾಂತರದಿಂದ ವಿರಹ ಪ್ರವಾಸಾದಿಕೆಲಸ ಸಾಮಾನ್ಯವೇ. ಶ್ರವಣದ ಕೊನೆಯ ೩ ಮತ್ತು ಧನಿಷ್ಠಾದ ೧ ನೇ ಚರಣಕ್ಕೆ ತೊಂದರೆ ಕಡಮೆ. ತಾ. ೧೩, ೧೪, ೧೭, ೧೮ ಅನುಕೂಲ.

ಕುಂಭ

ಪ್ರಕೃತಿ ಸಾಧಾರಣವೆ ಆದರೆ ಹೆಂಡತಿ ಮತ್ತು ಪ್ರಾಪಂಚಿಕ ಸುಖ ಉತ್ತಮ ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆಗಿಂತ ಲಾಭ ಉತ್ತಮ. ಮಿತ್ರ ಸುಖ ಉತ್ತಮ ಸ್ಥಾವರದಲ್ಲಿ ಹೆಚ್ಚಳ ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿಬಹಳ ಯಶಸ್ಸು. ಅಲ್ಲದೆ ಶತ್ರುಗಳದೂ ಪರಭಾರೆ ಸ್ವಲ್ಪ ಹಾನಿ. ಸಾಹಸದ ಕೆಲ ಕೃತ್ಯಗಳು ಕೆಲವೊಂದು ಧಾರ್ಮಿಕ ಇಲ್ಲವೆ ಮಂಗಳ ಕಾರ್ಯ. ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಅನುಕೂಲ. ಶತತಾರಿಕೆಯ ಕೊನೆಯ ೩ ಮತ್ತು ಪೂರ್ವಾಭಾದ್ರಪದದ ೧ ನೇ ಚರಣಕ್ಕೆತೊಂದರೆ ಕಡಮೆ. ತಾ. ೧೩ ೧೪, ೧೫, ೧೬, ಅನುಕೂಲ.

ಮೀನ

ಪ್ರಕೃತಿ ಮತ್ತು ಸ್ತ್ರೀಸುಖ ಉತ್ತಮ ಆದರೆ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಕಡಮೆ ಮಕ್ಕಳಿಂದ ಅಪ್ರಿಯ ಕೃತ್ಯಗಳು ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಸಾಧಾರಣವೆ. ಆದರೆ ಪ್ರತಿಷ್ಠೆ ಉತ್ತಮ. ದೊಡ್ಡವರ ಭೆಟ್ಟಿ ಸಹವಾಸ ಮತ್ತು ಅವರಿಂದ ಗೌರವ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಿಗೆ ಮಾನ್ಯವಾಗುವ ಒಡಂಬಡಿಕೆ. ಇಲ್ಲ ಎನ್ನುವದಕ್ಕಿಂತ ಒಳ್ಳೆ ಅನುಕೂಲತೆ ಪ್ರವಾಸ ತೊಂದರೆಯದು ಆದರೆ ಭೆಟ್ಟಿ ಮತ್ತು ಪತ್ರವ್ಯವಹಾರ ಉತ್ತಮ ಮತ್ತು ಭಾದ್ರಪದದ ಕೊನೆಯ ೩ ಮತ್ತು ರೇವತಿಯ ೧ ನೇ ಚರಣಕ್ಕೆ ತೊಂದರೆ ಕಡಮೆ. ತಾ. ೧೨, ೧೩, ೧೪, ೧೭ ಅನುಕೂಲ.

ಲೇಖಕರಿಗೆ ಸೂಚನೆ

ಅಂಚೆ ಚೀಟಿ ಲೇಖನದ ಜೊತೆಗೇ ಬಂದರೆ, ಕೂಡಲೆ ಸ್ವೀಕೃತ ಅಸ್ವೀಕೃತವೆಂಬುದನ್ನು ತಿಳಿಸಲಾಗುವುದು. ಅಂಚೆ ಚೀಟಿಯಿಲ್ಲದೆ ಕಳುಹಿದರೆ ಅಥವಾ ಅದನ್ನೂ ಲೇಖನವನ್ನೂ ಬೇರೆ ಬೇರೆ ಕಾಲಗಳಲ್ಲಿ ಕಳುಹಿದರೆ, ಅಸ್ವೀಕೃತ ಲೇಖನವನ್ನು ಲೇಖಕರಿಗೆ ತಿರುಗಿ ಕಳುಹಲು ಸಾಧ್ಯವಾಗುವುದಿಲ್ಲ; ಸ್ವೀಕಾರವಾದರೆ ಅಂದಿನಿಂದ ೨ ತಿಂಗಳ ಅವಧಿಯೊಳಗೆ ಬಹುಪಕ್ಷ ಅದನ್ನು ಪ್ರಕಟಿಸಲಾದೀತು. ಉತ್ತಮ ಪಾಂಡಿತ್ಯಪೂರ್ಣ ಮತ್ತು ಪ್ರತಿಭಾನ್ವಿತ ಲೇಖನಗಳಿಗೆ ಯಥಾವಿಧಿ ದ್ರವ್ಯರೂಪದ ಮರ್ಯಾದೆಯನ್ನು ಸಲ್ಲಿಸುವ ರೂಢಿ ನಡೆದೇ ಇದೆ ಎಂಬುದನ್ನು ಇಲ್ಲಿ ಹೇಳದಿರಲಾರೆವು. ವಿದ್ವಾಂಸರಾದ ಲೇಖಕರು ಇತ್ತ ಲಕ್ಷ್ಯ ಕೊಡುವರಾಗಿ ನಂಬುತ್ತೇವೆ.

—ವ್ಯವಸ್ಥಾಪಕ,
'ಕರ್ಮವೀರ'

ಈ ಪತ್ರಿಕೆಯು ಹುಬ್ಬಳ್ಳಿಯ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ "ಲೋಕಶಿಕ್ಷಣ ಟ್ರಸ್ಟಿನ" ಪರವಾಗಿ ಹ. ರಾ. ಮೊಹರೆಯವರಿಂದ ಮುದ್ರಿಸಿ ಪ್ರಕಟವಾಯಿತು.